ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಮುಂಬೈನ ವಾಂಖೆಡೆ ಮೈದಾನದಲ್ಲಿ ಸೋಮವಾರ ನಡೆದ ಐಪಿಎಲ್ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಗೆಲುವು ಸಾಧಿಸಿ ಸಂಭ್ರಮಿಸಿದ ಕ್ಷಣ...

05 ಮೇ 2026 ಮಂಗಳವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 55 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629


ಅರಬ್ ಮಣ್ಣಿನಲ್ಲಿ ಅರಳಿದ ಭಾರತೀಯ ಮಾಧುರ್ಯ » 2


ವಿದ್ಯುತ್ ಅವ್ಯವಸ್ಥೆ : ಅನ್ನದಾತರ ಪ್ರತಿಭಟನೆ » 3


ಶೋಅಪ್ ಬಿಟ್ಟು ಜಿಲ್ಲಾಧಿಕಾರಿ ಕೆಲಸ ಮಾಡಲಿ » 4

# ಬಿಜೆಪಿ ತೆಕ್ಕೆಗೆ ಪಶ್ಚಿಮ ಬಂಗಾಳ- ತಮಿಳುನಾಡಿನಲ್ಲಿ ವಿಜಯ್ ಪ್ರಭುತ್ವ





ಪಶ್ಚಿಮ ಬಂಗಾಳ | ಕೇರಳ | ಅಸ್ಸಾಂ | ತಮಿಳುನಾಡು

- ಅಸ್ಸಾಂನಲ್ಲೂ ಮತ್ತೆ ಬಿಜೆಪಿಗೆ ಅಧಿಕಾರ
- ಎನ್‌ಡಿಎಗೆ ದಕ್ಕಿದ ಪುದುಚೆರಿ
- ಕೇರಳದಲ್ಲಿ ಅಧಿಕಾರ ಹಿಡಿದ ಕಾಂಗ್ರೆಸ್

• ಪ್ರಜೋದಯ ವರದಿ

**ನವದೆಹಲಿ :** ಪಶ್ಚಿಮ ಬಂಗಾಳದ ತೀವ್ರ ಜಿದ್ದಾಜಿದ್ದಿನ ರಾಜಕೀಯ ಸೆಣೆಸಾಟದಲ್ಲಿ ಪ್ರಧಾನಿ ನರೇಂದ್ರ ಮೋದಿ-ಅಮಿತ್ ಶಾ ಅವರು ಹೆಣೆದ ಬಿರುಗಾಳಿಗೆ ಮಮತಾ ಬ್ಯಾನರ್ಜಿ ಅವರ ತೃಣಮೂಲ ಕಾಂಗ್ರೆಸ್ ಕೊಚ್ಚಿ ಹೋಗುವುದರೊಂದಿಗೆ ಮೊದಲ ಸಲ ಬಿಜೆಪಿ ಗದ್ದುಗೆಗೆ ಏರಿದೆ. ತಮಿಳುನಾಡಿನಲ್ಲಿ ಚುನಾವಣಾ ಸಮೀಕ್ಷೆಗಳನ್ನು ಹುಸಿಗೊಳಿಸಿದ ನಟ ವಿಜಯ್ ನೇತೃತ್ವದ ಟಿವಿಕೆ ಪ್ರಭುತ್ವ ಸಾಧಿಸಿಕೊಂಡರೆ, ಅಸ್ಸಾಂನಲ್ಲೂ ಬಿಜೆಪಿ ವಿಜಯ ಸಾಧಿಸಿದೆ.

ಕೇಂದ್ರಾಡಳಿತ ಪ್ರದೇಶ ಪುದುಚರಿಯಲ್ಲಿ ಎನ್‌ಡಿಎ ಅಧಿಕಾರಕ್ಕೆ ಬಂದರೆ ಕೇರಳದಲ್ಲಿ ಎಲ್‌ಡಿಎಫ್ ಮಣ್ಣು ಮುಕ್ಕಿಸಿ ಕಾಂಗ್ರೆಸ್ ಸ್ಪಷ್ಟ ಬಹುಮತ ಪಡೆದುಕೊಂಡಿದೆ. ಪಶ್ಚಿಮ ಬಂಗಾಳದಲ್ಲಿ ಎಡ ಪಕ್ಷಗಳ ಪತನದ ನಂತರ ಆ ರಾಜ್ಯವನ್ನು ಮೂರು ಬಾರಿ ಆಳಿದ ಮಮತಾ ಬ್ಯಾನರ್ಜಿ ಅವರು ಬಿಜೆಪಿಯ ತಂತ್ರಗಾರಿಕೆಗೆ ಶರಣಾಗಿದ್ದಾರೆ.

ಕೇರಳದಲ್ಲಿ ಮೂರನೇ ಬಾರಿಗೆ ಅಧಿಕಾರಿ ಹಿಡಿಯುವ ಹಂಬಲದಲ್ಲಿದ್ದ ಪಿಣರಾಯಿ ವಿಜಯನ್ ಅವರಿಗೆ ಆಡಳಿತ ವಿರೋಧ ಅಲೆ ಎದುರಾಗಿದ್ದರಿಂದ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಅಧಿಕಾರಕ್ಕೇರಿದೆ. ಪುದುಚೆರಿಯಲ್ಲಿ ಬಿಜೆಪಿ ಭರ್ಜರಿ ಗೆಲುವು ದಾಖಲಿಸಿ, ಸತತ ಎರಡನೇ ಅವಧಿಗೆ ಅಧಿಕಾರ ಹಿಡಿದಿದೆ. ಅಸ್ಸಾಂನಲ್ಲೂ ಬಿಜೆಪಿ ಹ್ಯಾಟ್ರಿಕ್ ಗೆಲುವು ಸಾಧಿಸುವ ಮೂಲಕ ಶತಕ ಬಾರಿಸಿದೆ.

ತಮಿಳುನಾಡಿನ ವಿಧಾನಸಭಾ ಸಮರದಲ್ಲಿ ನಟ ವಿಜಯ್ ನೇತೃತ್ವದ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷವು ದಶಕಗಳಿಂದ ಡಿಎಂಕೆ ಮತ್ತು ಎಐಎಡಿಎಂಕೆ ನಡುವೆ ಸುತ್ತುತ್ತಿದ್ದ ತಮಿಳು ರಾಜಕಾರಣದಲ್ಲಿ ಯುವಶಕ್ತಿ ಮತ್ತು ಮಹಿಳೆಯರ ಅಭೂತಪೂರ್ವ ಬೆಂಬಲದಿಂದ ಗೆಲುವು ಸಾಧಿಸುವ ಮೂಲಕ ಐತಿಹಾಸಿಕ ದಾಖಲೆ ಬರೆದಿದ್ದಾರೆ.

**ಉರುಳಿದ ಮಮತಾ ಆಡಳಿತ**

ಪಶ್ಚಿಮ ಬಂಗಾಳದ ರಾಜಕೀಯ ಇತಿಹಾಸದಲ್ಲಿ ಬಿಜೆಪಿ ಹೊಸ ಅಧ್ಯಾಯ ಆರಂಭವಾಗಿದೆ. 34 ವರ್ಷಗಳ ಎಡ ಪಂಥೀಯ ಆಡಳಿತವನ್ನು ಅಂತ್ಯಗೊಳಿಸಿದ್ದ ಮಮತಾ ಬ್ಯಾನರ್ಜಿ ಅವರ 15 ವರ್ಷಗಳ ಸುದೀರ್ಘ ಆಡಳಿತಕ್ಕೆ ಈಗ ಬಿಜೆಪಿ ಬ್ರೇಕ್ ಹಾಕಿದೆ.

ಒಟ್ಟು 294 ಕ್ಷೇತ್ರಗಳ ಪೈಕಿ, ಬಿಜೆಪಿ 206 ಸ್ಥಾನಗಳನ್ನು ಗೆದ್ದುಕೊಂಡರೆ, ಟಿಎಂಸಿ ಅಧಿಕಾರ ಕಳೆದುಕೊಂಡು 81 ಸ್ಥಾನಗಳಿಗೆ ಕುಸಿದಿದೆ. ಕಾಂಗ್ರೆಸ್ ಕೇವಲ 2 ಕ್ಷೇತ್ರಗಳಲ್ಲಿ ಮಾತ್ರ ಖಾತೆ ತೆರೆದಿದೆ. ಇತರರು 4 ಸ್ಥಾನ ಗೆದ್ದುಕೊಂಡಿದ್ದಾರೆ. ಸ್ಪಷ್ಟ ಬಹುಮತ ಪಡೆದಿರುವ ಭಾರತೀಯ ಜನತಾ ಪಕ್ಷವು ಪಶ್ಚಿಮ ಬಂಗಾಳದ ಇತಿಹಾಸದಲ್ಲಿ ಮೊದಲ ಬಿಜೆಪಿ ಸರ್ಕಾರ ರಚನೆ ಸಜ್ಜಾಗಿದೆ.

## ಮಮತಾ, ಪಿಣರಾಯಿ, ಸ್ಟಾಲಿನ್‌ಗೆ ಸೋಲು

ನವದೆಹಲಿ : ಪಶ್ಚಿಮ ಬಂಗಾಳ, ಕೇರಳ ಹಾಗು ತಮಿಳುನಾಡು ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಮೂವರು ಹಾಲಿ ಮುಖ್ಯಮಂತ್ರಿಗಳು ಸೋಲುಂಡಿದ್ದಾರೆ. ಪಶ್ಚಿಮ ಬಂಗಾಳದ ಭವಾನಿಪುರ ಕ್ಷೇತ್ರದಿಂದ ಸ್ಪರ್ಧೆ ಮಾಡಿದ್ದ ಹಾಲಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಬಿಜೆಪಿಯ ಭಾವಿ ಮುಖ್ಯಮಂತ್ರಿ ಅಭ್ಯರ್ಥಿ ಸುವೇಂದು ಅಧಿಕಾರಿ ವಿರುದ್ಧ 15 ಸಾವಿರ ಮತಗಳ ಅಂತರದಿಂದ ಪರಾಭವಗೊಂಡಿದ್ದಾರೆ.

ಹಿಂದಿನ ಚುನಾವಣೆಯಲ್ಲಿ ಮಮತಾ ಅವರು ನಂದಿಗ್ರಾಮ ಮತ್ತು ಭವಾನಿಪುರ ಕ್ಷೇತ್ರದಿಂದ ಸ್ಪರ್ಧೆ ಮಾಡಿದ್ದರು. ಭವಾನಿಪುರ ಕ್ಷೇತ್ರವು ಅವರ ಕೈ ಹಿಡಿದಿತ್ತು. ಈ ಸಲದ ಚುನಾವಣೆಯಲ್ಲಿ ಭವಾನಿಪುರ ಕ್ಷೇತ್ರದಿಂದ ಮಾತ್ರ ಸ್ಪರ್ಧೆ ಮಾಡಿದ್ದ ಮಮತಾ ಬ್ಯಾನರ್ಜಿ ಅವರು ಸೋಲುಂಡಿದ್ದಾರೆ.

ಕೇರಳದಲ್ಲಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ತಮಿಳುನಾಡಿನಲ್ಲಿ ಸ್ಟಾಲಿನ್ ಕೂಡ ಪರಾಭವಗೊಂಡಿದ್ದಾರೆ.

ಈ ಬಾರಿ ಬಿಜೆಜೆಪಿಯನ್ನು ಗೆಲ್ಲಿಸಲೇ ಬೇಕೆಂದು ಪ್ರಧಾನಿ ಮೋದಿ ಮತ್ತು ಅಮಿತ್ ಶಾ ಖುದ್ದಾಗಿ ಅಖಾಡಕ್ಕೆ ಇಳಿದಿದ್ದರು. ಕಳೆದ 2 ತಿಂಗಳಲ್ಲಿ ಅನೇಕ ಬಾರಿ ನರೇಂದ್ರ ಮೋದಿ ಬಂಗಾಳಕ್ಕೆ ಆಗಮಿಸಿ ಚುನಾವಣಾ ಪ್ರಚಾರ ನಡೆಸಿದ್ದರು, ಅಮಿತ್ ಶಾ ಬಂಗಾಳದಲ್ಲೇ ಬೀಡು ಬಿಟ್ಟು, ಪಕ್ಷದ ನಾಯಕರಿಗೆ ಸಲಹೆ-ಸೂಚನೆಗಳನ್ನು ನೀಡುತ್ತಾ ಬಂಗಾಳದಲ್ಲಿ ಬಿಜೆಪಿ ಪರ ಅಲೆ ಮೂಡಲು ಸಾಕಷ್ಟು ಶ್ರಮಿಸಿದ್ದರು. ಚುನಾವಣಾ ಪ್ರಚಾರದ ಸಮಯದಲ್ಲಿ, ಪ್ರಧಾನಿ ಮೋದಿ ಹಲವಾರು ಸಾರ್ವಜನಿಕ ರ್‍ಯಾಲಿಗಳನ್ನು ನಡೆಸಿ ರಾಜ್ಯದಲ್ಲಿ ಬದಲಾವಣೆಗೆ ಕರೆ ನೀಡಿದರು. ಬಂಗಾಳದಲ್ಲಿ ಕೇಂದ್ರ ಸರ್ಕಾರದ ಯೋಜನೆಗಳನ್ನು ಜಾರಿಗೆ ತರುವ ಭರವಸೆ ನೀಡಿದರು. ಹಾಗೇ, ಕೇಂದ್ರ ಗೃಹ ಸಚಿವ ಅಮಿತ್ ಶಾ ಸುಮಾರು 15 ದಿನಗಳ ಕಾಲ ಬಂಗಾಳದಲ್ಲಿಯೇ ಇದ್ದು, ರಾಜ್ಯದ ವಿವಿಧ ಪ್ರದೇಶಗಳಲ್ಲಿ ಸಭೆಗಳನ್ನು ನಡೆಸಿ, ಪ್ರತಿ ವಿಧಾನಸಭಾ ಸ್ಥಾನಕ್ಕೆ ಪ್ರತ್ಯೇಕ ಕಾರ್ಯತಂತ್ರ ರೂಪಿಸಿದರು.

ಚುನಾವಣಾ ಫಲಿತಾಂಶದ ಬೆನ್ನಲ್ಲೇ ರಾಜಕೀಯ ಹಿಂಸಾಚಾರ ಭುಗಿಲೆದ್ದಿದ್ದು, ಕೂಚ್ ಬೆಹಾರ್‌ನ ದಿನ್ಹಾಟಾದಲ್ಲಿ ಬಿಜೆಪಿ ಮತ್ತು ಟಿಎಂಸಿ ಕಾರ್ಯಕರ್ತರ ನಡುವೆ ಘರ್ಷಣೆ ಸಂಭವಿಸಿದೆ. ಹೀಗಾಗಿ ಕೇಂದ್ರ ಪಡೆಗಳ ಸಿಬ್ಬಂದಿ ಲಾಠಿ ಚಾರ್ಜ್ ನಡೆಸಿದರು.

## ಬಿಜೆಪಿ ಆಡಳಿತ : ಬಾಂಗ್ಲಾದಲ್ಲಿ ಕಳವಳ

ನವದೆಹಲಿ : ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದದ್ದು ತೃಣಮೂಲ ಕಾಂಗ್ರೆಸ್ ಹಾಗು ಆ ಪಕ್ಷದ ಅನುಯಾಯಿಗಳಿಗಿಂತಲೂ ನೆರೆಯ ಬಾಂಗ್ಲಾ ದೇಶದಲ್ಲಿ ಹೆಚ್ಚು ಆತಂಕವನ್ನು ಸೃಷ್ಟಿ ಮಾಡಿದೆ.

ಚುನಾವಣೋತ್ತರ ಮಾಧ್ಯಮಗಳ ಸಮೀಕ್ಷೆಯನ್ನು ಆಧರಿಸಿ ಪಶ್ಚಿಮ ಬಂಗಾಳದಲ್ಲಿ ಒಂದು ವೇಳೆ ಬಿಜೆಪಿ ಅಧಿಕಾರಕ್ಕೆ ಬಂದರೆ ಬಾಂಗ್ಲಾದಿಂದ ವಲಸೆ ಹೋಗಿ ಪಶ್ಚಿಮ ಬಂಗಾಳದಲ್ಲಿ ನೆಲೆಸಿರುವ ಜನರ ಪರಿಸ್ಥಿತಿ ಏನಾಗಬಹುದೆಂಬ ಚರ್ಚೆ ನಡೆಯುತ್ತಿದೆ.

ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಗೂ ಮೊದಲು ಕೇಂದ್ರ ಸರ್ಕಾರವು ಅಕ್ರಮ ಮತದಾರರ ಪಟ್ಟಿಯ ವಿರುದ್ಧ ಕ್ರಮಕ್ಕೆ ಮುಂದಾಗಿ ಮತದಾರರ ಪಟ್ಟಿ ಪರಿಷ್ಕರಣೆ ಪರಿಣಾಮ ಲಕ್ಷಾಂತರ ಜನರು ಮತದಾನದಿಂದ ಹೊರಗೆ ಉಳಿಯುವಂತಾದದ್ದಲ್ಲದೆ, ಒಂದು ವೇಳೆ ಬಿಜೆಪಿ ಅಧಿಕಾರಕ್ಕೆ ಬಂದರೆ ಅಂತಹ ವಲಸಿಗರನ್ನು ಗುರುತಿಸಿ ಆ ರಾಜ್ಯದಿಂದ ಹೊರ ದಬ್ಬಬಹುದೆಂಬ ಅಭಿಪ್ರಾಯವು ಬಾಂಗ್ಲಾದೇಶದಲ್ಲಿ ಹೆಚ್ಚು ಚರ್ಚೆಗೆ ಎಡೆ ಮಾಡಿದೆ.

ಮೂರು ದಿನಗಳ ಹಿಂದೆ ಬಾಂಗ್ಲಾ ಸಂಸತ್‌ನಲ್ಲೂ ಈ ವಿಚಾರ ಚರ್ಚೆಗೆ ಬಂದಿದೆ. ಅಲ್ಲಿನ ಆಡಳಿತ ರೂಢ ಪಕ್ಷದ ಸಂಸದರೇ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವ ಸುಳಿವುಗಳಿವೆ. ಅದು ನಿಜವಾದರೆ ನಮ್ಮ ಬಾಂಗ್ಲಾದಿಂದ ಪಶ್ಚಿಮ ಬಂಗಾಳಕ್ಕೆ ಹೋಗಿರುವ ಜನರನ್ನು ನಮ್ಮೆಡೆಗೆ ದಬ್ಬಲಿದ್ದಾರೆ. ಅಲ್ಲಿನ ಸಂತ್ರಸ್ತರಿಗೆ ನಾವು ಹೇಗೆ ವ್ಯವಸ್ಥೆ ಕಲ್ಪಿಸಬೇಕು. ಅವರಿಗೆ ಪುನರ್ ವಸತಿ ಕಲ್ಪಿಸುವುದು ಹೇಗೆ ಎಂಬ ವಿಚಾರವನ್ನು ಸಂಸತ್ ಮುಂದೆ ಇಟ್ಟದ್ದು ಭಾರತದ ಮಾಧ್ಯಮಗಳಲ್ಲಿ ಬಿತ್ತರಗೊಂಡಿದೆ.

## ಎಲ್‌ಡಿಎಫ್ ಧೂಳೀಪಟ : ಕಾಂಗ್ರೆಸ್‌ಗೆ ಭರ್ಜರಿ ಬಹುಮತ

### ಕೇರಳದಲ್ಲಿ ಮೂರು ಸ್ಥಾನ ದಕ್ಕಿಸಿಕೊಂಡ ಬಿಜೆಪಿ

• ಪ್ರಜೋದಯ ವರದಿ

ನವದೆಹಲಿ: ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್ (ಯುಡಿಎಫ್) ಭರ್ಜರಿ ಜಯ ದಾಖಲಿಸಿದೆ. ಪಿಣರಾಯಿ ವಿಜಯನ್ ನೇತೃತ್ವದ ಎಲ್‌ಡಿಎಫ್ ಆಡಳಿತಕ್ಕೆ ಅಂತ್ಯ ಹಾಡಿರುವ ಯುಡಿಎಫ್ 10 ವರ್ಷದ ಬಳಿಕ ಮತ್ತೆ ಅಧಿಕಾರ ಹಿಡಿಯುವಲ್ಲಿ ಯಶಸ್ವಿಯಾಗಿದೆ.

ಎಡ ಪಕ್ಷಗಳನ್ನೊಳಗೊಂಡ ಎಲ್‌ಡಿಎಫ್ ಮತ್ತು ಕಾಂಗ್ರೆಸ್ ನೇತೃತ್ವದ ಯುಡಿಎಫ್ ನಡುವಿನ ಜಿದ್ದಾಜಿದ್ದಿಯ ರಾಜಕಾರಣವನ್ನು ಮೆಟ್ಟಿನಿಂತು ಈ ಚುನಾವಣೆಯಲ್ಲಿ ಬಿಜೆಪಿ ಮೂರು ಸ್ಥಾನಗಳನ್ನು ಗೆದ್ದುಕೊಂಡಿರುವುದು ವಿಶೇಷ. ಒಟ್ಟು 140 ವಿಧಾನಸಭಾ ಕ್ಷೇತ್ರಗಳ ಪೈಕಿ ಯುಡಿಎಫ್ 102 ಸ್ಥಾನಗಳಲ್ಲಿ ಗೆಲುವು ಸಾಧಿಸಿ, ಸ್ಪಷ್ಟ ಬಹುಮತ ಪಡೆದಿದೆ. ಆಡಳಿತರೂಢ ಎಲ್‌ಡಿಎಫ್ ಕೇವಲ 35 ಸ್ಥಾನಗಳಿಗೆ ತೃಪ್ತಿಪಟ್ಟುಕೊಳ್ಳುವಂತಾಗಿದೆ. ಇದೇ ಮೊದಲ ಬಾರಿಗೆ ಬಿಜೆಪಿ ಮೂರು ವಿಧಾನಸಭಾ ಕ್ಷೇತ್ರಗಳಲ್ಲಿ ಜಯಭೇರಿ ಬಾರಿಸುವ ಮೂಲಕ ಇತಿಹಾಸ ನಿರ್ಮಿಸಿದೆ. ಕೇರಳದ ಬಿಜೆಪಿ ರಾಜ್ಯಾಧ್ಯಕ್ಷ ರಾಜೀವ್ ಚಂದ್ರಶೇಖರ್, ಮಾಜಿ ಕೇಂದ್ರ ಸಚಿವ ಮುರಳೀಧರನ್ ಹಾಗು ಬಿ.ಬಿ. ಗೋಪಕುಮಾರ್ ಜಯಗಳಿಸಿದ್ದಾರೆ.

| |
|---|
| ಒಟ್ಟು ಸ್ಥಾನ: 140 |
| ಮ್ಯಾಜಿಕ್ ನಂಬರ್-71 |
| ಯುಡಿಎಫ್-102 |
| ಎಲ್‌ಡಿಎಫ್ -35 |
| ಬಿಜೆಪಿ-3 |
| 2021ರ ಫಲಿತಾಂಶ |
| ಎಲ್‌ಡಿಎಫ್-94 |
| ಯುಡಿಎಫ್-40 |
| ಇತರೆ-6 |

ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ನೇತೃತ್ವದ ಎಡರಂಗ ಮೈತ್ರಿಕೂಟಕ್ಕೆ ಆಡಳಿತ ವಿರೋಧಿ ಅಲೆ ತೀವ್ರವಾಗಿ ತಟ್ಟಿದೆ. ಕೇರಳದಲ್ಲಿ ಪ್ರತಿ ಐದು ವರ್ಷಕ್ಕೊಮ್ಮೆ ಅಧಿಕಾರ ಬದಲಾಗುವ ಸಂಪ್ರದಾಯವನ್ನು ಈ ಫಲಿತಾಂಶ ಮತ್ತೆ ನೆನಪಿಸಿದೆ. ಕಾಂಗ್ರೆಸ್ ಮೈತ್ರಿಕೂಟದ ಸಂಘಟಿತ ಹೋರಾಟ ಮತ್ತು ಜನಕಲ್ಯಾಣ ಯೋಜನೆಗಳ ಭರವಸೆಗಳು ಜನರನ್ನು ಸೆಳೆಯುವಲ್ಲಿ ಯಶಸ್ವಿಯಾಗಿವೆ. ಮಾಜಿ ಮುಖ್ಯಮಂತ್ರಿ ದಿವಂಗತ ಉಮನ್ ಚಾಂಡಿ ಅವರ ಪುತ್ರ ಚಾಂಡಿ ಉಮನ್ ಅವರು ಪುತುಪಳ್ಳಿಯಲ್ಲಿ ಸುಮಾರು 52,907 ಮತಗಳ ಭಾರೀ ಅಂತರದಿಂದ ಜಯಗಳಿಸಿದ್ದಾರೆ. ಹರಿಪಾಡ್ ಕ್ಷೇತ್ರದಲ್ಲಿ ರಮೇಶ್ ಚೆನ್ನಿತ್ತಲ 23,000ಕ್ಕೂ ಹೆಚ್ಚು ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ.

## ಪುದುಚೆರಿ: ಎನ್‌ಡಿಎಗೆ 2ನೇ ಬಾರಿ ಅಧಿಕಾರ

• ಪ್ರಜೋದಯ ವರದಿ



**ನವದೆಹಲಿ:** ಪುದುಚೆರಿ ವಿಧಾನ ಸಭಾ ಚುನಾವಣೆಯಲ್ಲಿ ಆಲ್ ಇಂಡಿಯಾ ಎನ್‌ಆರ್ ಕಾಂಗ್ರೆಸ್ (ಎಐಎನ್‌ಆರ್‌ಸಿ) ನೇತೃತ್ವದ ರಾಷ್ಟ್ರೀಯ ಪ್ರಜಾ ಸತ್ತಾತ್ಮಕ ಒಕ್ಕೂಟ (ಎನ್‌ಡಿಎ) ಭರ್ಜರಿ ಗೆಲುವು ದಾಖಲಿಸಿದೆ. ಆ ಮೂಲಕ ಸತತ ಎರಡನೇ ಅವಧಿಗೆ ಅಧಿಕಾರ ಹಿಡಿಯುವಲ್ಲಿ ಯಶಸ್ವಿಯಾಗಿದೆ.

30 ಸ್ಥಾನಗಳ ಪೈಕಿ ಎನ್‌ಡಿಎ 17, ಕಾಂಗ್ರೆಸ್ 8, ಇತರೆ- 5 ಸ್ಥಾನಗಳನ್ನು ಪಡೆದುಕೊಂಡಿವೆ. ತಟ್ಟಂಡವಾಡಿ ಕ್ಷೇತ್ರ ದಿಂದ ಸ್ಪರ್ಧಿಸಿದ್ದ ಮುಖ್ಯಮಂತ್ರಿ ಎನ್.ರಂಗಸ್ವಾಮಿ ಅವರು ವಿಜೇತರಾಗಿ ಅವರು 4,441 ಮತಗಳಿಂದ ತಟ್ಟಂಚವಾಡಿ ಕ್ಷೇತ್ರದಿಂದ ಗೆಲುವು ಸಾಧಿಸಿದ್ದಾರೆ. ಹಿರಿಯ ಕಾಂಗ್ರೆಸ್ ನಾಯಕರಲ್ಲಿ ಒಬ್ಬರಾಗಿರುವ ವಿ.ವೈತಿಲಿಂಗಂ ಅವರು ಹೀನಾಯ ಸೋಲು ಅನುಭವಿಸಿದ್ದಾರೆ. ಇದು ಕಾಂಗ್ರೆಸ್ ಪಕ್ಷದ ಕಳಪೆ ಪ್ರದರ್ಶನಕ್ಕೆ ಹಿಡಿದ ಕೈಗನ್ನಡಿ ಯಾಗಿದೆ. ಅರಿಯನ್ನುಪ್ಪಂ ಕ್ಷೇತ್ರದಿಂದ ಸ್ಪರ್ಧಿಸಿದ್ದ ಕಾಂಗ್ರೆಸ್‌ನ ವಿಜಯಲಕ್ಷ್ಮಿ ಡಿ.ಜೆ. ಮೂರ್ತಿ ವಿರುದ್ಧ ಪಕ್ಷದ ಸಿ.ಅಯ್ಯಪ್ಪನ್ ಅವರು ಅಮೋಘ ಗೆಲುವು ದಾಖಲಿಸಿದ್ದಾರೆ. ಕಾರೈಕಲ್ ಉತ್ತರ ಕ್ಷೇತ್ರದಿಂದ ಸ್ಪರ್ಧಿಸಿದ್ದ ಕಾಂಗ್ರೆಸ್‌ನ ಎ.ಎಂ.ರಂಜಿತ್ ಅವರ ವಿರುದ್ಧ ಪಿ.ಆರ್.ಎನ್. ತಿರುಮುಗನ್ ಅವರು ಗೆಲುವು ದಾಖಲಿಸಿದ್ದಾರೆ. ಇದರ ಜೊತೆಗೆ ಮಾಹೆ ವಿಧಾನ ಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ಕಾಂಗ್ರೆಸ್‌ನ ರಮೇಶ್ ಪರಂಬತ್ ವಿರುದ್ಧ ಪಕ್ಷೇತರ ಅಭ್ಯರ್ಥಿ ಟಿ.ಅಶೋಕ್ ಕುಮಾರ್ ಗೆಲುವು ದಾಖಲಿಸಿದ್ದಾರೆ.

| |
|---|
| ಒಟ್ಟು ಸ್ಥಾನ-30 |
| ಮ್ಯಾಜಿಕ್ ನಂಬರ್-16 |
| ಎನ್‌ಡಿಎ 17 |
| ಕಾಂಗ್ರೆಸ್ 8 |
| ಇತರೆ-5 |
| 2021ರ ಫಲಿತಾಂಶ |
| ಎನ್‌ಡಿಎ 16 |
| ಕಾಂಗ್ರೆಸ್ 8 |
| ಇತರೆ-6 |

## ದ್ರಾವಿಡ ಪಕ್ಷಗಳ ಪ್ರಾಬಲ್ಯ ಮುರಿದ ವಿಜಯ್

### ಹಾಲಿ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಸೋಲು

• ಪ್ರಜೋದಯ ವರದಿ

**ನವದೆಹಲಿ:** ತಮಿಳುನಾಡು ರಾಜಕೀಯದಲ್ಲಿ ದ್ರಾವಿಡ ಪಕ್ಷಗಳ ದಶಕಗಳ ಪ್ರಾಬಲ್ಯವನ್ನು ಮುರಿದ ನಟ ವಿಜಯ್ ನೇತೃತ್ವದ ತಮಿಳಗಾ ವೆಟ್ರಿ ಕಲಗಂ (ಟಿವಿಕೆ) ತನ್ನ ಮೊದಲ ಚುನಾವಣೆಯಲ್ಲಿ ಭರ್ಜರಿ ಸಾಧನೆ ಮಾಡಿದೆ.

ಒಟ್ಟು 234 ವಿಧಾನಸಭಾ ಕ್ಷೇತ್ರಗಳಲ ಪೈಕಿ ಟಿವಿಕೆ-108, ಡಿಎಂಕೆ-74, ಎಡಿಎಂಕೆ-52 ಸ್ಥಾನಗಳಲ್ಲಿ ಗೆಲುವು ದಾಖಲಿಸಿವೆ. ಹಾಲಿ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಉತ್ತರ ಚೆನ್ನೈನ ಕೊಳತ್ತೂರು ಕ್ಷೇತ್ರದಲ್ಲಿ ಟಿವಿಕೆ ಅಭ್ಯರ್ಥಿ ವಿ.ಎಸ್.ಬಾಬು ವಿರುದ್ಧ ಸೋಲುಂಡಿದ್ದು, ಆಡಳಿತಾರೂಢ ಪಕ್ಷಕ್ಕೆ ನಟ ದಳಪತಿ ವಿಜಯ್ ಭಾರೀ ಹೊಡೆತವನ್ನೇ ನೀಡಿದ್ದಾರೆ. ಬಾಬು ಅವರು 9,000ಕ್ಕೂ ಹೆಚ್ಚು ಮತಗಳ ಅಂತರದಿಂದ ಸ್ಟಾಲಿನ್ ವಿರುದ್ಧ ಜಯ ಸಾಧಿಸಿದ್ದಾರೆ. ಬಾಬು ಅವರಿಗೆ 82,000ಕ್ಕೂ ಹೆಚ್ಚು ಮತಗಳು ಬಂದಿದ್ದರೆ, ಸ್ಟಾಲಿನ್ ಅವರಿಗೆ ಸುಮಾರು 73,000 ಮತಗಳು ಸಿಕ್ಕಿವೆ. ಎಐಎಡಿಎಂಕೆ ಅಭ್ಯರ್ಥಿ ಆರ್. ಸಂತಾನಕೃಷ್ಣನ್ ಸುಮಾರು 14,000 ಮತಗಳೊಂದಿಗೆ ಮೂರನೇ ಸ್ಥಾನದಲ್ಲಿದ್ದಾರೆ.

ಕಳೆದ ಕೆಲವು ವರ್ಷಗಳಿಂದ ಕೊಳತ್ತೂರು ಕ್ಷೇತ್ರ ಡಿಎಂಕೆಯ ಭದ್ರ ಕೋಟೆಯಾಗಿದ್ದು, ಎಂ.ಕೆ.ಸ್ಟಾಲಿನ್ 2011ರಿಂದ ಈ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದರು. 2021ರ ಚುನಾವಣೆಯಲ್ಲಿ ಅವರು ಎಐಎಡಿಎಂಕೆ ಅಭ್ಯರ್ಥಿ ಆದಿ ರಾಜಾರಾಮ್ ವಿರುದ್ಧ 70,000ಕ್ಕೂ ಹೆಚ್ಚು ಮತಗಳಿಂದ ಗೆದ್ದಿದ್ದರು. ಆದರೆ, ಈ ಬಾರಿಯ ಚುನಾವಣಾ ಫಲಿತಾಂಶ ಡಿಎಂಕೆಗೆ ಮರ್ಮಾಘಾತ ಉಂಟುಮಾಡಿದೆ.

ತಮಿಳುನಾಡಿನ ಸುಮಾರು 2.38 ಕೋಟಿ ಯುವ ಮತದಾರರು ಸಾಂಪ್ರದಾಯಿಕ ದ್ರಾವಿಡ ಪಕ್ಷಗಳ ಮೇಲಿನ ಅಸಮಾಧಾನದಿಂದಾಗಿ ಹೊಸ ಪರ್ಯಾಯವನ್ನು ಹುಡುಕುತ್ತಿದ್ದರು. ವಿಜಯ್ ಅವರಲ್ಲಿ ಹೊಸ ಭರವಸೆ ಕಂಡ ಈ ಯುವ ಸಮೂಹ, ಅವರ ವಿಜಯ್ ಮಕ್ಕಳ ಇಯಕ್ಕಂ ಸಂಘಟನೆಯನ್ನು ಶಕ್ತಿಯುತ ಮತ ಬ್ಯಾಂಕ್ ಆಗಿ ಪರಿವರ್ತಿಸುವಲ್ಲಿ ಯಶಸ್ವಿಯಾಗಿದೆ.

ಟಿವಿಕೆ ಪಕ್ಷದ ಪ್ರಣಾಳಿಕೆಯಲ್ಲಿದ್ದ ಮಹಿಳಾ ಕೇಂದ್ರಿತ ಯೋಜನೆಗಳು ಡಿಎಂಕೆಗೆ ತೀವ್ರ ಪೆಟ್ಟು ನೀಡಿವೆ. ಗೃಹಿಣಿಯರಿಗೆ ಮಾಸಿಕ ಹಣಕಾಸಿನ ನೆರವನ್ನು 2,500 ರೂ.ಗೆ ಏರಿಸುವ ಭರವಸೆ, ಪ್ರತಿ ಮನೆಗೂ ಉಚಿತ ಎಲ್‌ಪಿಜಿ ಸಿಲಿಂಡರ್, ವೃದ್ಧರಿಗೆ 3,000 ರೂ, ವಧುವಿಗೆ ಚಿನ್ನ ಇತ್ಯಾದಿ ಕೊಡುಗೆಗಳು ಮಹಿಳಾ ಮತದಾರರನ್ನು ಸೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ ಎನ್ನಲಾಗುತ್ತಿದೆ.



| |
|---|
| ತಮಿಳುನಾಡು |
| ಒಟ್ಟು ಸ್ಥಾನಗಳು-234 |
| ಟಿವಿಕೆ-108 |
| ಡಿಎಂಕೆ-74 |
| ಎಡಿಎಂಕೆ-52 |
| 2021ರ ಫಲಿತಾಂಶ |
| ಡಿಎಂಕೆ-159 |
| ಎಡಿಎಂಕೆ-75 |

## ಬಿಜೆಪಿ ಹಣಿಯಲು ಹೋಗಿ ಅಸ್ತಿತ್ವ ಕಳೆದುಕೊಂಡ ಕಾಂಗ್ರೆಸ್

ಹಾಸನ : ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯನ್ನು ಅಧಿಕಾರದಿಂದ ದೂರ ಇಡುವ ಕಾರಣಕ್ಕಾಗಿ ತೃಣಮೂಲ ಕಾಂಗ್ರೆಸ್‌ನೊಂದಿಗೆ ಆಂತರಿಕ ಒಪ್ಪಂದ ಮಾಡಿಕೊಂಡು ಬಂದ ಕಾಂಗ್ರೆಸ್ ಆ ರಾಜ್ಯದಲ್ಲೀಗ ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವಂತಹ ಸನ್ನಿವೇಶವನ್ನು ತನ್ನ ಮೇಲೆ ಎಳೆದುಕೊಂಡಿದೆ.

ಸೋಮವಾರ ಪ್ರಕಟಗೊಂಡ ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯ 294 ಕ್ಷೇತ್ರಗಳ ಪೈಕಿ ಕಾಂಗ್ರೆಸ್ ಕೇವಲ 2 ಸ್ಥಾನಗಳನ್ನಷ್ಟೇ ಗೆದ್ದುಕೊಳ್ಳುವ ಮೂಲಕ ತಾನು ಆ ರಾಜ್ಯ ರಾಜಕಾರಣದಿಂದ ಹೊರ ಹೋಗುತ್ತಿರುವ ಸುಳಿವನ್ನು ಸ್ಪಷ್ಟವಾಗಿ ನೀಡಿದೆ.

ಹಿಂದಿನ ಎರಡನೇ ಅವಧಿಯ ಚುನಾವಣೆಯಲ್ಲಿ 44 ಕ್ಷೇತ್ರಗಳಲ್ಲಿ ವಿಜಯಿಯಾಗಿದ್ದ ಕಾಂಗ್ರೆಸ್ ಆ ರಾಜ್ಯವನ್ನು ಬಿಜೆಪಿಯು ಗಂಭೀರವಾಗಿ ಪರಿಗಣಿಸಿದ ಬಳಿಕ ತನ್ನ ನೆಲೆಯನ್ನು ತೃಣ ಮೂಲ ಕಾಂಗ್ರೆಸ್‌ಗೆ ಪರೋಕ್ಷವಾಗಿ ಹಸ್ತಾಂತರ ಮಾಡಿದ್ದು, ಆ ಪಕ್ಷದ ದುಸ್ಥಿತಿಗೆ ಕಾರಣವೆಂದು ವಿಶ್ಲೇಷಿಸಲಾಗುತ್ತಿದೆ. ಕಾಂಗ್ರೆಸ್‌ನಲ್ಲಿಯೇ ದೀರ್ಘಾವಧಿಯ ರಾಜಕಾರಣ ನಡೆಸಿ ಕೇಂದ್ರದಲ್ಲಿ ರೈಲ್ವೆ ಖಾತೆ ಸಚಿವರೂ ಆಗಿದ್ದ ಮಮತಾ ಬ್ಯಾನರ್ಜಿ ಅವರು ಜ್ಯೋತಿ ಬಸು ಅವರ ನಿಧನದ ನಂತರ ಆ ರಾಜ್ಯದಲ್ಲಿ ತಮ್ಮ ನಾಯಕತ್ವವನ್ನು ಪ್ರತಿಷ್ಠಾಪಿಸಿಕೊಳ್ಳುವ ಗುರಿಯೊಂದಿಗೆ ಕಾಂಗ್ರೆಸ್‌ನಿಂದ ಹೊರ ಬಂದು ತಮ್ಮದೇ ನೇತೃತ್ವದ ತೃಣ ಮೂಲ ಕಾಂಗ್ರೆಸ್ ಸ್ಥಾಪನೆ ಮಾಡಿಕೊಳ್ಳುವ ಮೂಲಕ ಮೂರು ಅವಧಿಗೆ ಪಶ್ಚಿಮ ಬಂಗಾಳವನ್ನು ಆಳಿದರು.

| |
|---|
| ಪಶ್ಚಿಮ ಬಂಗಾಳ |
| ಒಟ್ಟು ಸ್ಥಾನ-294 |
| ಮ್ಯಾಜಿಕ್ ನಂಬರ್-148 |
| ಬಿಜೆಪಿ-208 |
| ಟಿಎಂಸಿ-79 |
| ಕಾಂಗ್ರೆಸ್-2 |
| ಇತರೆ-4 |
| 2021ರ ಫಲಿತಾಂಶ |
| ಟಿಎಂಸಿ-215 |
| ಬಿಜೆಪಿ-77 |
| ಇತರೆ-2 |

## ಕೇರಳ ಸೋಲಿನೊಂದಿಗೆ ಎಡ ಪಕ್ಷಗಳ ಆಡಳಿತ ಅಂತ್ಯ

• ಪ್ರಜೋದಯ ವರದಿ

**ಹಾಸನ :** ಸ್ವಾತಂತ್ರ್ಯ ನಂತರದ ರಾಜಕಾರಣದಲ್ಲಿ ಹೆಚ್ಚುಕಮ್ಮಿ ಮೂರು ದಶಕಗಳ ಕಾಲ ಪಶ್ಚಿಮ ಬಂಗಾಳ, ಬಳಿಕ ಕೇರಳದಲ್ಲಿ ಅನೇಕ ಅವಧಿಯ ಅಧಿಕಾರ ಹಿಡಿದಿದ್ದಲ್ಲದೆ, ಈಶಾನ್ಯ ರಾಜ್ಯಗಳಲ್ಲೂ ಆಡಳಿತ ನಡೆಸಿದ್ದ ಎಡ ಪಕ್ಷಗಳ ರಾಜಕೀಯ ಪಾರ್ಯಪಥ್ಯ ಭಾರತದ ಭೂಪಟದಿಂದ ಅಳಿಸಿ ಹೋದಂತಾಗಿದೆ.

ಕೇರಳದಲ್ಲಿ ಸದ್ಯಕ್ಕೆ ಅಧಿಕಾರ ಹಿಡಿಯುತ್ತಾ ಬಂದಿದ್ದ ಪಿಣರಾಯಿ ವಿಜಯನ್ ನೇತೃತ್ವದ ಎಡ ರಂಗವು ಈ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಶರಣಾಗುವ ಮೂಲಕ ಭಾರತದ ರಾಜಕೀಯದಲ್ಲಿ ಎಡ ಪಕ್ಷಗಳ ಅಧಿಕಾರವು ಅಂತ್ಯ ಗೊಂಡಂತಾಗಿದೆ.

ಹೆಚ್ಚು ಕಾರ್ಮಿಕ ವಲಯವನ್ನು ಒಳಗೊಂಡ ಕಾರ್ಮಿಕ ಹಾಗು ಜಾತ್ಯಾತೀತ ಸೈದ್ಧಾಂತಿಕ ನಿಲುವಿನೊಂದಿಗೆ ಭಾರತದ ಸಂಸತ್ ಹಾಗು ಅನೇಕ ರಾಜ್ಯಗಳಲ್ಲಿ ತನ್ನ ಪ್ರಭುತ್ವವನ್ನು ಸ್ಥಾಪಿಸಿದ್ದ ಸಿಪಿಐ ಹಾಗು ಸಿಪಿಐ(ಎಂ) ಪಕ್ಷಗಳು ಹಿಂದೆ ತಾವು ಆಳಿದ ರಾಜ್ಯಗಳಲ್ಲೀಗ ಖಾತೆ ತೆರೆಯಲಾರದ ಪರಿಸ್ಥಿತಿಗೆ ಬಂದು ನಿಂತಿವೆ.

ಭಾರತದ ರಾಜಕಾರಣದಲ್ಲಿ ಬಹು ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿದ್ದ ಎಡ ಪಕ್ಷಗಳೀಗ ಸಂಸತ್‌ನಲ್ಲಿ ತಮ್ಮ ಪರವಾದ ಸೈದ್ಧಾಂತಿಕ ನಿಲುವನ್ನು ಪ್ರತಿಧ್ವನಿಸಲಾಗದಷ್ಟು ಸಂಖ್ಯೆಯ ಕೊರತೆಯನ್ನು ಅನುಭವಿಸುತ್ತಿವೆ. ಭಾರತದ ಇತಿಹಾಸದಲ್ಲಿ ಪಶ್ಚಿಮ ಬಂಗಾಳವನ್ನು ಆರು ಅವಧಿಗೆ ಆಳಿದ ಜ್ಯೋತಿ ಬಸು ಅವರ ಅಗಲಿಕೆಯ ನಂತರ ಎಡ ಪಕ್ಷಗಳ ನೇತೃತ್ವವನ್ನು ವಹಿಸಿ ಒಂದು ಬಾರಿಗೆ ಮುಖ್ಯಮಂತ್ರಿಯಾದ ಬುದ್ಧ ದೇವ ಭಟ್ಟಾಚಾರ್ಯ ಅವರ ನಂತರದಲ್ಲಿ ಪಶ್ಚಿಮ ಬಂಗಾಳದಲ್ಲಿ ಎಡ ಪಕ್ಷಗಳ ಅಸ್ತಿತ್ವ ಕುಸಿಯುತ್ತಾ ಬಂದು ಈಗ ಆ ರಾಜ್ಯದಲ್ಲಿ ಕೇವಲ ಎರಡು ಸ್ಥಾನಗಳನ್ನು ಗೆದ್ದುಕೊಂಡರೆ ಕೇರಳದಲ್ಲಿ ಕಾಂಗ್ರೆಸ್‌ಗೆ ಪರ್ಯಾಯವಾಗಿ ರಾಜಕೀಯ ಸ್ಥಿರತೆಯನ್ನು ಕಾಯ್ದುಕೊಳ್ಳುವ ಮೂಲಕ ದೀರ್ಘಕಾಲದ ಆಡಳಿತ ನಡೆಸಿದ ಪಿಣರಾಯಿ ವಿಜಯನ್ ಅವರ ನೇತೃತ್ವದ ಎಲ್‌ಡಿಎಫ್ ಈ ಚುನಾವಣೆಯಲ್ಲಿ ಕೇರಳದ ಒಟ್ಟು 140 ಸ್ಥಾನಗಳ ಪೈಕಿ ಕೇವಲ 35 ಸ್ಥಾನಗಳನ್ನು ಗೆದ್ದುಕೊಳ್ಳುವ ಮೂಲಕ ಹೀನಾಯ ವಿದಾಯವನ್ನು ಹೇಳಿಕೊಂಡಿದೆ.

ಈಶಾನ್ಯ ರಾಜ್ಯಗಳಲ್ಲೂ ಈಗ ಎಡ ಪಕ್ಷಗಳ ಹವಾ ಸಂಪೂರ್ಣ ನೆಲಕಚ್ಚಿದೆ. ಒಟ್ಟಾರೆ, ರಾಜಕೀಯ ಮುನ್ನೋಟವನ್ನು ಗಮನಿಸಿದರೆ ಭವಿಷ್ಯದಲ್ಲಿ ಎಡ ಪಕ್ಷದ ರಾಜಕಾರಣ ಅಂತ್ಯಗೊಂಡಂತೆ ಬಾಸವಾಗುತ್ತಿದೆ.

### ಸಮರ್ಥ್‌ಗೆ ಪ್ರಯಾಸದ ಗೆಲುವು | ಉಮೇಶ್ ಮೇಟಿ ಭರ್ಜರಿ ವಿಜಯ

## ಮಾನ ಉಳಿಸಿಕೊಂಡ ಕಾಂಗ್ರೆಸ್ : ದಾವಣಗೆರೆ-ಬಾಗಲಕೋಟೆ ಕೈ

• ಪ್ರಜೋದಯ ವರದಿ

**ಬೆಂಗಳೂರು :** ಆಡಳಿತ ರೂಢ ಕಾಂಗ್ರೆಸ್‌ಗೆ ಪ್ರತಿಷ್ಠೆಯ ಕಣವಾಗಿದ್ದ ದಾವಣಗೆರೆ ದಕ್ಷಿಣ ಕ್ಷೇತ್ರ ಹಾಗು ಬಾಗಲಕೋಟೆ ಮರು ಚುನಾವಣೆಯಲ್ಲಿ ಎರಡು ಸ್ಥಾನಗಳನ್ನು ಉಳಿಸಿಕೊಳ್ಳುವ ಮೂಲಕ ತನ್ನ ವಿರುದ್ಧದ ಟೀಕೆಗೆ ಕಾಂಗ್ರೆಸ್ ಕಡಿವಾಣ ಹಾಕಿದೆ.

ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ತೆರವಾಗಿದ್ದ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆಯಲ್ಲಿ ಅವರ ಮೊಮ್ಮಗ, ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಗೆದ್ದು ಬೀಗಿದ್ದಾರೆ. ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ದಾಸ್ ಕರಿಯಪ್ಪಗೆ ಸೋಲಾಗಿದೆ. ಹೆಚ್.ವೈ.ಮೇಟಿ ಅವರ ನಿಧನದಿಂದ ತೆರವಾಗಿದ್ದ ಬಾಗಲಕೋಟೆ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ್ ಮೇಟಿ ಗೆಲುವಿನ ನಗೆ ಬೀರಿದ್ದಾರೆ.

**ಸಮರ್ಥ್‌ಗೆ ಪ್ರಯಾಸದ ಗೆಲುವು**

ಸಮರ್ಥ್ ಶಾಮನೂರು ಬಿಜೆಪಿ ಅಭ್ಯರ್ಥಿ ಶ್ರೀನಿವಾಸ ದಾಸ್ ಕರಿಯಪ್ಪ ವಿರುದ್ಧ 5,708 ಮತಗಳ ಅಂತರಿಂದ ಜಯ ಸಾಧಿಸಿದ್ದಾರೆ. ಸಮರ್ಥ್ ಶಾಮನೂರುಗೆ 69,578 ಮತಗಳು ಬಂದಿದ್ದರೆ, ಶ್ರೀನಿವಾಸ ಟಿ.ದಾಸ ಕರಿಯಪ್ಪ 63,870 ಮತಗಳನ್ನು ಪಡೆದಿದ್ದಾರೆ. ಇನ್ನು ಎಸ್‌ಡಿಪಿಐನ ಅಫ್ಸರ್ ಕೊಡ್ಲಿ ಪೇಟೆಗೆ 18,975 ಮತಗಳು ಮತ್ತು ನೋಟಾಗೆ 511 ಮತಗಳು ಚಲಾವಣೆಯಾಗಿವೆ.





ಮುಸ್ಲಿಂ ಸಮುದಾಯಕ್ಕೆ ಕಾಂಗ್ರೆಸ್ ಟಿಕೆಟ್ ಸಿಗದ ಕಾರಣ ಕ್ಷೇತ್ರದಲ್ಲಿ ಮುಸ್ಲಿಂ ಸಮುದಾಯದ ಕೆಲ ನಾಯಕರು ಬಂಡಾಯವೆದ್ದಿದ್ದರು. ಹೀಗಾಗಿ ಎಸ್‌ಡಿಪಿಐನ ಅಭ್ಯರ್ಥಿ ಸೇರಿ ಒಟ್ಟು 15 ಜನ ಮುಸ್ಲಿಮರು ಉಪಚುನಾವಣೆಗೆ ಸ್ಪರ್ಧೆ ಮಾಡಿದ್ದರು. ಈ ಎಲ್ಲಾ ಅಭ್ಯರ್ಥಿಗಳನ್ನು ಒಟ್ಟುಗೂಡಿಸಿ ಒಟ್ಟು 22,768 ಮತಗಳು ಚಲಾವಣೆಗೊಂಡಿವೆ. ಇವರ ಸ್ಪರ್ಧೆಯಿಂದ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರುಗೆ ಸೋಲಾಗದಿದ್ದರೂ ಗೆಲುವಿನ ಅಂತರ ಕಡಿಮೆಗೊಳಿಸುವ ಮೂಲಕ ಪ್ರಯಾಸದ ಗೆಲುವು ದಕ್ಕಿದೆ.

**ಉಮೇಶ್ ಮೇಟಿ ಜಯಭೇರಿ**

ಬಾಗಲಕೋಟೆ ಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ್ ಮೇಟಿ ಗೆಲುವಿನ ನಗೆ ಬೀರಿದ್ದಾರೆ. ಆ ಮೂಲಕ ಕ್ಷೇತ್ರವನ್ನು ಮರಳಿ ಕಾಂಗ್ರೆಸ್ ತನ್ನ ತೆಕ್ಕೆಗೆ ಪಡೆದುಕೊಂಡಿದೆ. ಬಿಜೆಪಿ ಅಭ್ಯರ್ಥಿಯಾಗಿದ್ದ ವೀರಣ್ಣ ಚರಂತಿಮಠ ಪೈಪೋಟಿ ನೀಡಿದ್ದರಾದರೂ ಅಂತಿಮವಾಗಿ ಸೋಲುಂಡಿದ್ದಾರೆ.

ಬಿಜೆಪಿಯ ವೀರಣ್ಣ ಚರಂತಿಮಠ್‌ಗೆ ಒಟ್ಟು 76,075 ಮತಗಳು ಬಂದಿದ್ದರೆ, ಕಾಂಗ್ರೆಸ್ ಅಭ್ಯರ್ಥಿ ಉಮೇಶ್ ಮೇಟಿ ಪರ 97,941 ವೋಟ್ ಚಲಾವಣೆ ಆಗಿದ್ದವು. ಹೀಗಾಗಿ 21,866 ಮತಗಳ ಅಂತರದಿಂದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಜಯಭೇರಿ ಬಾರಿಸಿದ್ದಾರೆ.

ಇನ್ನು ಗೆಲುವಿನ ಅಂತರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮೇಶ್ ಮೇಟಿ ಹೊಸ ದಾಖಲೆ ಬರೆದಿದ್ದಾರೆ. ಹಿಂದಿನ ಚುನಾವಣೆಗಳಲ್ಲಿ ಬಾಗಲಕೋಟೆ ಕ್ಷೇತದಲ್ಲಿ ಅಭ್ಯರ್ಥಿಗಳು ಪಡೆದಿದ್ದ ಲೀಡ್ ದಾಖಲೆಯನ್ನು ಉಮೇಶ್ ಮೇಟಿ ಮುರಿದಿದ್ದು, 2018ರಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರ 15,934 ಮತಗಳ ಅಂತರದ ಗೆಲುವೇ ಕ್ಷೇತ್ರದಲ್ಲಿ ಈವರೆಗಿನ ಅತಿದೊಡ್ಡ ಮತಗಳ ಅಂತರವಾಗಿತ್ತು.

ಚುನಾವಣೆಗೆ ಮುನ್ನ ಮೇಟಿ ಕುಟುಂಬದೊಳಗೆ ಟಿಕೆಟ್ ಹಂಚಿಕೆ ವಿಚಾರವಾಗಿ ಮಲ್ಲಿಕಾರ್ಜುನ ಮೇಟಿ, ಬಾಯಕ್ಕ ಮತ್ತು ಉಮೇಶ್ ಮೇಟಿ ನಡುವೆ ತೀವ್ರ ಪೈಪೋಟಿ ಉಂಟಾಗಿ ಭಿನ್ನಮತವೂ ವ್ಯಕ್ತವಾಗಿತ್ತು. ಟಿಕೆಟ್‌ಗಾಗಿ ಕುಟುಂಬದೊಳಗೆ ಭಿನ್ನಾಭಿಪ್ರಾಯಗಳು ವ್ಯಕ್ತವಾಗಿದ್ದವು. ಹೆಚ್.ವೈ. ಮೇಟಿ ಅವರ 4 ಮಕ್ಕಳೆಲ್ಲರೂ ತಮಗೆ ಟಿಕೆಟ್ ಬೇಕೆಂದು ಪಟ್ಟು ಹಿಡಿದು ಕುಳಿತ್ತಿದ್ದರು. ಕೊನೆಗೆ ಖುದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಹೆಚ್.ವೈ.ಮೇಟಿ ಅವರ ಪುತ್ರರನ್ನು ಬೆಂಗಳೂರಿಗೆ ಕರೆಯಿಸಿಕೊಂಡು ಸಂಧಾನ ಸಭೆ ಮಾಡಿ ಎಲ್ಲರನ್ನೂ ಸಮಾಧಾನಪಡಿಸಿದ್ದರು. ಅಲ್ಲದೇ ಒಬ್ಬರಿಗೆ ಟಿಕೆಟ್ ನೀಡಿದರೆ ಎಲ್ಲರೂ ಒಟ್ಟಾಗಿ ಚುನಾವಣೆ ಮಾಡಬೇಕೆಂದು ಸೂಚಿಸಿ ಕಳುಹಿಸಿದ್ದರು. ಅಂತಿಮವಾಗಿ ಪಕ್ಷದ ಹೈಕಮಾಂಡ್ ಉಮೇಶ್ ಮೇಟಿ ಅವರಿಗೆ ಟಿಕೆಟ್ ನೀಡಿತ್ತು. ಬಳಿಕ ಇತರರು ಸಿಟ್ಟಾಗದೇ ಮುಖ್ಯಮಂತ್ರಿ ಆದೇಶವನ್ನು ಪಾಲಿಸಿ, ಎಲ್ಲರೂ ಒಂದಾಗಿ ಪ್ರಚಾರದಲ್ಲಿ ತೊಡಗಿದ್ದರು.

## ಕೋರ್ಟ್ ಅಂತಿಮ ಆದೇಶ ಆಗದಿದ್ದರೂ ಅಧಿಕಾರ ಸ್ವೀಕಾರ

### ಬಿ.ಆರ್.ಗುರುದೇವ್ ತಂಡದ ವಿರುದ್ಧ ಚೌಡುವಳ್ಳಿ ಜಗದೀಶ್ ಆರೋಪ





• ಪ್ರಜೋದಯ ವರದಿ

**ಹಾಸನ:** ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿಯ ಅಧಿಕಾರವನ್ನು ಯಾರು ವಹಿಸಿಕೊಳ್ಳಬೇಕೆಂಬ ಬಗ್ಗೆ ಹೈಕೋರ್ಟ್ ಅಂತಿಮ ಆದೇಶ ಪ್ರಕಟಿಸಿಲ್ಲವಾದರೂ ನಿರ್ದೇಶಕ ಬಿ.ಆರ್. ಗುರುದೇವ್ ಹಾಗು ಇತರರು ಅಧಿಕಾರ ವಹಿಸಿಕೊಂಡಿದ್ದಾರೆಂದು ಚೌಡುವಳ್ಳಿ ಜಗದೀಶ್ ಮುಂತಾದವರು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ನ್ಯಾಯಾಲಯದ ಆದೇಶ ಹೊರ ಬೀಳುವ ಮೊದಲೇ ಬಿ.ಆರ್.ಗುರುದೇವ್ ಅಧ್ಯಕ್ಷರಾಗಿ, ಜಿ.ಟಿ. ಕುಮಾರ್ ಕಾರ್ಯದರ್ಶಿಯಾಗಿ, ಎಸ್.ಜಿ.ಶ್ರೀಧರ್ ಅವರು ಖಜಾಂಚಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಅಧಿಕಾರ ವಹಿಸಿಕೊಳ್ಳುವ ಸಂದರ್ಭದಲ್ಲಿ ಅವರು ನ್ಯಾಯಾಲಯದ ಪ್ರಕ್ರಿಯೆಯ ಪ್ರತಿಯನ್ನೇ ಆದೇಶವೆಂದು ಸುಳ್ಳು ಹೇಳಿ ಕಾನೂನುಬಾಹಿರವಾಗಿ ಕಾರ್ಯಾಭಾರ ವಹಿಸಿಕೊಂಡಿದ್ದಾರೆಂದು ಆಪಾದಿಸಿದರು.

ಏ.29ರ ಹೈಕೋರ್ಟ್‌ನಲ್ಲಿ ವಿಚಾರಣೆ ಮುಗಿದ ಬಳಿಕ ನ್ಯಾಯಾಧೀಶರು ಆದೇಶವನ್ನು ಪ್ರಕಟಿಸಬೇಕಿತ್ತು. ನಾವು ಸಲ್ಲಿಸಿದ್ದ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ತಡೆಯಾಜ್ಞೆ

» ನಾಲ್ಕನೇ ಪುಟದಲ್ಲಿ


# ಇಡಿಗೆ ನೋಟೀಸ್: ಸುಪ್ರೀಂ ಕೋರ್ಟ್ ತರಾಟೆ

• ಪ್ರಜೋದಯ ವರದಿ

**ನವದೆಹಲಿ:** ಇಡಿಗೆ ನೋಟೀಸ್ ನೀಡಿದ್ದಕ್ಕಾಗಿ ರಿಜಿಸ್ಟ್ರಿಯನ್ನು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿದೆ. ಅಧಿಕಾರಿಗಳು ತಮ್ಮನ್ನು ಸೂಪರ್ ಸಿಜೆಐ ಎಂದು ಭಾವಿಸುತ್ತಾರೆಂದು ಹೇಳಿದೆ.

ಕಟು ಛೀಮಾರಿ ಹಾಕಿರುವ ಸುಪ್ರೀಂ ಕೋರ್ಟ್, ರಿಜಿಸ್ಟ್ರಿಯ ವಿರುದ್ಧ ವಾಗ್ದಾಳಿ ನಡೆಸಿತು. ರಿಜಿಸ್ಟ್ರಿ ನಡವಳಿಕೆಯನ್ನು ಅಸಹ್ಯಕರ ವಾದದ್ದು ಎಂದು ಕರೆದಿದೆ. ಕೋರ್ಟ್ ಅಧಿಕಾರಿಗಳು ತಾವು ಭಾರತದ ಸೂಪರ್ ಮುಖ್ಯ ನ್ಯಾಯಮೂರ್ತಿಗಳಂತೆ ವರ್ತಿಸುತ್ತಿದ್ದಾರೆಂದು ಕುಟುಕಿದೆ.

37,000 ಕೋಟಿ ರೂ.ಗೂ ಹೆಚ್ಚು ಹೂಡಿಕೆ ವಂಚನೆ ಆರೋಪ ಹೊತ್ತಿರುವ ಆಯುಷಿ ಮಿತ್ತಲ್ ಸಲ್ಲಿಸಿದ ಜಾಮೀನು ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿ ಜೋಯ್ಮಲ್ಯ ಬಾಗ್ಚಿ ಅವರನ್ನೊಳಗೊಂಡ ಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ.



ಮಾ. 23ರಂದು ಅರ್ಜಿಯ ಕುರಿತು ಹೊರ ಡಿಸಲಾದ ಆದೇಶವನ್ನು ಸಿಜೆಐ ಉಲ್ಲೇಖಿಸಿ ದರು. ಅರ್ಜಿಯ ಕುರಿತು ಜಾರಿ ನಿರ್ದೇಶನಾಲಯ ಮತ್ತು ಇತರ ಪ್ರತಿವಾದಿಗಳಿಗೆ ಪೀಠ ನೋಟೀಸ್ ನೀಡಿಲ್ಲ ಎಂದು ರಿಜಿಸ್ಟ್ರಿ ಅಧಿಕಾರಿ ಗಳು ಹೇಗೆ ಅರ್ಥೈಸಿಕೊಂಡರೆಂದು ಆಶ್ಚರ್ಯಪಟ್ಟರು. ರಿಜಿಸ್ಟ್ರಿ ತುಂಬಾ ಅಸಹ್ಯಕರವಾಗಿ ವರ್ತಿಸು ತ್ತಿದೆ ಎಂದು ಸಿಜೆಐ ಹೇಳಿದರು.

ನಿರ್ದೇಶಕರಿಗೆ ಅಂತಹ ಯಾವುದೇ ಆದೇಶವನ್ನು ನೀಡಲಾಗಿಲ್ಲ ಎಂದು ಹೇಳುವ ಮೂಲಕ ನೋಟೀಸ್ ನೀಡಿಲ್ಲ. ಮಾ.23ರ ನಮ್ಮ ಆದೇಶ ನೋಟೀಸ್ ಎಂದರ್ಥವಲ್ಲ ಎಂದು ರಿಜಿಸ್ಟ್ರಾರ್ ಜುಡಿಷಿಯಲ್ (ಸುಪ್ರೀಂ ಕೋರ್ಟ್) ನಿಂದ ಸತ್ಯಶೋಧನಾ ವಿಚಾರಣೆ ಯನ್ನು ಕೈಗೊಳ್ಳಲಿ. ಜಾರಿ ನಿರ್ದೇಶನಾಲಯಕ್ಕೆ ನೋಟೀಸ್ ನೀಡಲಿ ಎಂದು ಕೋರ್ಟ್ ಹೇಳಿದೆ.

ಅರ್ಜಿದಾರರಾದ ಆಯುಷಿ ಮಿತ್ತಲ್, ಅವರ ಪತಿ ಮತ್ತು ಅವರ ಕಂಪನಿಯು ಬೃಹತ್ ಹೂಡಿಕೆ ವಂಚನೆಯನ್ನು ಸಂಘಟಿಸಿದ ಆರೋಪ ಎದುರಿಸುತ್ತಿದೆ. ನಿಧಿಯ ಗಣನೀಯ ಭಾಗ ವನ್ನು ಹೂಡಿಕೆದಾರರಿಗೆ ಹಿಂತಿರುಗಿಸಲಾಗಿದೆ ಎಂದು ಪ್ರತಿವಾದಿಯು ಹೇಳಿಕೊಂಡರೂ ಪ್ರಸ್ತುತ ಸ್ಥಗಿತಗೊಳಿಸಿರುವ ಬ್ಯಾಂಕ್ ಖಾತೆಗ ಳಲ್ಲಿ ನೂರಾರು ಕೋಟಿ ರೂಪಾಯಿ ಉಳಿದಿವೆ.

ಮಾರ್ಚ್ 23ರ ಆದೇಶದಲ್ಲಿ ಪ್ರಕರಣದ ಒಂದು ಪಕ್ಷವಾದ ರಾಜಸ್ಥಾನ ಸರ್ಕಾರದ ವಕೀಲರು ವಿಚಾರಣೆಗೆ ಪಕ್ಷವನ್ನಾಗಿ ಮಾಡಲು ಮೌಖಿಕ ಪ್ರಾರ್ಥನೆ ಸಲ್ಲಿಸಲು ಪೀಠ ಅವಕಾಶ ನೀಡಿತ್ತು. ಅರ್ಜಿದಾರರು ಮತ್ತು ಅವರ ವಿಸ್ತೃತ ಕುಟುಂಬಕ್ಕೆ ಸೇರಿದ ಎಲ್ಲಾ ಚರ ಮತ್ತು ಸ್ಥಿರ ಆಸ್ತಿಗಳನ್ನು ಸರಿಯಾಗಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆಯೇ ಎಂದು ನಿರ್ಧರಿಸುವುದು ಇದರ ಉದ್ದೇಶವಾಗಿತ್ತು.

ಆಸ್ತಿಗಳ ಸಮಗ್ರ ವಿವರಣೆಯನ್ನು ಒದಗಿಸು ವವರೆಗೆ ಜಾಮೀನು ಅರ್ಜಿಯ ಅರ್ಹತೆಯನ್ನು ಪರಿಗಣಿಸುವುದಿಲ್ಲ ಎಂದು ಪೀಠವು ಪುನರುಚ್ಚರಿಸಿತು. ಅರ್ಜಿದಾರರು, ಅವರ ಪತಿ, ಅವರ ಮಕ್ಕಳು ಮತ್ತು ಪೋಷಕರು, ಒಡಹುಟ್ಟಿದವರು ಮತ್ತು ಅತ್ತೆ-ಮಾವಂದಿರು ಹೊಂದಿರುವ ಸ್ಥಿರ ಆಸ್ತಿಗಳ ವಿವರಗಳನ್ನು ಒಳಗೊಂಡಿರುವ ಸಮಗ್ರ ಅಫಿಡವಿಟ್ ಸಲ್ಲಿಸುವಂತೆ ಅರ್ಜಿದಾರರ ಕಾನೂನು ಪ್ರತಿನಿಧಿಗೆ ಅದು ಆದೇಶಿಸಿತ್ತು.

ಕಂಪನಿಯ ನಿರ್ದೇಶಕರು, ವ್ಯವಸ್ಥಾಪಕರು ಮತ್ತು ಪ್ರಮುಖ ಸಿಬ್ಬಂದಿ ಸದಸ್ಯರ ಆಸ್ತಿಗಳ ವಿವರಗಳನ್ನು ಸಹ ಅದು ಕೋರಿತ್ತು. ಅಂತಹ ಸಂಪೂರ್ಣ ವಿವರಗಳನ್ನು ಒದಗಿಸುವವರೆಗೆ ಜಾಮೀನು ಅರ್ಜಿಯನ್ನು ಅದರ ಅರ್ಹತೆಯ ಮೇಲೆ ನಾವು ಪರಿಗಣಿಸುವುದಿಲ್ಲವೆಂದು ಪೀಠ ಹೇಳಿತ್ತು.

# ಸಕಲೇಶಪುರ : ವಿದ್ಯುತ್ ಕಂಬ ದುರಸ್ತಿಗೆ ಒತ್ತಾಯ

• ಪ್ರಜೋದಯ ವರದಿ

**ಸಕಲೇಶಪುರ:** ಚಂಗಡಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗೋನಳ್ಳಿ ಗ್ರಾಮದಲ್ಲಿ ಕಳೆದ ಮಂಗಳವಾರ ರಾತ್ರಿ ಸುರಿದ ಭಾರೀ ಮಳೆಯಿಂದ ಮರವೊಂದು ವಿದ್ಯುತ್ ಕಂಬದ ಮೇಲೆ ಬಿದ್ದು, ಕಂಬ ಮುರಿದು ಬಿದ್ದ ಪರಿಣಾಮ ಗ್ರಾಮಸ್ಥರು ಕತ್ತಲಿನಲ್ಲಿ ದಿನ ಕಳೆಯುವಂತಾಗಿದೆ.



ಘಟನೆಯಿಂದಾಗಿ ಗ್ರಾಮದಲ್ಲಿನ ಮನೆಗಳಿಗೆ ವಿದ್ಯುತ್ ಸರಬರಾಜು ಸಂಪೂರ್ಣವಾಗಿ ಸ್ಥಗಿತಗೊಂಡಿದ್ದು, ನಿವಾಸಿಗಳು ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ. ಜೊತೆಗೆ ವಿದ್ಯುತ್ ತಂತಿಗಳು ರಸ್ತೆಯ ಮೇಲೆ ಬಿದ್ದಿರುವುದರಿಂದ ಸಾರ್ವಜನಿಕರ ಸಂಚಾರಕ್ಕೂ ಅಡಚಣೆ ಉಂಟಾ ಗಿದೆ.

ಸ್ಥಳೀಯರು ತಕ್ಷಣವೇ ಸಂಬಂಧಪಟ್ಟ ವಿದ್ಯುತ್ ಇಲಾಖೆಗೆ ಮಾಹಿತಿ ನೀಡಿದರೂ, ಒಂದು ವಾರದಿಂದ ದುರಸ್ತಿ ಕಾರ್ಯ ನಡೆದಿಲ್ಲವೆಂದು ಗ್ರಾಮಸ್ಥರು ಆರೋಪ ಮಾಡುತ್ತಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ಕಾಂಗ್ರೆಸ್ ಮುಖಂಡ ನಾಗನಹಳ್ಳಿ ಅಶೋಕ್ ಕುಮಾರ್, ಮರ ಬಿದ್ದ ಪರಿಣಾಮ ಹಲವು ದಿನಗಳಿಂದ ಗ್ರಾಮ ಕತ್ತಲಿನಲ್ಲಿ ಮುಳುಗಿದೆ. ಅಧಿಕಾರಿಗಳು ಕೂಡಲೇ ಸ್ಥಳಕ್ಕೆ ಭೇಟಿ ನೀಡಿ, ವಿದ್ಯುತ್ ಕಂಬವನ್ನು ದುರಸ್ತಿ ಮಾಡಬೇಕು. ರಸ್ತೆ ಮೇಲೆ ಬಿದ್ದಿರುವ ತಂತಿ ಗಳನ್ನು ತೆರವುಗೊಳಿಸಬೇಕೆಂದು ಗ್ರಾಮಸ್ಥರ ಪರವಾಗಿ ಒತ್ತಾಯಿಸಿದ್ದಾರೆ.

# 250ಕ್ಕೂ ಹೆಚ್ಚು ಬಾಳೆ ಗೊನೆ ಕಳವು

• ಪ್ರಜೋದಯ ವರದಿ

**ಅರಸೀಕೆರೆ:** ಕಷ್ಟಪಟ್ಟು ಬೆಳೆದ ಬಾಳೆ ತೋಟಕ್ಕೆ ಲಗ್ಗೆಯಿಟ್ಟಿರುವ ಕಿಡಿಗೇಡಿಗಳು 250ಕ್ಕೂ ಹೆಚ್ಚು ಬಾಳೆ ಗೊನೆ ಕಳವು ಮಾಡಿರುವ ಘಟನೆ ತಾಲ್ಲೂಕಿನ ಮುದ್ದನಹಳ್ಳಿ ಗ್ರಾಮದಲ್ಲಿ ನಡೆದಿದೆ.



ರೈತ ಚಂದ್ರನಾಯಕ್ ಅವರ ತೋಟದಲ್ಲಿ ಕಳ್ಳತನವಾಗಿದೆ. ಜೊತೆಗೆ ಉಳಿದ ಗಿಡಗಳನ್ನು ಸಂಪೂರ್ಣ ನಾಶ ಪಡಿಸಿದ್ದಾರೆ. ಮುದ್ದನಹಳ್ಳಿ ಸಮೀಪ ರಸ್ತೆಗೆ ಹೊಂದಿಕೊಂಡಿರುವ 25 ಗುಂಟೆ ಜಮೀನಿನಲ್ಲಿ ಚಂದ್ರನಾಯಕ್ ಒಂದು ವರ್ಷದಿಂದ ಬಾಳೆ ಬೆಳೆದಿ ದ್ದರು. ಉತ್ತಮ ಆರೈಕೆಯಿಂದ ಬೆಳೆದ ಬೆಳೆ ಈಗ ಕಟಾವು ಹಂತಕ್ಕೆ ತಲುಪಿದ್ದು, ಮಾರುಕಟ್ಟೆಗೆ ಸಾಗಿಸಲು ಸಿದ್ಧವಾಗಿತ್ತು. ಆದರೆ ಇದೇ ಸಮಯದಲ್ಲಿ ದುಷ್ಕರ್ಮಿಗಳು ದಾಳಿ ನಡೆಸಿ ಬೆಳೆ ಕಳವು ಮಾಡಿರುವುದಷ್ಟೇ ಅಲ್ಲದೆ, ಉಳಿದ ಗಿಡಗಳನ್ನು ಸಹ ನಾಶಪಡಿಸಿರುವುದು ರೈತನ ಕನಸಿಗೆ ಭಾರೀ ಹೊಡೆತ ನೀಡಿದೆ.

ಈ ಕುರಿತು ಮಾತನಾಡಿದ ಚಂದ್ರನಾಯಕ್ ಅವರು, ಒಂದು ವರ್ಷದಿಂದ ಕುಟುಂಬದವರ ಜೊತೆ ಕಷ್ಟಪಟ್ಟು ಬೆಳೆದ ಬಾಳೆಗೆ ಉತ್ತಮ ಬೆಲೆ ಸಿಗುವ ನಿರೀಕ್ಷೆಯಲ್ಲಿದ್ದೆವು. ಕೆಲವೇ ದಿನಗಳಲ್ಲಿ ಕಟಾವು ಮಾಡಿ ಮಂಡಿಗೆ ಹಾಕಬೇಕಿತ್ತು. ದುಷ್ಕೃತ್ಯ ದಿಂದ ಎಲ್ಲವೂ ನಾಶವಾಗಿದೆ. ನಮ್ಮ ಪರಿಶ್ರಮ ವ್ಯರ್ಥವಾಗಿದೆ ಎಂದು ನೋವು ವ್ಯಕ್ತಪಡಿಸಿದರು. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದುಡಿದ ಕೈಗಳು ಮಾತ್ರ ವೇದಿಕೆಯ ಮೇಲೆ ಗೌರವಿಸಲ್ಪಡಬೇಕು. ದುಡಿದ ಕೈಗಳಿಗೆ ಮಾತ್ರ ಬೆವರಿನ ವಾಸನೆ, ಗೌರವದ ಬೆಲೆ ಮಣ್ಣಿನ ರುಚಿ ತಿಳಿದಿರುತ್ತದೆ. ದುಡಿದ ಕೈಗಳು ತಮ್ಮ ರೂಪವನ್ನು ಕಳೆದುಕೊಂಡಿರುತ್ತವೆ ದುಡಿದ ಕೈಗಳು ಬಲಶಾಲಿಯಾಗಿರುತ್ತದೆ ದುಡಿದ ಕೈಗಳಿಗೆ ಪ್ರಶಂಸೆಗಳು ಎದುರಾಗಬೇಕು. ಪ್ರಶಂಸೆಗಳು ಸಿಗುವಾಗ ದುಡಿಯುವ ಕೈಗಳಾಗಿದ್ದರೆ ಮಾತ್ರ ಅದನ್ನ ಸ್ವೀಕರಿಸಿ ತನ್ನದಲ್ಲದಿದ್ದರೆ ಅಲ್ಲಿಂದ ಹಿಂಜರಿಯುವ ಮನಸ್ಸು ಮಾಡಬೇಕು. ಇದೆಲ್ಲವೂ ದುಡಿಯುವ ಕೈಗಳಿಂದ ಮಾತ್ರ ಸಾಧ್ಯವಾಗುವಂತೆ ದುಡಿಯುವ ಕೈಗಳನ್ನ ಸುತ್ತಮುತ್ತ ಗಮನಿಸಿ ಗೌರವಿಸಿ ಆಗ ದುಡಿಯುವ ಕೈಗಳು ಹೆಚ್ಚಾಗುತ್ತವೆ ಇನ್ನೊಂದಷ್ಟು ಹೊಸ ದುಡಿಯುವ ಕೈಗಳನ್ನು ಪ್ರೇರೇಪಿಸುತ್ತದೆ. - **ಧೀರಜ್** ಬೆಳ್ಳಾರೆ

# ಅರಬ್ ಮಣ್ಣಿನಲ್ಲಿ ಅರಳಿದ ಭಾರತೀಯ ಮಾಧುರ್ಯ ಯೆಮೆನ್ ಮಾವಿನ ಕಥೆ

## ಮಾರುಕಟ್ಟೆಗಳಲ್ಲಿ ಇಂದಿಗೂ ಸದಾ ಬೇಡಿಕೆ

- ★ ಭಾರತೀಯ ಮೂಲದ ತಳಿಗಳ ಅದ್ಭುತ ಪ್ರಯಾಣ
- ★ ಯೆಮೆನ್ ಮಣ್ಣಿನ ಫಲವತ್ತತೆ ಮತ್ತು ವಿಶಿಷ್ಟ ರುಚಿ
- ★ ಅರೇಬಿಯನ್ ಮಾರುಕಟ್ಟೆಗಳಲ್ಲಿ ಇಂದಿಗೂ ಸದಾ ಬೇಡಿಕೆ
- ★ ಒಮಾನ್‌ನಿಂದ ಲೇಖಕರ ಪ್ರತ್ಯಕ್ಷ ಅನುಭವ ಮತ್ತು ಕಥೆ



ಹಣ್ಣುಗಳ ರಾಜ ಹೆಸರಾಗಿರುವ ಮಾವಿನ ಹಣ್ಣಿನ ರುಚಿಗೆ ಮನಸೋತವರು ಯಾರಿಲ್ಲ ಹೇಳಿ? ಮಾವಿನ ಹಣ್ಣಿನ ಸೀಸನ್ ಬಂದೊಡನೆ ಪ್ರತಿ ಊರಿನಲ್ಲೂ ಮಾವಿನ ಹಣ್ಣಿನ ಹಬ್ಬ ಅಂತ ಹೇಳಬಹುದು, ಮಾರುಕಟ್ಟೆಯ ಬೀದಿಬೀದಿಗಳಲ್ಲೂ ತರಹೇವಾರಿ ಮಾವಿನ ಹಣ್ಣನ್ನು ಮಾರುತ್ತಾರೆ. ಅಷ್ಟೇ ಅಲ್ಲದೆ ಹಲವಾರು ದೇಶಗಳಿಗೆ ನಮ್ಮ ಭಾರತದಿಂದ ಹಣ್ಣುಗಳು ರಫ್ತಾಗುತ್ತವೆ. ಕೋಟ್ಯಾಂತರ ರೂಪಾಯಿಗಳ ವ್ಯವಹಾರ ನಡೆಯುತ್ತದೆ. ಪ್ರಪಂಚದಲ್ಲಿ ಅತಿ ಹೆಚ್ಚು ಮಾವಿನ ಹಣ್ಣುಗಳನ್ನು ಬೆಳೆಯುವ ದೇಶದಲ್ಲಿ ಭಾರತವು ಮೊದಲನೆಯ ಸ್ಥಾನದಲ್ಲಿದೆ.

ಒಮಾನ್‌ನಲ್ಲಿ ನೆಲೆಸಿರುವ ನಾವು ಪ್ರತಿ ವರ್ಷದ ಮಾವಿನ ಹಣ್ಣಿನ ಸೀಸನ್‌ನಲ್ಲಿ ಭಾರತದಿಂದ ರಫ್ತು ಮಾಡಲ್ಪಟ್ಟ ಹಣ್ಣುಗಳನ್ನು ಖರೀದಿಸಿ ತಿನ್ನುವುದು ರೂಢಿ. ಸುಮಾರು ಹದಿನಾರು ವರ್ಷಗಳ ಹಿಂದೆ ಮಸ್ಕತ್‌ಗೆ ಮೊದಲು ಬಂದಾಗ, ಮಾರುಕಟ್ಟೆಯಲ್ಲಿ ದೊರೆಯುತಿದ್ದ ಅತಿ ಹೆಚ್ಚು ಬೆಲೆಯ ಮಾವಿನ ಹಣ್ಣಗಳನ್ನು ಕೊಳ್ಳಲು ಹಿಂದೆ ಮುಂದೆ ಯೋಚಿಸುತಿದ್ದೆವು. ಸಾಮಾನ್ಯವಾಗಿ ಭಾರತದಿಂದ ಆಮದಾಗುವ ವಸ್ತುಗಳು ಇಲ್ಲಿ ಹೆಚ್ಚಿನ ಬೆಲೆಗೆ ಮಾರಲ್ಪಡುತ್ತವೆ. ವ್ಯಾಪಾರಿಗಳು ಮತ್ತು ದಲ್ಲಾಳಿಗಳ ಲಾಭಾಂಶ, ಸಾಗಣೆ ವೆಚ್ಚ ಇತ್ಯಾದಿ ಸೇರಿ, ವಸ್ತುಗಳ ಬೆಲೆ ದುಪ್ಪಟ್ಟಾಗುವುದು ಸಹಜ. ಊರಿನಲ್ಲಿ ನೂರು ರೂಪಾಯಿಗೆ ದೊರೆಯುವ ವಸ್ತುಗಳು ಇನ್ನೂರಕ್ಕೂ ಹೆಚ್ಚಿನ ಬೆಲೆಗೆ ಮಾರುತ್ತಾರೆ. ಒಮಾನಿನ ಮಾರ್ಕೆಟ್‌ಗಳಲ್ಲಿ ನಾವು ಯಾವುದೇ ವಸ್ತುಗಳನ್ನು ಖರೀದಿಸುವಾಗ, ಭಾರತ ಮೂಲದ ಆಹಾರ ಪದಾರ್ಥಗಳಿಗೆ ಯಾವಾಗಲು ಮೊದಲ ಪ್ರಾಶಸ್ತ್ಯ ನೀಡುತ್ತೇವೆ. ಕೇಜಿಗೆ ಬೆಲೆ ದುಪ್ಪಟ್ಟಾದರು ನೂರಾರು ರೂಪಾಯಿ ಕೊಟ್ಟು ಹಲವಾರು ಬಾರಿ ಹೀಗಾಗಿ ನಮ್ಮೆಲ್ಲರ ಅಚ್ಚು ಮೆಚ್ಚಿನ ಮಾವಿನ ಹಣ್ಣನ್ನು ಪ್ರತಿ ಸೀಸನ್‌ನಲ್ಲಿ ಖರೀದಿಸಿ ತಂದು, ಅದರ ಸ್ವಾದವನ್ನು ಅನುಭವಿಸುತ್ತಿರುತ್ತೇವೆ. ಒಮ್ಮೊಮ್ಮೆ, ತುಂಬಾ ಇಷ್ಟ ಪಟ್ಟು, ಜಾಸ್ತಿ ದುಡ್ಡು ಕೊಟ್ಟು ತಂದ ಹಣ್ಣುಗಳಲ್ಲಿ ಕೆಲವೊಂದು ತಳಿಗಳು ನೋಡಲು ಸುಂದರವಾಗಿದ್ದರೂ ಅಷ್ಟೊಂದು ರುಚಿ ನೀಡುತ್ತಿರುತ್ತಿಲ್ಲ. ಹೀಗಾಗಿ ಒಳ್ಳೆ ರುಚಿಯಾದ ಹಣ್ಣಿಗಾಗಿ ವಿವಿಧ ತಳಿಗಳನ್ನು ಟ್ರೈ ಮಾಡುವುದು ನಮ್ಮ ಅಭ್ಯಾಸ. ಒಮ್ಮೆ ಟ್ರೈ ಮಾಡೋಣ ಎಂದು ಯೆಮೆನ್ ಮಾವಿನ ಹಣ್ಣನ್ನು ಖರೀದಿಸಿ ತಂದು ರುಚಿ ನೋಡಿದೆವು. ಅಬ್ಬಾ! ಆ ಹಣ್ಣಿನ ರುಚಿಗೆ ನಾನೊಬ್ಬನೆ ಮಾತ್ರವಲ್ಲ, ಮನೆಯಲ್ಲಿ ಎಲ್ಲರೂ ಮನಸೋತು ಹೋದೆವು. ಬಾಯಲ್ಲಿ ಇಟ್ಟ ತಕ್ಷಣ ಆ ಮಾವು ಕರಗಿ ಹೋಗುವಂತಹ ಅನುಭವ. ಜೇನುತುಪ್ಪದಂತಹ ಸಿಹಿ, ಜೊತೆಗೆ ಬಾಯಲ್ಲಿ ಉಕ್ಕುವ ರಸ. ಮಾವಿನ ಹಣ್ಣಿನಲ್ಲಿ ನಾರೇ ಇರಲಿಲ್ಲ. ಚಾಕುವಿನಿಂದ ಹಣ್ಣನ್ನು ಕತ್ತರಿಸಿದಾಗ ಅದು ಬೆಣ್ಣೆಯನ್ನು ಕತ್ತರಿಸಿದ ಅನುಭವ ನೀಡಿತ್ತು. ಆಗ ನನಗನಿಸಿದ್ದು, ನಾವ್ಯಾಕೆ ಇಷ್ಟು ದಿನ ಈ ಹಣ್ಣನ್ನು ತಿನ್ನಲೇ ಇಲ್ಲವಲ್ಲ ಅಂತ! ಈ ಹಣ್ಣಿನ ರುಚಿಗೆ ಮಾರು ಹೋಗದವರು ಯಾರು ಇಲ್ಲ. ಮಾರ್ಕೆಟ್ ನಲ್ಲಿ ಯೆಮೆನ್ ಮಾವಿನ ಹಣ್ಣುಗಳು ಬಂದೊಡನೆ, ಅತಿ ಶೀಘ್ರವಾಗಿ ಖಾಲಿಯಾಗಿ ಬಿಡುತ್ತವೆ. ನನ್ನ ಸ್ನೇಹಿತರೂ ಸಹ ಇದೇ ಮಾತನ್ನು ಹೇಳುತ್ತಿದ್ದರು.

**ಮರುಭೂಮಿಯಲ್ಲಿ ಕೃಷಿ:** ಹಳ್ಳ ಕೊಳ್ಳ, ನದಿ, ಹೊಲ,ಗದ್ದೆ, ಕೆರೆ ಕಟ್ಟೆ, ಹಸಿರು ಹೊದ್ದ ಬೆಟ್ಟಗಳು ಹೀಗೆ ನಿತ್ಯವೂ ಹಸಿರನ್ನು ನೋಡಿ ಬೆಳೆದ ನಮಗೆ, ಗಲ್ಫ್ ರಾಷ್ಟ್ರಗಳಲ್ಲಿ ಬಹುತೇಕ ಕಡೆ ಮರುಭೂಮಿ, ಬೋಳು ಬೋಳಾಗಿರುವ ಬೆಟ್ಟ ಗುಡ್ಡಗಳು, ಸುಣ್ಣದ ಕಲ್ಲಿನ ಪದರಗಳನ್ನು ಒಳಗೊಂಡ ಭೂ ಪ್ರದೇಶ, ಜಾಲಿ ಮುಳ್ಳು ಬಿಟ್ಟರೆ ಬೇರೇನು ಬೆಳೆಯದ ಭೂಮಿ, ಕಣ್ಣು ಹಾಯಿಸಿದಷ್ಟೂ ದೂರ ಮರಳಿನ ದಿಬ್ಬಗಳು ಹೀಗೆ ಈ ಎಲ್ಲವೂ ನಮ್ಮನ್ನು ಉಲ್ಲಾಸ ಕಳೆದುಕೊಳ್ಳುವಂತೆ ಮಾಡುತ್ತವೆ. ಆದರೆ ವಾದಿಗಳ (ನದಿಗಳು) ಸುತ್ತ ಮುತ್ತಲಿನ ಪ್ರದೇಶಗಳು, ತೋಟಗಳು ಮತ್ತು ಹೊಲಗಳನ್ನು ನೋಡಿದೊಡನೆ ಮನಸ್ಸಿಗೆ ಉತ್ಸಾಹ ತುಂಬುತ್ತವೆ. ತಿಂಗಳಿಗೆ ಒಂದೆರಡು ಬಾರಿ ಇಂತಹ ಪ್ರದೇಶಗಳಿಗೆ ಹೋಗಿ ದೈನಂದಿನ ಏಕತಾನತೆಯನ್ನು ದೂರಮಾಡಿಕೊಂಡು ಮನಸ್ಸನ್ನು ಸಂತೈಸಿಕೊಂಡು ಹಿಂತಿರುವುದು ಇಲ್ಲಿ ನೆಲೆಸಿರುವ ನಮ್ಮಂತ ವಲಸಿಗರಿಗೆ ಇದು ಸಾಮಾನ್ಯದ ಸಂಗತಿ. ಈ ಮಣ್ಣಿನ ವೈಶಿಷ್ಟ್ಯವೇನೋ ಗೊತ್ತಿಲ್ಲ, ವಾದಿಗಳ (ನದಿಗಳು) ಸುತ್ತ ಮುತ್ತಲಿನ ಪ್ರದೇಶಗಳು, ತೋಟಗಳು ಮತ್ತು ಹೊಲಗಳಲ್ಲಿ ಖರ್ಜೂರದ ಮರಗಳು ಯಥೇಚ್ಛವಾಗಿ ಬೆಳೆದಿರುತ್ತವೆ, ಅಲ್ಲಲ್ಲಿ ಮಾವಿನ ಮರಗಳು, ನಿಂಬೆ ಹಣ್ಣಿನ ಮರಗಳು, ಸೀಬೆ ಹಣ್ಣಿನ ಗಿಡಗಳು, ಕರಿಬೇವಿನ ಸೊಪ್ಪಿನ ಗಿಡ, ನುಗ್ಗೇಕಾಯಿ ಗಿಡಗಳು, ಸಪೋಟ ಗಿಡಗಳು ಇತ್ಯಾದಿ ಮರಗಳು ಸ್ವಾಭಾವಿಕವಾಗಿ ಬೆಳೆಯುತ್ತವೆ. ಇವೆಲ್ಲವನ್ನೂ ನೋಡುವುದು ಮನಸ್ಸಿಗೆ ಮುದ ನೀಡುತ್ತವೆ.

ಈ ಮರುಭೂಮಿಯಲ್ಲೂ ವಿವಿಧ ಹಣ್ಣಿನ ಗಿಡಗಳು ಬೆಳೆಯುವುದಕ್ಕೆ ಕಾರಣ ನಮ್ಮ ಭಾರತ ದೇಶ ಎಂದು ಹೇಳಬಹುದು. ಅನಾದಿಕಾಲದಿಂದಲೂ ನಮ್ಮ ಭಾರತ ಮತ್ತು ಅರಬ್ ರಾಷ್ಟ್ರಗಳ ಮಧ್ಯೆ ವ್ಯಾಪಾರ ವಹಿವಾಟು ನಡೆಯುತಿತ್ತು. ಇಲ್ಲಿ ದೊರೆಯುತ್ತಿದ್ದ ಖರ್ಜೂರ, ಸಾಂಬ್ರಾಣಿ, ನಿಂಬೆಹಣ್ಣು, ಮುತ್ತು ರತ್ನಗಳು ಇತ್ಯಾದಿಗಳನ್ನು ಭಾರತಕ್ಕೆ ರಫ್ತು ಮಾಡಿ ಅಲ್ಲಿಂದ ಆಹಾರ ಪದಾರ್ಥಗಳನ್ನು ಆಮದು ಮಾಡಿಕೊಳ್ಳುತಿದ್ದರು. ಹೀಗಾಗಿ ಅಲ್ಲಿಂದ ತರಲಾಗಿದ್ದ ಹಲವಾರು ಧಾನ್ಯಗಳು, ಹಣ್ಣುಗಳ ಬೀಜಗಳನ್ನು ಇಲ್ಲಿ ಬೆಳೆಸಲು ಪ್ರಯತ್ನಿಸಲಾಗಿದೆ. ಈ ಮಣ್ಣಿನ ಗುಣಕ್ಕೆ ಅನುಗುಣವಾಗಿ ವಿವಿಧ ಹಣ್ಣು, ತರಕಾರಿಗಳನ್ನು ಬೆಳೆಯಲು ಪ್ರಾರಂಭಿಸಲಾಗಿದೆ. ಇತ್ತೀಚೆಗಂತೂ ಆಧುನಿಕ ಕೃಷಿ ಪದ್ಧತಿಯಲ್ಲಿ ತರಹೇವಾರಿ ಹಣ್ಣುಗಳು, ತರಕಾರಿಗಳು, ಸೊಪ್ಪುಗಳನ್ನು ಒಮಾನಿನಲ್ಲಿ ಬೆಳೆಯಲಾಗುತ್ತಿದೆ. ಕೇವಲ ಇಲ್ಲಿನ ಮಾರುಕಟ್ಟೆಗೆ ಮಾತ್ರವಲ್ಲದೆ, ಪಕ್ಕದ ಅರಬ್ ರಾಷ್ಟ್ರಗಳಿಗೂ ರಫ್ತು ಮಾಡಲಾಗುತ್ತಿದೆ.




**ಯೆಮೆನ್ ಮಾವಿಗೂ ನಮ್ಮ ಭಾರತಕ್ಕೂ ಅವಿನಾಭಾವ ಸಂಬಂಧವಿದೆ!:-** ಈ ಯೆಮೆನ್ ಮಾವಿನ ಹಣ್ಣುಗಳು ಮೂಲತಃ ಭಾರತದಿಂದಲೇ ಯೆಮೆನ್‌ಗೆ ಹೋಗಿ ಅಲ್ಲಿನ ಹವಾಮಾನಕ್ಕೆ ತಕ್ಕಂತೆ ವಿಶಿಷ್ಟ ರುಚಿ ಪಡೆದುಕೊಂಡಿವೆ ಎಂಬ ವಿಷಯ ತಿಳಿದಾಗ ಭಾರತೀಯರು ಹೆಮ್ಮೆ ಪಡುತ್ತಾರೆ. ಇತಿಹಾಸದ ದಾಖಲೆಗಳ ಪ್ರಕಾರ, ಸುಮಾರು 200 ವರ್ಷಗಳ ಹಿಂದೆ, ಯೆಮೆನ್‌ನ ಲಾಹಜ್ ಪ್ರಾಂತ್ಯದ ಸುಲ್ತಾನರಾದ ಅಹ್ಮದ್ ಬಿನ್ ಅಬ್ದುಲ್ ಕರೀಮ್ ಅಲ್-ಅಬ್ದಾಲಿ ಭಾರತದೊಂದಿಗೆ ಉತ್ತಮ ಸಂಬಂಧ ಹೊಂದಿದ್ದರು. ಈ ಸುಲ್ತಾನರೇ ಲಾಹಜ್‌ನಲ್ಲಿ ಕೃಷಿಯನ್ನು ಅಭಿವೃದ್ಧಿ ಪಡಿಸಲು ಭಾರತದಿಂದ ವಿವಿಧ ಮಾವಿನ ತಳಿಗಳನ್ನು ತರಿಸಿ ನೆಟ್ಟರು ಎಂದು ಹೇಳಲಾಗಿದೆ. ಮೊದಲು ಈ ಸಸಿಗಳನ್ನು ಲಾಹಜ್‌ನ ಪ್ರಸಿದ್ಧ ಅಲ್-ಹುಸೇನಿ ತೋಟಗಳಲ್ಲಿ ನೆಟ್ಟರು. ಅಂದಿನಿಂದ ಲಾಹಜ್ ಯೆಮೆನ್‌ನ ಹಸಿರು ಓಯಸಿಸ್ ಎಂದು ಪ್ರಸಿದ್ಧವಾಯಿತು. ಇಂದಿಗೂ ಯೆಮೆನ್ ಅತ್ಯುತ್ತಮ ತಳಿಗಳಾದ ತೈಮೂರ್ ಮತ್ತು ಅಲ್ಫಾನ್ಸೋ ಅಲ್ಲಿ ಬೆಳೆಯುತ್ತಿರುವುದಕ್ಕೆ ಅಂದು ಸುಲ್ತಾನರು ಭಾರತದಿಂದ ತಂದ ತಳಿಗಳೇ ಅಡಿಪಾಯವಾಗಿವೆ. ಈ ಸುಲ್ತಾನರ ಪ್ರಯತ್ನದಿಂದಾಗಿ ಇಂದು ಯೆಮೆನ್‌ನ ಮಾವುಗಳು ಅರಬ್ ದೇಶಗಳಲ್ಲಿ ಅತ್ಯಂತ ಜನಪ್ರಿಯವಾಗಿವೆ. ಅಂದು ಸುಲ್ತಾನರು ಅಕ್ಕರೆಯಿಂದ ನೆಟ್ಟ ಆ ಗಿಡಗಳೇ ಇಂದು ಯೆಮೆನ್ ಅನ್ನು ಮಾವುಗಳ ನಾಡು ಎಂಬಂತೆ ಮಾಡಿದೆ. ಯೆಮೆನ್ ಮಾತ್ರವಲ್ಲದೆ, ನೆರೆಯ ಒಮನ್ ರಾಷ್ಟ್ರಕ್ಕೂ ಸಹ ಮಾವು ಭಾರತದಿಂದಲೇ ಪರಿಚಯವಾಗಿತ್ತು. 11ನೇ ಶತಮಾನದ ಸುಮಾರಿಗೆ ನಭಾನಿ ಸುಲ್ತಾನರ ಕಾಲದಲ್ಲಿ ಮಾವು ಬಂದಿತ್ತು ಎಂದು ಹೇಳಲಾಗುತ್ತದೆ. ಯೆಮೆನ್‌ನಲ್ಲಿ ಮಾವನ್ನು ಸ್ಥಳೀಯವಾಗಿ ಅಂಬಾ ಎಂದು ಕರೆಯುತ್ತಾರೆ. ಇದನ್ನು ಕೇಳಿದಾಗ ನಮಗೆ ಸಂಸ್ಕೃತದ ಆಮ್ರ ಅಥವಾ ಹಿಂದಿಯ ಆಮ್ ನೆನಪಾಗದೆ ಇರಲು ಸಾಧ್ಯವೇ ಇಲ್ಲ! ಹೆಸರಿನಲ್ಲೂ ನಮ್ಮ ನಂಟು ಹಾಗೆಯೇ ಉಳಿದುಕೊಂಡಿದೆ.



**ಯೆಮೆನ್ ಮಾವುಗಳ ವೈವಿಧ್ಯತೆ:** ಯೆಮೆನ್‌ನಲ್ಲಿ ಬರೋಬ್ಬರಿ 50ಕ್ಕೂ ಹೆಚ್ಚು ತಳಿಗಳಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ, ತೈಮೂರ್, ಖಲ್ಸ್ ಅಲ್-ತೋರ್ ಮಾವು, ಅಬೂ ಸಿನಾರಾ, ಅಬೂ ಸಿನಾರಾ

**ತೈಮೂರ್:** ದುಂಡನೆಯ ಬೃಹತ್ ಗಾತ್ರದ ಈ ಹಣ್ಣನ್ನು ಕೈಯಲ್ಲಿ ಹಿಡಿದಾಗ ಅದರ ಭಾರವೇ ನಮಗೊಂದು ತೂಕದ ಅನುಭವ ನೀಡುತ್ತದೆ. ಸುಮಾರು ನಾಲ್ಕೈದು ಹಣ್ಣುಗಳಿಗೆ ಒಂದು ಕೇಜಿ ತೂಕ ಬರುತ್ತದೆ. ಆದರೆ ಈ ಹಣ್ಣಿನ ಅಸಲಿ ಮ್ಯಾಜಿಕ್ ಇರುವುದು ಅದನ್ನು ಕತ್ತರಿಸಿದಾಗ! ಮಾವಿನ ಹಣ್ಣು ಎಂದರೆ ಸಾಮಾನ್ಯವಾಗಿ ನಾರು ಇರುತ್ತದೆ, ಆದರೆ ಈ ಹಣ್ಣು ಬೆಣ್ಣೆಯಂತಹ ಮೃದುತ್ವವನ್ನು ಹೊಂದಿದೆ. ಯಾವುದೇ ನಾರಿನ ಕಿರಿಕಿರಿಯಿಲ್ಲದ ಈ ಮೃದುತ್ವವೇ ಇದರ ದೊಡ್ಡ ಪ್ಲಸ್ ಪಾಯಿಂಟ್. ಹಣ್ಣಿನ ತುಂಡನ್ನು ಬಾಯಲ್ಲಿಟ್ಟರೆ ಸಾಕು, ಅದು ಐಸ್ ಕ್ರೀಂನಂತೆ ಕರಗಿ ಹೋಗುತ್ತದೆ. ಜೇನುತುಪ್ಪದಂತಹ ತೀವ್ರವಾದ ಸಿಹಿ ಮತ್ತು ಬಾಯಲ್ಲಿ ಉಕ್ಕುವ ರಸದ ಸಮ್ಮಿಲನ ಅದ್ಭುತ. ಇದನ್ನು ತಿಂದಾಗಲೇ ವಿಶ್ವದ ಅತ್ಯುತ್ತಮ ಮಾವುಗಳಲ್ಲಿ ಒಂದು ಎಂಬ ಕೀರ್ತಿ ಈ ಹಣ್ಣಿಗೆ ಏಕೆ ಬಂದಿದೆ ಎಂಬುದು ನಮಗೆ ಅರ್ಥವಾಗುತ್ತದೆ.



**ಖಲ್ಫ್ ಅಲ್-ತೋರ್:** ತೈಮೂರ್ ಪಕ್ಕದಲ್ಲೇ ಕಣ್ಣು ಸೆಳೆಯುವ ಮತ್ತೊಂದು ತಳಿ ಅರಬ್ ಮೂಲದ ಖಲ್ಫ್ ಅಲ್-ತೋರ್. ನೋಡಲು ಅಚ್ಚುಕಟ್ಟಾದ ಹೃದಯದ ಆಕಾರದಲ್ಲಿರುವ ಈ ಹಣ್ಣುಗಳು ಗಾತ್ರದಲ್ಲಿ ಬಹಳ ದೊಡ್ಡವು. ಈ ಯೆಮೆನ್ ಮಾವಿನಹಣ್ಣುಗಳ ವಿಶೇಷತೆ ಏನೆಂದರೆ ಇವುಗಳಲ್ಲಿರುವ ಅತೀವವಾದ ರಸದ ಅಂಶ. ಅತ್ಯಂತ ರಸಭರಿತವಾಗಿರುವ ಕಾರಣದಿಂದಲೇ ಇವುಗಳನ್ನು ಜ್ಯೂಸ್ ಅಥವಾ ಶೇಕ್ ತಯಾರಿಸಲು ಬಳಸುತ್ತಾರೆ. ಯೆಮೆನ್ ಮಾವುಗಳು ನೈಸರ್ಗಿಕವಾಗಿ ಹಣ್ಣಾಗುತ್ತವೆ ಮತ್ತು ಯಾವುದೇ ರಾಸಾಯನಿಕಗಳಿಲ್ಲದೆ ಸಿಗುತ್ತವೆ ಎಂಬ ನಂಬಿಕೆ ಭಾರತೀಯ ಗ್ರಾಹಕರಲ್ಲಿದೆ. ಹೀಗಾಗಿ, ಗಲ್ಫ್ ರಾಷ್ಟ್ರಗಳಲ್ಲಿ ಭಾರತೀಯ ಮಾವು ಸಿಗದ ಸಮಯದಲ್ಲಿ ಯೆಮೆನ್ ಮಾವಿಗೆ ಮೊದಲ ಆದ್ಯತೆ ನೀಡುತ್ತಾರೆ. ಕೆಲವೊಮ್ಮೆ ಭಾರತೀಯ ಮಾವುಗಳಿಗಿಂತ ಯೆಮೆನ್ ಮಾವುಗಳು ಗಲ್ಫ್ ಮಾರುಕಟ್ಟೆಯಲ್ಲಿ ತುಸು ದುಬಾರಿಯಾಗಿದ್ದರೂ, ಅದರ ರುಚಿಗಾಗಿ ಭಾರತೀಯರು ಇದನ್ನು ಖರೀದಿಸಲು ಹಿಂಜರಿಯುವುದಿಲ್ಲ. ಯೆಮೆನ್ ಮಾವುಗಳು ಸಾಮಾನ್ಯವಾಗಿ ಜನವರಿಯಿಂದ ಆಗಸ್ಟ್ ತಿಂಗಳವರೆಗೆ ಲಭ್ಯವಿರುತ್ತವೆ. ಮುಖ್ಯವಾಗಿ ಯೆಮೆನ್‌ನಲ್ಲಿ ಬೆಳೆದರೂ, ಇವುಗಳನ್ನು ಯುನೈಟೆಡ್ ಅರಬ್ ಎಮಿರೇಟ್ ಮತ್ತು ಒಮಾನ್‌ನಂತಹ ಮಧ್ಯಪ್ರಾಚ್ಯದ ಮಾರುಕಟ್ಟೆಗಳಲ್ಲಿ ವ್ಯಾಪಕವಾಗಿ ಮಾರಾಟ ಮಾಡಲಾಗುತ್ತದೆ.

ಮತ್ತೆ ಕೆಲ ತಳಿಗಳಿವೆ ಅದರಲ್ಲಿ ಅಬೂ ಸಿನಾರಾ ಹಣ್ಣುಗಳು ತೆಳುವಾದ ಸಿಪ್ಪೆಯಿಂದ ಕೂಡಿದ್ದು ಇದು ವಿಶಿಷ್ಟ ರುಚಿಯನ್ನು ಹೊಂದಿದೆ. ಅಲ್ಫಾನ್ಸೋ ಮಾವಿನಹಣ್ಣು ಭಾರತ ಮೂಲದ್ದಾದರೂ ಯೆಮೆನ್ ಮಣ್ಣಿನಲ್ಲಿ ಈಗ ಯಶಸ್ವಿಯಾಗಿ ಬೆಳೆಯುತ್ತಿದೆ. ಮತ್ತೊಂದು ತಳಿಯಾದ ಸುಡಾನಿ ಹಣ್ಣು ತನ್ನದೇ ಆದ ವಿಶಿಷ್ಟ ಸುವಾಸನೆಗೆ ಪ್ರಸಿದ್ಧವಾಗಿದೆ.

ಮಾವು ಮೂಲತಃ ನಮ್ಮ ಭಾರತದ್ದೇ ಆಗಿರಬಹುದು, ಆದರೆ ಯೆಮೆನ್ ದೇಶದಲ್ಲಿ ತನ್ನದೇ ಆದ ವಿಶಿಷ್ಟ ಶೈಲಿಯಲ್ಲಿ ಬೆಳೆಸಿ ಅದಕ್ಕೊಂದು ಹೊಸ ಆಯಾಮ ನೀಡಿದೆ. ನೀವು ಎಂದಾದರೂ ಗಲ್ಫ್ ರಾಷ್ಟ್ರಗಳಿಗೆ ಹೋದರೆ ಅಥವಾ ಮಾರುಕಟ್ಟೆಯಲ್ಲಿ ಯೆಮೆನ್ ಮಾವು ಕಂಡರೆ ಖಂಡಿತಾ ಮಿಸ್ ಮಾಡಬೇಡಿ. ಅದು ಕೇವಲ ಹಣ್ಣಲ್ಲ, ಎರಡು ಸಂಸ್ಕೃತಿಗಳನ್ನು ಜೋಡಿಸುವ ಒಂದು ಸಿಹಿ ಕೊಂಡಿ!

**- ಪಿ.ಎಸ್.**ರಂಗನಾಥ

# ಅಲ್ಲಿ ಖರೀದಿಸದಿದ್ದರೆ ಅವರಿಗೆ ಏನೂ ನಷ್ಟವಿಲ್ಲ!

> ವಿಮಾನ ನಿಲ್ದಾಣದಿಂದ ಸ್ವಲ್ಪವೇ ದೂರದಲ್ಲಿರುವ ಅಂಗಡಿಯಲ್ಲಿ 10-20 ರೂಪಾಯಿಗೆ ಸಿಗುವ ಚಹಾ-ಕಾಫಿ, ನಿಲ್ದಾಣದ ಒಳಗೆ ಹೋಗುತ್ತಿದ್ದಂತೆ 10-20 ರೂಪಾಯಿಯಾಗುತ್ತದೆ. ಆಚೆ 20-30 ರೂಪಾಯಿಗೆ ಸಿಗುವ ಸಮೋಸಾ, ಇಡ್ಲಿ, ವಡೆ, ಏರ್ ಪೋರ್ಟ್ ಒಳಗೆ ತಲುಪುತ್ತಿದ್ದಂತೆ 350-400 ರೂಪಾಯಿ ಆಗುತ್ತದೆ.

ವಿದೇಶವಾಸಿ

ವಿಮಾನ ನಿಲ್ದಾಣದ ಒಳಗೆ ಇರುವ ಸ್ಥಳ ಭೂಮಿಯ ಮೇಲಿರುವ ಎಲ್ಲಾ ಸ್ಥಳಗಳಿಗಿಂತ ಅತ್ಯಂತ ದುಬಾರಿಯ ಸ್ಥಳ ಎಂದರೂ ತಪ್ಪಲ್ಲ. ಶಹರ, ನಗರಗಳಲ್ಲಿರುವ ಎಲ್ಲ ರಿಯಲ್ ಎಸ್ಟೇಟ್‌ಗಳಿಗಿಂತಲೂ ದುಬಾರಿ ರಿಯಲ್ ಎಸ್ಟೇಟ್ ಅಂದರೂ ಸರಿಯೇ. ಅಲ್ಲಿಯ ಬಾಡಿಗೆ ಅಷ್ಟು ಹೆಚ್ಚಾಗಿರುತ್ತದೆ. ಅದನ್ನು ತಿಳಿಯುವುದಕ್ಕೂ ಮೊದಲು ವಿಮಾನ ನಿಲ್ದಾಣದ ಆದಾಯ ಹೇಗೆ ಎಂದು ತಿಳಿದುಕೊಳ್ಳಬೇಕು.

ರಾಘವ್ ಛಡ್ಡಾ ಆಮ್ ಆದ್ಮಿ ಪಕ್ಷವನ್ನು ಬಿಟ್ಟು ಭಾರತೀಯ ಜನತಾ ಪಕ್ಷಕ್ಕೆ ಸೇರ್ಪಡೆ ಗೊಂಡರಂತೆ. ಇದು ಎರಡು ವಾರದ ಹಿಂದಿನ ಸುದ್ದಿ. ನನಗೆ ರಾಘವ ಛಡ್ಡಾ ಹೆಸರಿನೊಂದಿಗೆ ನೆನಪಾಗುವುದು, ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ಆಹಾರದ ಬೆಲೆಯ ಕುರಿತು ರಾಜ್ಯಸಭೆಯಲ್ಲಿ ಮಾಡಿದ ಭಾಷಣ.

ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ತಿಂಡಿ-ತಿನಿಸುಗಳ, ಚಹಾ-ಕಾಫಿಯ ಬೆಲೆ ತುಂಬಾ ಹೆಚ್ಚಾಗಿರುತ್ತದೆ, ಅದು ಸಾಮಾನ್ಯ ಪ್ರಯಾಣಿಕರ ಕೈಗೆಟುಕುವಂತಾಗಬೇಕು ಎನ್ನುವುದು ಅವರ ಕಳಕಳಿಯಾಗಿತ್ತು. ಅದು ವಾಸ್ತವ ಹೌದಾದರೂ, ಅವರ ಕಾಳಜಿ ಪ್ರಾಮಾಣಿಕವಾದರೂ, ವಿಮಾನ ನಿಲ್ದಾಣದ ಒಳಗೆ ಬಿಡಿ, ಹೊರಗಿನ ಆವರಣದಲ್ಲಿಯೂ ಕಮ್ಮಿ ಬೆಲೆಗೆ ಆಹಾರ ಪೂರೈಕೆ ಸಾಧ್ಯವಿಲ್ಲ. ಅದಕ್ಕೆ ಕಾರಣ ಹೇಳುವುದಕ್ಕಿಂತ ಮೊದಲು ಇತ್ತೀಚಿನ ಬದಲಾವಣೆಯನ್ನು ತಿಳಿದುಕೊಳ್ಳಬೇಕು.

ವಿಮಾನ ನಿಲ್ದಾಣದಿಂದ ಸ್ವಲ್ಪವೇ ದೂರದಲ್ಲಿರುವ ಅಂಗಡಿಯಲ್ಲಿ 10-20 ರೂಪಾಯಿಗೆ ಸಿಗುವ ಚಹಾ-ಕಾಫಿ, ನಿಲ್ದಾಣದ ಒಳಗೆ ಹೋಗುತ್ತಿದ್ದಂತೆ 10-20 ರೂಪಾಯಿಯಾಗುತ್ತದೆ. ಆಚೆ 20-30 ರೂಪಾಯಿಗೆ ಸಿಗುವ ಸಮೋಸಾ, ಇಡ್ಲಿ, ವಡೆ, ಏರ್ ಪೋರ್ಟ್ ಒಳಗೆ ತಲುಪುತ್ತಿದ್ದಂತೆ 350-400 ರೂಪಾಯಿ ಆಗುತ್ತದೆ.

ಅದೆಲ್ಲ ಹೋಗಲಿ, ಒಂದು ಚಿಕ್ಕ ನೀರಿನ ಬಾಟಲಿ ಬೇಕು ಎಂದರೂ ವಿಮಾನ ನಿಲ್ದಾಣದ ಒಳಗೆ ನೂರು ರೂಪಾಯಿ ತೆರಬೇಕಾಗುತ್ತದೆ. ಇದರಿಂದ ಸಾಮಾನ್ಯ ಜನರಿಗೆ ತೊಂದರೆ ಉಂಟಾಗುತ್ತದೆ. ಈ ದರಗಳಿಗೆ ಒಂದು ಕಡಿವಾಣ ಹಾಕಬೇಕು, ಕಡಿಮೆ ಬೆಲೆಗೂ ಹಸಿದ ಪ್ರಯಾಣಿಕರಿಗೆ ವಿಮಾನ ನಿಲ್ದಾಣದ ಒಳಗೆ ತಿಂಡಿ ತಿನಿಸುಗಳು ಸಿಗುವಂತಾಗಬೇಕು ಎನ್ನುವುದು ವಿಮಾನದಲ್ಲಿ ಪ್ರಯಾಣಿಸುವ ಬಹುತೇಕ ಯಾತ್ರಿಗಳು ಅಳಲು, ಅಹವಾಲು. ಅದನ್ನೇ ಛಡ್ಡಾ ಹೇಳಿದ್ದರು. ಅದಕ್ಕೆ ಪ್ರತಿಕ್ರಿಯೆಯೋ ಅಥವಾ ಕಾಕತಾಳೀಯವೋ ಎಂಬಂತೆ ಕಳೆದ ಮಾರ್ಚ್ ತಿಂಗಳ ಅಂತ್ಯದಲ್ಲಿ, ಕೇಂದ್ರ ನಾಗರಿಕ ವಿಮಾನಯಾನ ಸಚಿವರಾದ ರಾಮ್ ನಾಯ್ಡು ಗೋವಾ, ಲಖನೌ, ರಾಜಕೋಟ್, ಜಮ್ಮು, ಶ್ರೀನಗರ, ಪಾಟ್ನಾ, ಜೈಪುರ, ಇಂದೋರ್ ಸೇರಿದಂತೆ ಒಟ್ಟು ಹನ್ನೊಂದು ನಗರಗಳ ವಿಮಾನ ನಿಲ್ದಾಣಗಳಲ್ಲಿ ಉಡಾನ್ ಯಾತ್ರಾ ಕೆಫೆ ಉದ್ಘಾಟಿಸಿದರು.

ಜತೆಗೆ, ದೇಶದಾದ್ಯಂತ 57 ವಿಮಾನ ನಿಲ್ದಾಣಗಳಲ್ಲಿ ಪ್ರಯಾಣಿಕರಿಗೆ ಅನುಕೂಲವಾಗುವಂತಹ ಹಲವಾರು ಇತರೆ ಸೌಲಭ್ಯಗಳನ್ನೂ ಉದ್ಘಾಟಿಸಿದರು. ಈಗ ಉಡಾನ್ ಯಾತ್ರಾ ಕೆಫೆಗಳು ದೇಶದ ಬಹುತೇಕ ವಿಮಾನ ನಿಲ್ದಾಣಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಅದರಲ್ಲಿ ಬಗೆ ಬಗೆಯ ತಿಂಡಿ ತಿನಿಸುಗಳು ಇರುವುದಿಲ್ಲವಾದರೂ ಆಯಾ ಪ್ರದೇಶಕ್ಕೆ ತಕ್ಕಂತೆ ಅಲ್ಲಿನ ಜನಪ್ರಿಯ ಆಹಾರಗಳು ಕೈಗೆಟುಕುವ ಬೆಲೆಯಲ್ಲಿ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಸಿಗುವಂತಾಗಿದೆ.

ವಿಮಾನ ನಿಲ್ದಾಣದ ಹೊರಗಿನ ಅಂಗಡಿಗಳಲ್ಲಿ ಸಿಗುವಂತೆಯೇ, ಹತ್ತು ರೂಪಾಯಿಗೆ ನೀರು, ಚಹಾ, ಇಪ್ಪತ್ತು ರೂಪಾಯಿಗೆ ಕಾಫಿ, ಪ್ರಾದೇಶಿಕ ತಿನಿಸು, ಸಿಹಿ ತಿಂಡಿ, ಇತ್ಯಾದಿಗಳು ಒಳಗೂ ದೊರಕುತ್ತಿವೆ. ಹಾಗಾದರೆ ವಿಮಾನ ನಿಲ್ದಾಣದಲ್ಲಿ ಆಹಾರ ಯಾಕೆ ಇಷ್ಟು ದುಬಾರಿ? ನಿಲ್ದಾಣದ ಒಳಗಿರುವ ವ್ಯಾಪಾರಿಗಳೆಲ್ಲ ಹೆಚ್ಚಿನ ಲಾಭಕ್ಕಾಗಿ ಬೆಲೆ ಏರಿಸಿರುತ್ತಾರೆಯೇ? ವಿಮಾನದಲ್ಲಿ ಪ್ರಯಾಣಿಸುವ ಪ್ರಯಾಣಿಕರೆಲ್ಲರೂ ಹೆಚ್ಚು ಹಣವುಳ್ಳವರು, ಅವರಿಂದ ದೋಚಿದಷ್ಟು ಬಂತು ಎಂದು ತಿಳಿದಿದ್ದಾರೆಯೇ? ಅಥವಾ ಅದು ಅವರಿಗೆ ಅನಿವಾರ್ಯವೇ? ಒಂದು ವಿಷಯ ತಿಳಿದಿರಲಿ, ಮ್ಯಾಕ್‌ಡೊನಾಲ್ಡ್ಸ್, ಪಿಜ್ಜಾ ಹಟ್, ಕೋಸ್ಟ ಕೆ-, ಸ್ಟಾರ್‌ಬಕ್ಸ್‌ನಂತಹ ಅಂತಾರಾಷ್ಟ್ರೀಯ ಸಂಸ್ಥೆಗಳು ಅಥವಾ ನಮ್ಮ ಭಾರತದ ಸಿಸಿಡಿಯನ್ನೇ ತೆಗೆದುಕೊಳ್ಳಿ, ದೇಶದಾದ್ಯಂತ ಎಲ್ಲದಕ್ಕೂ ಒಂದೇ ಬೆಲೆ ಇದ್ದರೂ, ವಿಮಾನ ನಿಲ್ದಾಣದಲ್ಲಿ ಅದೇ ವಸ್ತುವಿಗೆ ಪ್ರಯಾಣಿಕ ಹೆಚ್ಚಿನ ಬೆಲೆ ತೆರಬೇಕಾಗುತ್ತದೆ.

ಅಲ್ಲಿಯ ಬಾಡಿಗೆ ಅಷ್ಟು ಹೆಚ್ಚಾಗಿರುತ್ತದೆ. ಅದನ್ನು ತಿಳಿಯುವುದಕ್ಕೂ ಮೊದಲು ವಿಮಾನ ನಿಲ್ದಾಣದ ಆದಾಯ ಹೇಗೆ ಎಂದು ತಿಳಿದುಕೊಳ್ಳಬೇಕು.

ಭಾರತದಲ್ಲಿ ವಿಮಾನ ನಿಲ್ದಾಣಗಳ ನಿರ್ವಹಣೆಗೆ ಎರಡು ವಿಧದಿಂದ ಆದಾಯ ಸಂಗ್ರಹಿಸಲಾಗುತ್ತದೆ. ಒಂದು, ವಿಮಾನಯಾನಕ್ಕೆ ಸಂಬಂಧಪಟ್ಟ ಶುಲ್ಕಗಳಿಂದ ಬರುವ ಆದಾಯ. ಇನ್ನೊಂದು ವಿಮಾನಯಾನೇತರ ಆದಾಯಗಳು.



ವಿಮಾನಯಾನಕ್ಕೆ ಸಂಬಂಧಪಟ್ಟ ಶುಲ್ಕದಲ್ಲಿ, ವಿಮಾನದ ಲ್ಯಾಂಡಿಂಗ್, ಪಾರ್ಕಿಂಗ್, ಏರೋಬ್ರಿಜ್, ಪ್ರಯಾಣಿಕರ ಮತ್ತು ವಿಮಾನ ನಿಲ್ದಾಣದ ಭದ್ರತಾ ಶುಲ್ಕಗಳು ಸೇರಿಕೊಂಡಿರುತ್ತವೆ.

ಇವನ್ನೆಲ್ಲ ಪ್ರಯಾಣಿಕರಿಂದ ಸಂಗ್ರಹಿಸಲಾಗುತ್ತದೆ. ಈ ಶುಲ್ಕಗಳೆಲ್ಲ ವಿಮಾನದ ಟಿಕೆಟ್ ದರದಲ್ಲಿ ಸೇರಿಕೊಂಡಿರುತ್ತವೆ. ಇದನ್ನು ಬಳಕೆದಾರರ ಅಭಿವೃದ್ಧಿ ಶುಲ್ಕ ಎಂದು ಕರೆಯಲಾಗುತ್ತದೆ. ಈ ಶುಲ್ಕ ಸಾಮಾನ್ಯವಾಗಿ ನೂರ ಮೂವತ್ತು ರೂಪಾಯಿಗಳಿಂದ ಆರಂಭವಾಗಿ ಸಾವಿರದ ಐದುನೂರು ರೂಪಾಯಿಗಳ ಮಧ್ಯದಲ್ಲಿದ್ದು, ಬೇರೆ ಬೇರೆ ನಗರಗಳಿಗೆ ಅನುಗುಣವಾಗಿ, ಜತೆಗೆ ದೇಶಿಯ ವಿಮಾನ ನಿಲ್ದಾಣಗಳು, ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳು, ಎಕಾನಮಿ ಕ್ಲಾಸ್ ಮತ್ತು ಬಿಸಿನೆಸ್ ಕ್ಲಾಸ್, ಹೀಗೆ ಭಿನ್ನ ವಿಭಾಗಗಳಿಗೆ ತಕ್ಕಂತೆ ಬೇರೆ ಬೇರೆಯ ಶುಲ್ಕವನ್ನು ಸಂಗ್ರಹಿಸಲಾಗುತ್ತದೆ.

ವಿಮಾನಯಾನೇತರ ಸುಂಕ ಸಂಗ್ರಹದ ಪಟ್ಟಿಯಲ್ಲಿ, ಡ್ಯೂಟಿ-ಫ್ರೀ ಮಳಿಗೆ, ರಿಟೇಲ್ ಮಳಿಗೆಗಳು, ಪಾರ್ಕಿಂಗ್, ಜಾಹೀರಾತು ಮತ್ತು ತಿಂಡಿ ತಿನಿಸುಗಳ ಮರಾಟ, ಇತ್ಯಾದಿಗಳಿಂದ ಶುಲ್ಕ ಸಂಗ್ರಹಿಸಲಾಗುತ್ತದೆ. ಭಾರತ ಸರಕಾರದ ನಿಯಮಗಳ ಪ್ರಕಾರ, ವಿಮಾನ ನಿಲ್ದಾಣಗಳು ವಿಮಾನಯಾನ ಸಂಸ್ಥೆಗಳಿಗೆ ಮತ್ತು ಪ್ರಯಾಣಿಕರಿಗೆ ಒಂದು ನಿರ್ದಿಷ್ಟ ಮಿತಿಗಿಂತ ಹೆಚ್ಚು ಶುಲ್ಕ ವಿಧಿಸುವಂತಿಲ್ಲ.

ಅಂಕಿ-ಅಂಶಗಳ ಪ್ರಕಾರ ಮುಂಬೈ ಮತ್ತು ದಿಲ್ಲಿ ವಿಮಾನನಿಲ್ದಾಣದಿಂದ ತಲಾ 40 ಮತ್ತು 20 ಪ್ರತಿಶತ ಮಾತ್ರ ವಾಯುಯಾನದ ಶುಲ್ಕದಿಂದ ಸಂಗ್ರಹವಾಗುತ್ತದೆ. ಅಂದರೆ, ಉಳಿದ ಹಣವನ್ನು ಇತರೆ ಶುಲ್ಕದಿಂದಲೇ ಸಂಗ್ರಹಿಸಬೇಕಾಗುತ್ತದೆ. ಇತರೆ ಶುಲ್ಕಕ್ಕೆ ಸರಕಾರದ ಯಾವುದೇ ನಿರ್ಬಂಧಗಳಿಲ್ಲದ ಕಾರಣ ವಿಮಾನ ನಿಲ್ದಾಣಗಳು ಅವುಗಳಿಂದ ಹೆಚ್ಚಿನ ಶುಲ್ಕ ಸಂಗ್ರಹಿಸಲು ಪ್ರಯತ್ನಿಸುತ್ತವೆ.

ಅಷ್ಟಾದರೂ ದೇಶದ ಪ್ರಮುಖ ವಿಮಾನ ನಿಲ್ದಾಣಗಳು ನಷ್ಟದಲ್ಲಿರುವ ಸುದ್ದಿ ಓದುತ್ತೇವೆ. ಕಳೆದ ವರ್ಷ ಬೆಂಗಳೂರು ವಿಮಾನ ನಿಲ್ದಾಣ ಲಾಭ ಮಾಡಿದೆ. ಅದೂ ಹದಿನಾರು ವರ್ಷಗಳ ನಂತರ!

ನೀವು ವಿಮಾನ ನಿಲ್ದಾಣಕ್ಕೆ ಆಗಾಗ ಹೋಗುವವರಾಗಿದ್ದರೆ ಗಮನಿಸಿರುತ್ತೀರಿ. ಕೆಲವು ವಿಮಾನ ನಿಲ್ದಾಣಗಳ ಅಂಗಡಿ ಅಥವಾ ಮಳಿಗೆಗಳಲ್ಲಿ ಜನರೇ ಇರುವುದಿಲ್ಲ. ಬೆಂಗಳೂರಿನ ವಿಮಾನ ನಿಲ್ದಾಣಕ್ಕೆ ಪ್ರತಿನಿತ್ಯ ಸುಮಾರು ಒಂದು ಲಕ್ಷ ಜನ ಪ್ರಯಾಣಿಕರು ಭೇಟಿ ನೀಡುತ್ತಾರೆ. ಅದರಲ್ಲಿ ಬರುವವರ, ಹೋಗುವವರ ಸಂಖ್ಯೆ ಅರ್ಧ-ಅರ್ಧ ಎಂದು ಹಿಡಿದರೂ, ಐವತ್ತು ಸಾವಿರ ಜನ, ಒಂದು ಗಂಟೆಗೆ ಸರಾಸರಿ ಎರಡು ಸಾವಿರ ಜನ.

ನಿಲ್ದಾಣದ ಒಳಗೆ ತಿನಿಸು ಪೂರೈಸುವ ಹತ್ತು ಸ್ಥಳಗಳಿವೆ ಅಂದುಕೊಳ್ಳಿ, ಒಂದೊಂದಕ್ಕೂ ಇನ್ನೂರು ಜನ, ಅದರಲ್ಲಿ ಶೇಕಡಾ ಹತ್ತು ಪ್ರತಿಶತ ಮಾತ್ರವೇ ವಿಮಾನ ನಿಲ್ದಾಣದಲ್ಲಿ ತಿನ್ನುತ್ತಾರೆ ಎಂದರೂ ಇಪ್ಪತ್ತು ಜನ ಇರಬೇಕಿತ್ತು. ಆದರೆ, ಡ್ಯೂಟಿ ಫ್ರೀ ಹೊರತುಪಡಿಸಿ, ಅಂದು-ಇಂದು ಬಿಟ್ಟರೆ, ಎಲ್ಲಿಯೂ ನಿಮಗೆ ಅಷ್ಟು ಜನ ಕಾಣಿಸುವುದಿಲ್ಲ. ಇನ್ನು ಬಟ್ಟೆ, ಅಲಂಕಾರ ಸಾಮಗ್ರಿಗಳು, ಡ್ರೈಫ್ರೂಟ್ಸ್, ವಗೈರೆಗಳ ಮಳಿಗೆಗಳದ್ದೂ ಇದೇ ಹಣೆಬರಹ.



ಇಷ್ಟು ಜನ ಬಂದರೂ, ವಿಮಾನ ನಿಲ್ದಾಣಗಳು ಇಷ್ಟು ಹಣ ಸಂಗ್ರಹಿಸಿದರೂ ಲಾಭ ಮಾಡಲಾಗುತ್ತಿಲ್ಲ ಯಾಕೆ? ವಿಮಾನ ನಿಲ್ದಾಣಗಳಲ್ಲಿ ಬಂದ ಆದಾಯದಲ್ಲಿ ಸುಮಾರು ನಲವತ್ತು ಪ್ರತಿಶತ ಸರಕಾರದ ಬೊಕ್ಕಸಕ್ಕೆ ಸೇರುತ್ತದೆ. ಅದರೊಂದಿಗೆ ಪ್ರಯಾಣಿಕರ ಸಂಖ್ಯೆ ಆಧರಿಸಿ, ಕನಿಷ್ಠ ವಾರ್ಷಿಕ ಮೊತ್ತವನ್ನು ಸರಕಾರಕ್ಕೆ ನೀಡಬೇಕಾಗುತ್ತದೆ.

ಶೇ.20ರಷ್ಟು ವಿದ್ಯುತ್, ನೀರು, ಭದ್ರತೆ, ಸ್ವಚ್ಛತೆ ಇತ್ಯಾದಿಗಳ ನಿರ್ವಹಣೆಗೆ ಸಲ್ಲುತ್ತದೆ. ಅದರೊಂದಿಗೆ ಡಿಪ್ರಿಸಿಯೇಷನ್, ಎಬಿಡ್ಟಾ ಇತ್ಯಾದಿ. ಅಲ್ಲಿಗೆ ವಿಮಾನ ನಿಲ್ದಾಣದ ನಿರ್ವಹಣೆಗೆ ಹೆಣಗಾಡುವಂತಾಗುತ್ತದೆ. ಇದು ನಿಲ್ದಾಣ ನಿರ್ವಹಣೆಯ ಕಥೆಯಾದರೆ, ಮಳಿಗೆ, ಅಂಗಡಿಯವರ ಕಥೆ ಇನ್ನೊಂದು ರೀತಿ.

ತಮ್ಮ ಖರ್ಚು ತೂಗಿಸಲು ವಿಮಾನ ನಿಲ್ದಾಣ ನಿರ್ವಹಿಸುವವರು ಅಂಗಡಿಯ ಸ್ಥಳವನ್ನು ಹೆಚ್ಚಿನ ಮೊತ್ತಕ್ಕೆ ಬಾಡಿಗೆಗೆ ನೀಡುತ್ತಾರೆ. ಆಗಲೇ ಹೇಳಿದಂತೆ, ಈ ಮೊತ್ತ ಅದೇ ನಗರದ ಪ್ರಮುಖ ಸ್ಥಳದಲ್ಲಿರುವ ಬಾಡಿಗೆಗಿಂತಲೂ ಹೆಚ್ಚಾಗಿರುತ್ತದೆ. ಸಾಮಾನ್ಯವಾಗಿ ನಿಲ್ದಾಣಗಳು ಊರ ಹೊರಗೆ ಇರುವುದರಿಂದ ಕೆಲಸಗಾರರಿಗೆ ಹೋಗಿ ಬರುವ ಸೌಕರ್ಯ ಮಾಡಿಕೊಡ ಬೇಕಾಗುತ್ತದೆ.

ಒಳಗೆ ಬರುವುದಕ್ಕಿಂತ ಮೊದಲು ಭದ್ರತೆ, ತಪಾಸಣೆಯ ಕಾರಣ ಕೆಲಸದವರ ಸಮಯ ಪೋಲಾಗುತ್ತದೆ. ಅದರೊಂದಿಗೆ ಐಡಿ ಕಾರ್ಡ್, ತಪಾಸಣೆ ವೆಚ್ಚ ಇತ್ಯಾದಿಗಳಿಗೆ ಪ್ರತಿ ತಿಂಗಳು ಪ್ರತಿ ವ್ಯಕ್ತಿಗೆ ಇಂತಿಷ್ಟು ಎಂದು ಹಣ ಕಟ್ಟಬೇಕಾಗುತ್ತದೆ. ಅಗ್ನಿ ಅವಘಡ, ನೆರೆ ಇತ್ಯಾದಿ ಸುರಕ್ಷತೆಯ ಕಾರಣಕ್ಕಾಗಿ ಇಲ್ಲಿ ವಸ್ತುಗಳನ್ನು ಹೆಚ್ಚು ದಾಸ್ತಾನು ಮಾಡಿಕೊಳ್ಳುವಂತಿಲ್ಲ.

ತ್ಯಾಜ್ಯ ವಿಲೇವಾರಿಯ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗುತ್ತದೆ. ಸಾಮಾನ್ಯವಾಗಿ ವಿಮಾನಗಳ ಹಾರಾಟ ರಾತ್ರಿ ವೇಳೆ ಹೆಚ್ಚಾಗಿರುವುದರಿಂದ ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವವರಿಗೆ ಹೆಚ್ಚಿನ ವೇತನ ನೀಡಬೇಕಾಗುತ್ತದೆ.

ವಿಮಾನ ನಿಲ್ದಾಣವಾದದ್ದರಿಂದ ವಿಭಿನ್ನವಾಗಿ, ಆಕರ್ಷಕವಾಗಿ ಕಾಣುವಂತೆ ವಸ್ತುಗಳನ್ನು ಜೋಡಿಸಲು ತಗಲುವ ವೆಚ್ಚ.. ಈ ಪಟ್ಟಿ ಹೀಗೇ ಬೆಳೆಯುತ್ತಾ ಹೋಗುತ್ತದೆ. ಅದರೊಂದಿಗೆ ತಿಂಡಿ ತಿನಿಸು ಮಾರುವವರಾದರಂತೂ ಮುಗಿದೇ ಹೋಯಿತು.

ಕೆಲವು ಕಡೆ ಒಲೆ ಹಚ್ಚಲು ಅವಕಾಶ ಇರುವುದಿಲ್ಲ. ಇದ್ದರೂ ಸಾಕಷ್ಟು ಕಡಿವಾಣ. ಆದ್ದರಿಂದ ಆಹಾರ ಹೊರಗೆ ತಯಾರಿಸಿ, ಒಳಗೆ ತಂದು ಬಿಸಿ ಮಾಡಿಕೊಡುವವರೇ ಹೆಚ್ಚು. ಆದ್ದರಿಂದ ವಿಮಾನ ನಿಲ್ದಾಣದಲ್ಲಿ ಸಿಗುವ ಆಹಾರ ಹೊರಗಿನಷ್ಟು ರುಚಿ ಅನ್ನಿಸುವುದಿಲ್ಲ. ಈಗಂತೂ ಲಾಂಜ್ ಕಾರ್ಡ್ ಹೊಂದಿರುವವರ ಸಂಖ್ಯೆ ಹೆಚ್ಚಾಗುತ್ತಿದ್ದು, ಅವರೆಲ್ಲ ತಮ್ಮ ಹೊಟ್ಟೆ ತುಂಬಿಸಿಕೊಳ್ಳಲು ಲಾಂಜ್ ಮೊರೆ ಹೋಗುತ್ತಿದ್ದಾರೆ.

ಇಂಥ ಪರಿಸ್ಥಿತಿಯಲ್ಲಿ ಒಳಗೆ ಅಂಗಡಿ ಇಟ್ಟವ ಲಾಭ ಮಾಡಬೇಕು ಎಂದರೆ ಎಷ್ಟು ಪಟ್ಟು ಬೆಲೆ ಹೆಚ್ಚಿಸಬೇಕು ಯೋಚಿಸಿ. ಆದರೂ ವಿಮಾನನಿಲ್ದಾಣಗಳಲ್ಲಿ ಮಳಿಗೆಗಳು ಎಷ್ಟೋ ವರ್ಷದಿಂದ ಅಲ್ಲಿಯೇ ಬೀಡು ಬಿಟ್ಟಿರಲು ಕಾರಣ, ಬಹುತೇಕ ಮಳಿಗೆಗಳು ಐದು ವರ್ಷಗಳ ಒಪ್ಪಂದದಲ್ಲಿರುತ್ತವೆ.

ಆದ್ದರಿಂದ ಅದಕ್ಕಿಂತ ಮೊದಲೇ ಮುಚ್ಚಿಕೊಂಡು ಹೋದರೂ ಅಷ್ಟು ಹಣ ತೆರಬೇಕಾಗುತ್ತದೆ. ಆದರೆ ವಿಮಾನನಿಲ್ದಾಣದಲ್ಲಿ ಸಿಗುವ ಪ್ರಚಾರ ಅವರಿಗೆ ಬೇರೆ ಎಲ್ಲೂ ಸಿಗುವುದಿಲ್ಲ. ಅಲ್ಲಿಯ ಮಳಿಗೆಗಳು, ಬ್ರ್ಯಾಂಡ್‌ಗಳು ಪ್ರತಿನಿತ್ಯ ಸಾವಿರಾರು ಜನರನ್ನು ತಲುಪುತ್ತವೆ.

ಜಾಹೀರಾತು ಇಂದು ವ್ಯಾಪಾರದ ಪ್ರಮುಖ ಅಂಗ. ಬೀದಿ ಬದಿಯಲ್ಲಿರುವ ಒಂದು ಹೋರ್ಡಿಂಗ್, ಪೋಸ್ಟರ್ ಮೇಲೆ ದಾರಿಹೋಕರು ಕೆಲವು ಸೆಕೆಂಡು ಮಾತ್ರ ಕಣ್ಣಾಡಿಸುತ್ತಾರೆ. ದೂರದರ್ಶನದಲ್ಲಿ, ಚಿತ್ರಮಂದಿರದಲ್ಲಿ ಬರುವ ಜಾಹೀರಾತು ಕೆಲವು ನಿಮಿಷಗಳು ಮಾತ್ರ ನೆನಪಿನಲ್ಲಿರುತ್ತವೆ. ಅದೇ ನೀವು ಬಸ್ ನಿಲ್ದಾಣದಲ್ಲಿ ಕಾಯುತ್ತಿರುವಾಗ ನಿಮ್ಮ ಮುಂದೆ ಜಾಹೀರಾತು ಇದ್ದರೆ ಬಸ್ ಬರುವವರೆಗೂ ಅದು ಕಣ್ಣ ಮುಂದಿರುತ್ತದೆ.

ವಿಮಾನ ನಿಲ್ದಾಣದಲ್ಲಿಯೂ ಅಷ್ಟೇ, ಒಂದು ಗಂಟೆ ಮೊದಲೇ ಚೆಕ್-ಇನ್ ಆಗಿ ಗೇಟಿನ ಬಳಿ ಕುಳಿತರೆ, ವಿಮಾನದ ಒಳಗೆ ಕುಳಿತುಕೊಳ್ಳುವವರೆಗೂ ಅಂಗಡಿ ಅಥವಾ ಮಳಿಗೆ ನಮ್ಮ ಕಣ್ಣ ಮುಂದೆಯೇ ಇರುತ್ತದೆ. ಆ ಮಳಿಗೆಯ ಲೋಗೋ, ಹೆಸರು ಎಲ್ಲವೂ ನಮ್ಮ ಮನದೊಳಗೆ ಇಳಿದುಬಿಡುತ್ತದೆ.

ವಿಮಾನಯಾನ ಮಾಡುವ ಯಾತ್ರಿಗಳು ಆಟೋ ಅಥವಾ ಬಸ್ಸಿಗೆ ಕಾಯುವ ದರ್ಜೆಯ ಜನರಲ್ಲ, ಆರ್ಥಿಕವಾಗಿ ಅವರಿಗಿಂತ ಗಟ್ಟಿಗರಾಗಿರುತ್ತಾರೆ ಎನ್ನುವುದು ಅವರಿಗೆ ಚೆನ್ನಾಗಿ ಗೊತ್ತು. ಯಾತ್ರಿಗಳು ತಮ್ಮ ಮಳಿಗೆಯಲ್ಲಿ ವಸ್ತುಗಳನ್ನು, ತಿನಿಸುಗಳನ್ನು ಖರೀದಿಸಿದರೆ ಒಳ್ಳೆಯದು, ಖರೀದಿಸದಿದ್ದರೆ ಅವರಿಗೆ ಯಾವ ಬೇಸರವೂ ಇಲ್ಲ. ಅವರಿಗೆ ಬೇಕಾದದ್ದು, ತಮ್ಮ ಬ್ರ್ಯಾಂಡನ್ನು ಜನರ ತಲೆಯ ಒಳಗೆ ಸ್ಥಿರವಾಗಿಸುವುದು. ಆ ಮೂಲಕ ನಗರದಲ್ಲಿರುವ ತಮ್ಮ ಮಳಿಗೆಗಳಿಗೆ ಮುಂದೊಂದು ದಿನ ಈ ಯಾತ್ರಿಗಳು ಬರುವಂತೆ ಮಾಡುವುದು. ಆದ್ದರಿಂದ ವಿಮಾನ ನಿಲ್ದಾಣದಲ್ಲಿರುವ ಅಂಗಡಿಗಳಾಗಲಿ, ಮಳಿಗೆಗಳಾಗಲಿ ಲಾಭ ಗಳಿಸುತ್ತಿಲ್ಲವಾದರೂ, ನಷ್ಟದಲ್ಲಿವೆ ಎಂದು ಭಾವಿಸಬಾರದು.

**- ಕಿರಣ್ ಉಪಾಧ್ಯಾಯ,** ಬಹ್ರೈನ್

# ವಿದ್ಯುತ್ ಅವ್ಯವಸ್ಥೆ: ಅನ್ನದಾತರ ಪ್ರತಿಭಟನೆ

## ಆಲೂರು ತಾಲ್ಲೂಕು ವಿದ್ಯುತ್ ಸಮಸ್ಯೆ ಚರ್ಚೆ ನಡೆಸಲು ಇಂದು ಸಭೆ: ಶಾಸಕ ಸಿಮೆಂಟ್ ಮಂಜು

• ಪ್ರಜೋದಯ ವರದಿ

**ಆಲೂರು:** ಆಲೂರು ತಾಲ್ಲೂಕಿನಲ್ಲಿ ವಿದ್ಯುತ್ ವ್ಯತ್ಯಯ ಸಮಸ್ಯೆ ಚರ್ಚಿಸುವ ಬಗ್ಗೆ ಮೇ 5 ರಂದು ಬೆಳಗ್ಗೆ ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಸೆಸ್ಕ್ ಇಲಾಖೆ ಅಧಿಕಾರಿಗಳ ಸಭೆ ಕರೆಯಲಾಗಿದೆ ಎಂದು ಶಾಸಕ ಸಿಮೆಂಟ್ ಮಂಜು ಅವರು ತಿಳಿಸಿದ್ದಾರೆ.

ಪಟ್ಟಣದ ಸೆಸ್ಕ್ ಕಚೇರಿ ಎದುರು ತಾಲ್ಲೂಕು ರೈತ ಸಂಘ ಮತ್ತು ರೈತರು ಸೋಮವಾರ ವಿದ್ಯುತ್ ಅವ್ಯವಸ್ಥೆ ಕುರಿತು ಪ್ರತಿಭಟನೆ ನಡೆಸುತ್ತಿದ್ದ ಸ್ಥಳಕ್ಕೆ ಆಗಮಿಸಿದ ಶಾಸಕ ಸಿಮೆಂಟ್ ಮಂಜು ಅವರು ಪ್ರತಿಭಟನಾಕಾರ ರೊಂದಿಗೆ ಮಾತನಾಡಿ, ತಾಲ್ಲೂಕಿನಲ್ಲಿ ರೈತರಿಗೆ ನಿರಂತರವಾಗಿ ವಿದ್ಯುತ್ ಸಂಪರ್ಕ ಕೊಡುತ್ತಿಲ್ಲವೆಂದು ಪ್ರತಿಭಟನೆ ನಡೆಸುತ್ತಿದ್ದಾರೆ. ಈ ಬಗ್ಗೆ ಸಂಬಂಧಿಸಿದ ಮಂತ್ರಿಗಳೊಡನೆ ಮಾತನಾಡಿದ್ದೇನೆ. ಇತ್ತೀಚೆಗೆ ಹುಣಸವಳ್ಳಿ ಗ್ರಾಮದಲ್ಲಿ ವಿದ್ಯುತ್ ಅವಘಡದಿಂದ ಮೃತಪಟ್ಟ ವ್ಯಕ್ತಿಗೆ ಪರಿಹಾರ ನೀಡಬೇಕು ಎಂದು ಪ್ರಸ್ತಾಪವನ್ನೂ ಸಹ ಸಲ್ಲಿಸಿದ್ದೇನೆ. ನಾಳೆ ನಡೆಯುವ ಸಭೆಯಲ್ಲಿ ಸೆಸ್ಕ್ ಇಲಾಖೆ ಅಧೀಕ್ಷಕ ಇಂಜಿನಿಯರ್ ಸೇರಿದಂತೆ ಎಲ್ಲ ಇಂಜಿನಿಯರುಗಳು ಭಾಗವಹಿಸಲಿದ್ದಾರೆ ಎಂದು ಅವರು ಹೇಳಿದರು.



ಈಗಾಗಲೇ ಒಂದು ವಿದ್ಯುತ್ ಉಪಕೇಂದ್ರ ಕಾಮಗಾರಿ ನಡೆಯುತ್ತಿದೆ. ಮತ್ತೊಂದು ವಿದ್ಯುತ್ ಉಪ ಕೇಂದ್ರ ಸ್ಥಾಪನೆಗೆ ಸದ್ಯದಲ್ಲೆ ಭೂಮಿ ಪೂಜೆ ನೆರವೇರಿಸಲಾಗುವುದು. ಮೇ. 5 ರಂದು ರೈತರ ಸಮ್ಮುಖದಲ್ಲಿ ಸಭೆ ನಡೆಸಲಾಗುತ್ತದೆ. ರೈತರು ಸಭೆಯಲ್ಲಿ ಪಾಲ್ಗೊಂಡು ಸಹರಿಸಬೇಕು ಎಂದು ಮನವಿ ಮಾಡಿದರು.

ಭಾರತೀಯ ಕಿಸಾನ್ ಸಂಘದ ರಾಜ್ಯ ಪದಾಧಿಕಾರಿ ಯೋಗೇಂದರ್ ಮಾತನಾಡಿ, ವಿದ್ಯುತ್ ವ್ಯತ್ಯಯ ಬಗ್ಗೆ ಸೆಸ್ಕ್ ಇಲಾಖೆ ಅಧಿಕಾರಿಗಳನ್ನು ಪ್ರಶ್ನಿಸಿ, ಪ್ರತಿ ತಿಂಗಳು ರೈತರ ಸಭೆ ನಡೆಸದಿರುವ ಬಗ್ಗೆ ಅಸಾಮಾಧಾನ ವ್ಯಕ್ತಪಡಿಸಿದರು. ಇತ್ತೀಚೆಗೆ ಹುಣಸವಳ್ಳಿ ಗ್ರಾಮದಲ್ಲಾಗಿರುವ ಅವಘಡಣೆಗೆ ಸೆಸ್ಕ್ ಅಧಿಕಾರಿಗಳೆ ಕಾರಣ ಎಂದು ರೈತರು ದೂರಿದರು.

ಮೃತಪಟ್ಟಿರುವ ಯುವಕನ ಕುಟುಂಬದಲ್ಲಿ ತಂದೆಯ ಕಾಲು ಮುರಿದಿದೆ, ತಾಯಿ ತಲೆಗೆ ಪೆಟ್ಟು ಬಿದ್ದು ಅರೆ ಪ್ರಜ್ಞಾವಸ್ತೆಯಾಗಿದ್ದಾರೆ. ಕುಟುಂಬಕ್ಕೆ ಆಧಾರವಾಗಿದ್ದ ಯುವಕ ಮೃತಪಟ್ಟಿದ್ದಾನೆ. ಈ ಕುಟುಂಬಕ್ಕೆ ತಕ್ಷಣ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ಅಲ್ಲದೆ ಪ್ರತಿನಿತ್ಯ ವಿದ್ಯುತ್ ಸಮಸ್ಯೆಯಿಂದಾಗಿ ರೈತರ ಬೆಳೆದ ಬೆಳೆಗಳು ನಾಶವಾಗುತ್ತಿವೆ. ಬೆಳೆಗಳಿಗೆ ನೀರು ಹರಿಸಲು ಸಾಧ್ಯವಾಗುತ್ತಿಲ್ಲ. ಇದರಿಂದ ರೈತರು ಆತಂಕದಲ್ಲಿ ದಿನ ದೂಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ, ಸಮಸ್ಯೆ ಸರಿಪಡಿಸದಿದ್ದರೆ ಉಗ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ರಾಜ್ಯ ರೈತ ಸಂಘಟನೆ ಒಕ್ಕೂಟದ ಜಿಲ್ಲಾಧ್ಯಕ್ಷ ಎಚ್.ಬಿ.ಧರ್ಮರಾಜ್, ಉಪಾಧ್ಯಕ್ಷ ನಾಗೇಶ್, ಕಾರ್ಯದರ್ಶಿ ಮಲ್ಲೇಶ್, ಕೃಷ್ಣಮೂರ್ತಿ, ಜಯಪಾಲ್, ಮಂಜು, ಗಿರೀಶ್, ಕುಮಾರ್, ಹರೀಶ್ ಸೇರಿದಂತೆ ನೂರಾರು ರೈತರು ಪ್ರತಿಭಟನೆ ನೇತೃತ್ವ ವಹಿಸಿದ್ದರು.

# 3 ರಾಜ್ಯಗಳಲ್ಲಿ ಬಿಜೆಪಿ ಜಯಭೇರಿ: ಸಂಭ್ರಮಾಚರಣೆ

• ಪ್ರಜೋದಯ ವರದಿ

**ಬೇಲೂರು:** ಪಂಚ ರಾಜ್ಯದ ಚುನಾವಣೆ ಫಲಿತಾಂಶದಲ್ಲಿ ಬಿಜೆಪಿ ಪಕ್ಷ ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಪುದುಚೇರಿಯಲ್ಲಿ ಪ್ರಚಂಡ ಬಹುಮತ ಪಡೆಯುವ ಮೂಲಕ ಅಧಿಕಾರ ಚುಕ್ಕಾಣಿ ಹಿಡಿದ ಹಿನ್ನೆಲೆಯಲ್ಲಿ ಬೇಲೂರು ಬಿಜೆಪಿ ಪಕ್ಷದಿಂದ ಶಾಸಕ ಹೆಚ್.ಕೆ.ಸುರೇಶ್ ಅವರ ನೇತೃತ್ವದಲ್ಲಿ ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಪಟಾಕಿ ಸಿಡಿಸಿ, ನಾಶಿಕ್ ಡೋಲ್ ಬಾರಿಸಿ ಬಿಜೆಪಿ ಕಾರ್ಯಕರ್ತರು ಸಿಹಿ ಹಂಚಿ, ಕುಣಿದು ಕುಪ್ಪಣಿಸಿ ಸಂಭ್ರಮಾಚರಣೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಹೆಚ್.ಕೆ.ಸುರೇಶ್, ಪ್ರಧಾನಿ ನರೇಂದ್ರ ಮೋದಿ ಹಾಗೂ ಚುನಾವಣೆಯ ಚಾಣಾಕ್ಷ ಅಮಿತ್ ಶಾ ನೇತೃತ್ವದಲ್ಲಿ ಎಂದಿಗೂ ಕಾಣದ ರೀತಿಯಲ್ಲಿ ಬಿಜೆಪಿ ಜಯಭೇರಿ ಬಾರಿಸಿದೆ. ವಿಶೇಷವಾಗಿ ಕಳೆದ ಹಲವು ದಶಕಗಳಿಂದ ಪಶ್ಚಿಮ ಬಂಗಾಳ ರಾಜ್ಯದಲ್ಲಿ ಕಮ್ಯುನಿಸ್ಟ್ ಆಡಳಿತ ಮತ್ತು ಮಮತಾ ದೀದಿಯ ದುರಾಡಳಿತದಿಂದ ಅಲ್ಲಿನ ಹಿಂದೂಗಳು ಅನುಭವಿಸಿದ ನರಕ ಯಾತನೆ ನಿಜಕ್ಕೂ ಹೇಳತೀರದಾಗಿತ್ತು. ಇದೀಗ ಅವರಿಗೆ ಸಂತಸ ಮೂಡಿಸಿದೆ ಎಂದು ಹರ್ಷ ವ್ಯಕ್ತಪಡಿಸಿದರು.



ಪಶ್ಚಿಮ ಬಂಗಾಳ ರಾಜ್ಯದಲ್ಲಿ ನಾನೇ ಸುಪ್ರೀಂ ಎನ್ನುವ ಮೂಲಕ ಮೋದಿ ಸರ್ಕಾರವನ್ನು ದೆಹಲಿಯಲ್ಲಿ ದಂಡಯಾತ್ರೆ ಮೂಲಕ ಅಲುಗಾಡಿಸುವೆ ಎಂದಿದ್ದ ದೀದಿಗೆ ಬಿಜೆಪಿ ಹೀನಾಯ ಸೋಲನ್ನು ನೀಡಿದೆ. ಇನ್ನೂ ಅಸ್ಸಾಂ ಮತ್ತು ಪುದುಚೆರಿಯಲ್ಲಿ ಬಿಜೆಪಿ ಜಯಭೇರಿ ಮೂಲಕ ಅಧಿಕಾರದ ಚುಕ್ಕಾಣಿ ಹಿಡಿದು ಇಡೀ ದೇಶವೇ ಕೇಸರಿಮಯವಾಗಿದೆ ಎಂದ ಅವರು ಕೇರಳ ಮತ್ತು ತಮಿಳು ನಾಡಿನಲ್ಲಿ ಕೂಡ ಬಿಜೆಪಿ ಖಾತೆಯನ್ನು ತೆರೆದಿದೆ ಎಂದರು.

ಕಾಂಗ್ರೆಸ್ ಪಕ್ಷ ಈಗಲಾದರೂ ತಮ್ಮ ವಿಳಾಸ ಎಲ್ಲಿ ಎಂಬ ಹೇಳಲಿ ಎಂದು ವ್ಯಂಗ್ಯವಾಡಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಬಿಜೆಪಿ ಅಧ್ಯಕ್ಷ ಸಂಜುಕೌರಿ, ಮುಖಂಡರಾದ ಜೆ.ಕೆ.ಕುಮಾರ್, ಪ್ರಸನ್ನ, ರಂಗನಾಥ, ತೆಂಡೇಕೆರೆ ರಮೇಶ್, ಕೇಳಹಳ್ಳಿ ರಾಜು ಸೇರಿ ಇನ್ನಿತರರು ಹಾಜರಿದ್ದರು.

# ಸರ್ಕಾರಿ ಪ್ರ. ದ. ಕಾಲೇಜಿನ ವಿದ್ಯಾರ್ಥಿನಿಯರು ಪ್ರಥಮ

• ಪ್ರಜೋದಯ ವರದಿ

**ಹಾಸನ:** ಹಾಸನ ವಿಶ್ವವಿದ್ಯಾಲಯ ಅಂತರ ಕಾಲೇಜುಗಳ ಕ್ರೀಡಾಕೂಟದಲ್ಲಿ ಹ್ಯಾಂಡ್ ಬಾಲ್ ಹಾಗೂ ಬ್ಯಾಸ್ಕೆಟ್ ಬಾಲ್ ಕ್ರೀಡಾಕೂಟಗಳಲ್ಲಿ ನಗರದ ಆರ್.ಸಿ. ರಸ್ತೆ ಗಂಧದ ಕೋಠಿ ಆವರಣದಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿಯರು ಭಾಗವಹಿಸಿ ಎರಡೂ ಕ್ರೀಡೆಗಳಲ್ಲಿ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ.

ನಗರದ ಕ್ರೀಡಾಂಗಣದಲ್ಲಿ ನಡೆದ ಹ್ಯಾಂಡ್ ಬಾಲ್ ಹಾಗೂ ಬ್ಯಾಸ್ಕೆಟ್ ಬಾಲ್ ಎರಡೂ ಕ್ರೀಡಾಕೂಟದ ಅಂತಿಮ ಹಣಾಹಣಿಯಲ್ಲಿ ಎಂ.ಜಿ. ರಸ್ತೆ ಮಹಿಳಾ ಕಾಲೇಜಿನೊಂದಿಗೆ ಸೆಣಸಾಟ ನಡೆಸಿದ ಆರ್.ಸಿ. ರಸ್ತೆ ಮಹಿಳಾ ಕಾಲೇಜಿನ ವಿದ್ಯಾರ್ಥಿನಿಯರು ಅಂತಿಮವಾಗಿ ಎರಡೂ ಕ್ರೀಡಾಕೂಟದಲ್ಲಿ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಎಚ್.ವಿ. ಮುರಳಿ ಅವರ ಮಾರ್ಗದರ್ಶನದಲ್ಲಿ ಕ್ರೀಡಾಪಟುಗಳು ತರಬೇತಿ ಪಡೆದುಕೊಂಡಿದ್ದರು.





ವಿಜೇತ ವಿದ್ಯಾರ್ಥಿಗಳಿಗೆ ಕಾಲೇಜಿನ ಪ್ರಾಂಶುಪಾಲ ಡಿ.ಕೆ.ಮಂಜಯ್ಯ ಹಾಗೂ ಕ್ರೀಡಾ ವಿಭಾಗದ ಸಂಚಾಲಕ ಡಾ.ಕೆ.ಆರ್.ಸುರೇಶ್‌ಕುಮಾರ್ ಅವರು ಪ್ರಶಸ್ತಿ ಪತ್ರ ಹಾಗೂ ಪಾರಿತೋಷಕ ವಿತರಣೆ ಮಾಡಿದರು.

# ಲೀಲಾವತಿ ನಿಧನ

• ಪ್ರಜೋದಯ ವರದಿ



**ಹೊಳೆನರಸೀಪುರ:** ಕೆಲ ತಿಂಗಳುಗಳಿಂದ ಬ್ರೈನ್ ಟ್ಯೂಮರ್ ನಿಂದಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಲೀಲಾವತಿ (58) ಸೋಮವಾರ ನಸುಕಿನ ವೇಳೆ ಮೃತಪಟ್ಟರು.

ಪಟ್ಟಣದ ಸೀತಾವಿಲಾಸ್ ರಸ್ತೆ ನಿವಾಸಿ ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಅಧ್ಯಕ್ಷ ಆರ್.ಬಿ. ಪುಟ್ಟೇಗೌಡ ಅವರ ಧರ್ಮಪತ್ನಿಯಾಗಿದ್ದ ಇವರು ಮೂಲತಃ ಚನ್ನರಾಯಪಟ್ಟಣ ತಾಲೂಕಿನವರಾಗಿದ್ದರು.

ಪಟ್ಟಣದಲ್ಲೇ ಕಳೆದ 30 ವರ್ಷಗಳಿಂದ ವಾಸವಿದ್ದರು. ಚನ್ನರಾಯಪಟ್ಟಣ ತಾಲ್ಲೂಕಿನ ಸ್ವಗ್ರಾಮ ರಾಜಾಪುರದಲ್ಲಿ ಸಂಜೆ ವೇಳೆಗೆ ಅಂತ್ಯಕ್ರಿಯೆ ನೆರವೇರಿಸಲಾಯಿತು.

# ರಾಜ್ಯ ಸರ್ಕಾರಕ್ಕೆ ಸರ್ಕಾರಿ ಶಾಲೆಗಳನ್ನು ಮುಚ್ಚುವ ತವಕ

## ಕಾಂಗ್ರೆಸ್‌ಗೆ ಶಾಲಾ- ಕಾಲೇಜುಗಳನ್ನು ಅಭಿವೃದ್ಧಿ ಪಡಿಸಬೇಕೆಂಬ ಇರಾದೆ ಇಲ್ಲ: ರೇವಣ್ಣ

• ಪ್ರಜೋದಯ ವರದಿ

**ಹೊಳೆನರಸೀಪುರ:** ಸರ್ಕಾರಿ ಶಾಲೆಗಳನ್ನು ಮುಚ್ಚುವ ತವಕದಲ್ಲಿ ಇರುವ ಪ್ರಸ್ತುತ ರಾಜ್ಯ ಸರ್ಕಾರಕ್ಕೆ ಆಯಾ ಶಾಲಾ, ಕಾಲೇಜುಗಳನ್ನು ಅಭಿವೃದ್ಧಿ ಪಡಿಸಬೇಕೆಂಬ ಇರಾದೆ ಇಲ್ಲ ಎಂದು ಶಾಸಕ ಎಚ್.ಡಿ.ರೇವಣ್ಣ ಅವರು ಆಪಾದಿಸಿದರು.

ಪಟ್ಟಣದ ಬಿಸಿಎಂ ಇಲಾಖೆಯ ಆವರಣದಲ್ಲಿ ಮೆಟ್ರಿಕ್ ಪೂರ್ವ ಮತ್ತು ನಂತರದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನೆರವೇರಿಸಿ ಮಾತನಾಡಿದ ಅವರು, ಅದೆಷ್ಟೋ ಪ್ರಾಥಮಿಕ ಶಾಲೆಗಳು ಈಗಾಗಲೇ ಬಾಗಿಲು ಹಾಕಿದ್ದಾರೆ. ಇರುವ ಶಾಲೆ, ಕಾಲೇಜುಗಳನ್ನು ಅಭಿವೃದ್ಧಿ ಪಡಿಸಬೇಕು. ಇಲ್ಲದಿದ್ದರೆ ಖಾಸಗಿಯವರ ವ್ಯಾಪಾರೀಕರಣ ನೀತಿಗೆ ಶಿಕ್ಷಣವೂ ಒಳಪಡುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.



ಬಡ ವಿದ್ಯಾರ್ಥಿಗಳು ಪ್ರತಿಭೆ ಇದ್ದರೂ, ಶಿಕ್ಷಣ ಅವಕಾಶದಿಂದ ವಂಚಿತರಾಗುತ್ತಾರೆ. ಗ್ರಾಮೀಣ ಭಾಗದಲ್ಲಿ ಬಡ ವಿದ್ಯಾರ್ಥಿಗಳು ಪ್ರತಿಭಾನ್ವಿತರಾಗಿರುತ್ತಾರೆ. ಅವರು ಹಾಸ್ಟೆಲ್‌ಗಳಲ್ಲಿ ಓದಿ ಒಳ್ಳೆಯ ಅಂಕ ಪಡೆದಿದ್ದಾರೆ. ಅಂತಹವರನ್ನು ಪುರಸ್ಕರಿಸುವುದು ನಮ್ಮ ಕರ್ತವ್ಯ ಎಂದು ಹೇಳಿದರು.

ಪಟ್ಟಣದಲ್ಲಿ 2004 ರಲ್ಲಿ ಸ್ಥಾಪನೆಯಾದಾಗ 200 ರಿಂದ 300 ವಿದ್ಯಾರ್ಥಿಗಳಿದ್ದರು. ಇದೀಗ 1600 ವಿದ್ಯಾರ್ಥಿಗಳು ವ್ಯಾಸಂಗ ನಡೆಸಿದ್ದಾರೆ. ಆದರೆ, ಕಾಂಗ್ರೆಸ್ ಸರ್ಕಾರ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಬೋಧಕರನ್ನು ನೇಮಕಗೊಳಿಸಿಲ್ಲ. 7 ಮೊರಾರ್ಜಿ ವಸತಿಶಾಲೆಗಳು, 7 ಸರ್ಕಾರಿ ಪದವಿ ಕಾಲೇಜುಗಳು, ಆದರ್ಶ, ನವೋದಯ, 7 ಕರ್ನಾಟಕ ಪಬ್ಲಿಕ್ ಶಾಲೆಗಳು ಎಲ್ಲವೂ ಸ್ಥಾಪಿಸಿದ್ದೇವೆ. ಇದಕ್ಕೆ ಪೂರಕ ಸೌಕರ್ಯ ನೀಡಿಲ್ಲ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಹಾಸ್ಟೆಲ್‌ನಲ್ಲಿ ಉಳಿದು ಹೆಚ್ಚು ಅಂಕ ಗಳಿಸಿದ ಮೆಟ್ರಿಕ್ ಪೂರ್ವ ಮತ್ತು ಎಸ್‌ಎಸ್‌ಎಲ್‌ಸಿ ಹಾಗೂ ನಂತರದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ಮಾಜಿ ಮುಖ್ಯಮಂತ್ರಿ ಡಿ.ದೇವರಾಜ್ ಅರಸರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು.

ಬಿಸಿಎಂ ಸಹಾಯಕ ನಿರ್ದೇಶಕ ಹರೀಶ್, ವಿದ್ಯಾರ್ಥಿನಿಲಯದ ಮೇಲ್ವಿಚಾರಕರು ಹಾಗೂ ಸಿಬ್ಬಂದಿಗಳು ಹಾಜರಿದ್ದರು.

# ನಾಳೆ ವಿದ್ಯುತ್ ವ್ಯತ್ಯಯ



**ಹಾಸನ:** ಹೊಳೆನರಸೀಪುರ 'ನೋಡಲ್' ಕೇಂದ್ರ ವ್ಯಾಪ್ತಿಯ 66/11 ಕೆ.ವಿ. ವಿ.ವಿ ಕೇಂದ್ರ ವತಿಯಿಂದ ಮಳಿಯಲ್ಲಿ ತ್ರೈಮಾಸಿಕ ನಿರ್ವಹಣಾ ಕೆಲಸಗಳನ್ನು ಹಮ್ಮಿಕೊಂಡಿರುವುದರಿಂದ ಮೇ 6 ರಂದು ಬೆಳಿಗ್ಗೆ 8 ರಿಂದ ಸಂಜೆ 5 ಗಂಟೆಯವರೆಗೆ ಮಳಲಿ ಶಾಖಾ ವ್ಯಾಪ್ತಿಯ ಗ್ರಾಮಗಳಾದ ಮಳಲಿ, ದುಮ್ಮಗೆರೆ, ತೆರಣ್ಯ, ಮಾವನೂರು, ಲಕ್ಷ್ಮೀಪುರ, ಜಾಗರಹಳ್ಳಿ, ದೇವಿಹಳ್ಳಿ, ಸಂತೆಕೊಪ್ಪಲು, ನಾಗನಹಳ್ಳಿ, ಮರ್ಕುಲಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು ಸಾರ್ವಜನಿಕರು ಸಹಕರಿಸುವಂತೆ ಕಾರ್ಯನಿರ್ವಾಹಕ ಇಂಜಿನಿಯರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಂಗಭೂಮಿಯು ಜನ ಸಾಮಾನ್ಯರ ಜ್ಞಾನ ಕೇಂದ್ರ

• ಪ್ರಜೋದಯ ವರದಿ

**ಹಾಸನ:** ರಂಗಭೂಮಿಯು ಸಂಗೀತ, ಸಾಹಿತ್ಯ, ಅಭಿನಯದ ಮೂಲಕ ಎಲ್ಲ ವಯೋಮಾನದವರನ್ನು ಸೆಳೆದುಕೊಂಡಿದೆ. ಜಾನಪದ, ಸಾಮಾಜಿಕ, ಐತಿಹಾಸಿಕ, ಪೌರಾಣಿಕ ಮತ್ತು ಆಧುನಿಕ ರಂಗಭೂಮಿಯು ಜನ ಸಾಮಾನ್ಯರ ಜ್ಞಾನ ಕೇಂದ್ರಗಳಾಗಿ ಕೆಲಸ ಮಾಡುತ್ತಿವೆ, ನಾಟಕಗಳು ಪ್ರೇಕ್ಷಕರನ್ನು ಹುಡುಕಿಕೊಂಡು ಹೋಗದೇ ಪ್ರೇಕ್ಷಕರೇ ನಾಟಕಗಳನ್ನು ಹುಡುಕಿಕೊಂಡು ಬರುವಂತೆ ಕನ್ನಡ ರಂಗಭೂಮಿ ಬೆಳೆಯಬೇಕಾಗಿದೆ ಎಂದು ಡಾ.ಪ್ರಕಾಶ ಗ. ಖಾಡೆ, ಸಾಹಿತಿ, ಪ್ರಾಧ್ಯಾಪಕ ಬಾಗಲಕೋಟೆ ಅವರು ತಿಳಿಸಿದರು.

ಕರ್ನಾಟಕ ರಾಜ್ಯ ಬರಹಗಾರರ ಸಂಘ ಏರ್ಪಡಿಸಿದ್ದ ರಾಜ್ಯ ಮಟ್ಟದ ರಂಗಗೀತೆ ಗಾಯನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕರ್ನಾಟಕ ರಾಜ್ಯ ಬರಹಗಾರರ ಸಂಘವು ಸ್ಥಾಪನೆಯಾದ ದಿನದಿಂದ ನಿರಂತರವಾಗಿ ಹಲವಾರು ಕಾರ್ಯ ಕ್ರಮಗಳನ್ನು ಆಯೋಜನೆ ಮಾಡುತ್ತಾ ರಾಜ್ಯದಲ್ಲಿಯೇ ಮುಂಚೂಣಿಯಲ್ಲಿದೆ ಎಂದು ಅವರು ಹೇಳಿದರು.

ಸಂಘದ ಸ್ಥಾಪಕ ಅಧ್ಯಕ್ಷ ಮಧುನಾಯ್ಕ ಲಂಬಾಣಿ ಅವರು ಮಾತನಾಡಿ, ಸಾಹಿತ್ಯ ಸಂಗೀತ ಚಿತ್ರಕಲೆ ನೃತ್ಯ ರಂಗೋಲಿ ರಂಗಗೀತಗಾಯನ ಹೀಗೆ ಹಲವಾರು ಪ್ರಕಾರದ ಕಲಾವಿದರಿಗೆ ವೇದಿಕೆ ನಿರ್ಮಾಣ ಮಾಡಿ ಅವರಲ್ಲಿ ಹುಮ್ಮಸ್ಸು ತುಂಬುವ ಕಾರ್ಯ ಮಾಡುತ್ತಿದೆ ಎಂದು ತಿಳಿಸಿದರು.

ಸಾಹಿತಿ ಹಾಗೂ ಸಂಶೋಧಕರಾದ ಪಿ.ನಾಗರತ್ನಮ್ಮ ಮಳವಳ್ಳಿ ಅವರು ಮಾತನಾಡಿ, ಜನಪದ ಸಾಹಿತ್ಯ ಮತ್ತು ಕಲೆಯ ಎಷ್ಟೋ ಪ್ರಾಕಾರಗಳು ಮೂಲವನ್ನು ಕಳೆದುಕೊಂಡು ನಶಿಸುವ ಅಂಚಿನಲ್ಲಿದೆ. ಕೆಲವು ಕಲಾ ಪ್ರಕಾರಗಳು ಮೂಲೆ ಗುಂಪಾಗಿವೆ ಎಂದು ವಿಷಾದಿಸಿದರು.



ಕೋಲಾಟ, ದೊಣ್ಣೆ ವರಸೆ, ದೊಡ್ಡಾಟ ಸಣ್ಣಾಟ, ಯಕ್ಷಗಾನ, ಕುಂತಿಪದ, ಮೂಲ ರಂಗಗೀತೆಗಳು, ಲಾಲಿಪದ, ಕೋಲೆಬಸವ, ಲಿಂಗಧೀರರ ಮೂಲ ದಾಟಿ, ಉರುಬತ್ತಿ ದಾಸಯ್ಯ, ವೇಷದವರ ವಾಣಿ, ಉರಮಾರಮ್ಮರ ವಾಣಿ, ನೆನವಾರ್ತೆ ಹೀಗೆ ಹಲವಾರು ಪ್ರಕಾರಗಳ ಕಲೆ ಮತ್ತು ಜನಪದ ವೇಷಭೂಷಣದ ಬಗ್ಗೆ ಅರಿವಿನ ಕೊರತೆ ಇರುವಾಗ ಇಂತಹ ಕಾರ್ಯ ಕ್ರಮಗಳು ಹೆಚ್ಚು ಹೆಚ್ಚು ನಡೆಸಬೇಕಾಗಿದೆ ಎಂದು ಹೇಳಿದರು.

ವಕೀಲ ಬಳ್ಳೇಕೆರೆ ಬಿ.ಕೆ.ವಿಶ್ವನಾಥ ಅವರು ಮಾತನಾಡಿ, ಇಂದಿನ ದಿನದಲ್ಲಿ ಟಿವಿ ಧಾರಾವಾಹಿಗಳನ್ನು ಚಲನಚಿತ್ರಗಳನ್ನು ನೋಡುವ ಸಂದರ್ಭದಲ್ಲಿ ಪೌರಾಣಿಕ ನಾಟಕಗಳು ಜನರು ನೋಡುವಂತೆ ಜನರ ಮನಸ್ಸನ್ನು ಪೌರಾಣಿಕ ನಾಟಕದತ್ತ ಸೆಳೆಯುವಂತೆ ಮಾಡುತ್ತಿರುವ ಕಲಾವಿದರನ್ನು ಪ್ರೋತ್ಸಾಹಿಸುವ ಕಾರ್ಯ ಈ ದಿವಸ ನಡೆದಿದೆ. ಮಹಾಭಾರತ ಅಂದರೆ ಏನು ? ರಾಮಾಯಣ ಅಂದರೆ ಏನು ಎನ್ನುವುದು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸವಾಗಬೇಕು ಎಂದರು.

ಹಾಸ್ಯನಟ ನಾಟಕಕಾರ, ನಿರ್ದೇಶಕ ಮೈಸೂರು ರಮಾನಂದ, ವೇದ ಶಿವಕುಮಾರ್, ನಿಟ್ರೆ ಮಹಾದೇವಯ್ಯ ಗುಂಡ್ಲುಪೇಟೆ, ಮಂಜುನಾಥ ಹಂಗರಹಳ್ಳಿ, ಸತೀಶ್ ಕಬ್ಬತ್ತಿ, ಶ್ವೇತಾ ಮೋಹನ್, ಎಸ್.ಶೈಲಜ ಇನ್ನಿತರರಿದ್ದರು.

# ರೋಟರಿಯಿಂದ ಸಾಮಾಜಿಕ ಕಾರ್ಯಗಳು

• ಪ್ರಜೋದಯ ವರದಿ

**ಹಾಸನ:** ಜೋನ್ 9ರ ವ್ಯಾಪ್ತಿಯಲ್ಲಿರುವ ರೋಟರಿ ಕ್ಲಬ್ ಆಫ್ ಹಾಸನ ರಾಯಲ್ 2025-26ನೇ ಸಾಲಿನಲ್ಲಿ ಗುಣಮಟ್ಟದ ಸಾಮಾಜಿಕ ಕಾರ್ಯಗಳನ್ನು ಮಾಡುವಲ್ಲಿ ಯಶಸ್ವಿಯಾಗಿದ್ದು, ಬಹಳ ಸಕ್ರಿಯವಾಗಿ ಸಂಸ್ಥೆ ಕಾರ್ಯ ನಿರ್ವಹಿಸಿದೆ ಎಂದು 3182 ಜಿಲ್ಲಾ ಗವರ್ನರ್ ಕೆ.ಪಾಲಾಕ್ಷ ಹೇಳಿದರು.

ನಗರದ ಖಾಸಗಿ ಹೋಟೆಲ್ ನಲ್ಲಿ ಈಚೆಗೆ ನಡೆದ ಜಿಲ್ಲಾ ಗವರ್ನರ್ ಅಧಿಕೃತ ಭೇಟಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ರೋಟರಿ ರಾಯಲ್ ಈ ವರ್ಷ ವಿಶೇಷವಾಗಿ ತನ್ನ ವರ್ಷವನ್ನು ಆರಂಭಿಸಿತು, ವರ್ಷದ ಆರಂಭದಲ್ಲೇ ಸುಮಾರು 10 ಸಾವಿರ ಸಸಿಗಳನ್ನು ವಿತರಿಸುವ ಮೂಲಕ ಒಳ್ಳೆಯ ಸಂದೇಶವನ್ನು ಸಮಾಜಕ್ಕೆ ನೀಡಿದೆ ಎಂದರು.





ಈ ವರ್ಷ ರಾಯಲ್ ಕ್ಲಬ್‌ಗೆ ಪಬ್ಲಿಕ್ ಇಮೇಜ್ ಪ್ರಶಸ್ತಿ ಕೂಡ ಲಭಿಸಿದೆ. ನಮ್ಮ 3182ರ ವಲಯದಲ್ಲಿರುವ 90 ಕ್ಲಬ್‌ಗಳ ಪೈಕಿ ರಾಯಲ್ ಕ್ಲಬ್‌ಗೆ ಈ ಪ್ರಶಸ್ತಿ ದೊರೆತ್ತಿರುವುದು ಕಾರ್ಯಕ್ರಮದ ಗುಣಮಟ್ಟವನ್ನು ಪ್ರದರ್ಶಿಸುತ್ತದೆ. ರೋಟರಿ ಸಂಸ್ಥೆಗಳು ಶಿಕ್ಷಣ, ಆರೋಗ್ಯ, ಕೃಷಿ ಸೇರಿದಂತೆ ಇನ್ನಿತರ ಪ್ರಮುಖ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿಕೊಂಡು ಬರುತ್ತಿದೆ. ಪ್ರತಿಯೊಂದು ಕ್ಲಬ್‌ಗಳು ತಮ್ಮ ಜವಬ್ದಾರಿಯನ್ನು ಅರಿತು ಕೆಲಸ ಮಾಡಿದರೆ ಸ್ವಸ್ಥ ಸಮಾಜವನ್ನು ನಿರ್ಮಾಣ ಮಾಡಲು ಸಹಕಾರಿಯಾಗುತ್ತದೆ. ಸಮಾಜದಿಂದ ಗಳಿಸಿಕೊಂಡಿದ್ದನ್ನು ಪುನಃ ಸಮಾಜಕ್ಕೆ ಹಿಂದಿರುಗಿಸಿ ಕೊಡಬೇಕಾದಲ್ಲಿ ಪ್ರತಿಯೊಬ್ಬರೂ ರೋಟರಿಯೊಂದಿಗೆ ಕೈಜೋಡಿಸಿ ಕೆಲಸ ಮಾಡಬೇಕು ಎಂದು ಹೇಳಿದರು.

ಜಿ.ಎನ್.ಮಂಜುನಾಥ್, ಮಮತಾ ಪಾಟೀಲ್, ಕಾರ್ಯದರ್ಶಿ ರವಿಕುಮಾರ್, ದಿಲೀಪ್ ಕುಮಾರ್ ಎಚ್.ಕೆ. ಹಾಗೂ ಪದಾಧಿಕಾರಿಗಳು, ಸದಸ್ಯರು ಹಾಜರಿದ್ದರು.

# ಕ್ಷೇತ್ರ ಶಿಕ್ಷಣಾಧಿಕಾರಿ ಸತೀಶ್‌ಗೆ ಅಭಿನಂದನೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡ ಹೆಚ್.ಹೆಚ್.ಸತೀಶ್ ಅವರನ್ನು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಅಭಿನಂದಿಸಲಾಯಿತು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಹಡೇನಹಳ್ಳಿ ಲೋಕೇಶ್ ಮಾತನಾಡಿ, ನೂತನ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೂ ಚನ್ನರಾಯಪಟ್ಟಣಕ್ಕೂ ಅವಿನಾಭಾವ ಸಂಬಂಧವಿದ್ದು, ಈ ಹಿಂದೆ ಶಿಕ್ಷಕರಾಗಿ ತಾಲ್ಲೂಕಿನಲ್ಲಿ ಕೆಲಸ ಮಾಡಿರುವ ಅನುಭವ ಅವರಿಗೆ ಇದೆ. ಈ ನಿಟ್ಟಿನಲ್ಲಿ ಅವರು ನಮ್ಮ ತಾಲ್ಲೂಕಿನ ಶಿಕ್ಷಣಾಧಿಕಾರಿಯಾಗಿ ಆಗಮಿಸಿರುವುದು ಸಂತಸದ ವಿಷಯವಾಗಿದೆ ಎಂದರು.



ಶಿಕ್ಷಣ ಇಲಾಖೆ ಜೊತೆಗೆ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಮೊದಲಿನಿಂದಲೂ ಒಳ್ಳೆಯ ವಿಶ್ವಾಸವನ್ನು ಹೊಂದಿದ್ದು, ಇಲಾಖೆ ಜೊತೆ ಸಾಕಷ್ಟು ಪರಿಷತ್ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಗೊಳಿಸಿದ್ದೇವೆ. ಈ ನಿಟ್ಟಿನಲ್ಲಿ ಶಿಕ್ಷಣಾಧಿಕಾರಿಗಳು ಉತ್ತಮ ಸೇವೆಯನ್ನು ತಾಲ್ಲೂಕಿಗೆ ನೀಡಲಿ ಎಂಬುದು ನಮ್ಮ ಆಶಯವಾಗಿದೆ ಎಂದು ಸತೀಶ್ ಅವರು ತಿಳಿಸಿದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಪದಾಧಿಕಾರಿಗಳಾದ ದಿಂಡಗೂರು ಗೋವಿಂದರಾಜು, ಜಬಿ ಉಲ್ಲಾಬೇಗ್, ಶಿವನಗೌಡ ಪಾಟೀಲ್, ಯಶೋಧ ಜೈನ್, ನಂದನ್ ಪುಟ್ಟಣ್ಣ, ಮಂಜಪ್ಪ ಮತ್ತಿತರಿದ್ದರು.

# ಗಂಗೋತ್ರಿಯಿಂದ ಗಂಗಾಸಾಗರದವರೆಗೆ ಅರಳಿದೆ ಬಿಜೆಪಿ

## ಪ್ರಜಾಪ್ರಭುತ್ವ, ಸಂವಿಧಾನದ ಗೆಲುವು: ಪ್ರಧಾನಿ ನರೇಂದ್ರ ಮೋದಿ

• ಪ್ರಜೋದಯ ವರದಿ

**ನವದೆಹಲಿ:** ಪಂಚರಾಜ್ಯ ಚುನಾವಣಾ ಫಲಿತಾಂಶದ ಬಳಿಕ ದೆಹಲಿಯ ಬಿಜೆಪಿ ಪ್ರಧಾನ ಕಚೇರಿಯಲ್ಲಿ ಮಾತನಾಡಿದ ಪ್ರಧಾನಿ ಮೋದಿ, ಪಶ್ಚಿಮ ಬಂಗಾಳದ ವಿಜಯವನ್ನು ಪ್ರಜಾಪ್ರಭುತ್ವದ ಗೆಲುವು ಎಂದು ಬಣ್ಣಿಸಿದ್ದಾರೆ.

ಉತ್ತರಾಖಂಡದಿಂದ ಬಂಗಾಳದವರೆಗೆ ಗಂಗಾ ನದಿ ಹರಿಯುವ ಎಲ್ಲಾ ರಾಜ್ಯಗಳಲ್ಲೂ ಬಿಜೆಪಿ ಆಡಳಿತ ಸ್ಥಾಪನೆಯಾಗಿರುವುದು ಐತಿಹಾಸಿಕ ಎಂದಿದ್ದಾರೆ. ಭಯಮುಕ್ತ ಬಂಗಾಳ ಮತ್ತು ವಿಕಾಸವೇ ತಮ್ಮ ಧ್ಯೇಯವೆಂದ ಅವರು, ವಿವಿಧ ರಾಜ್ಯಗಳ ಉಪಚುನಾವಣೆಗಳಲ್ಲಿ ಲಭಿಸಿದ ಗೆಲುವು ಹಾಗೂ ಸುನೇತ್ರಾ ಪವಾರ್ ಅವರ ಯಶಸ್ಸನ್ನು ಶ್ಲಾಘಿಸಿ, ಕಾರ್ಯಕರ್ತರ ಪರಿಶ್ರಮಕ್ಕೆ ನಮನ ಸಲ್ಲಿಸಿದ್ದಾರೆ.

ಬಂಗಾಳದಲ್ಲಿ ಈ ಹಿಂದೆಲ್ಲಾ ಚುನಾವಣೆಗಳೆಂದರೆ ಕೇವಲ ಹಿಂಸಾಚಾರದಿಂದಲೇ ಕೂಡಿರುತ್ತಿತ್ತು. ಆದರೆ ಇದೇ ಮೊದಲ ಬಾರಿ ಬಂದೂಕಿನ ಶಬ್ದವಲ್ಲ, ಜನತಾ ಜನಾರ್ದನರ ಸ್ವರ ಕೇಳಿದೆ. ಮೊದಲ ಬಾರಿಗೆ ಪ್ರಜಾಪ್ರಭುತ್ವ ಗೆದ್ದಿದೆ. ಗಂಗಾ ಪಾತ್ರ ದುದ್ದಕ್ಕೂ ಈಗ ಬಿಜೆಪಿಯದ್ದೇ ಆಡಳಿತ. ಭಯಮುಕ್ತ ಬಂಗಾಲವೇ ನಮ್ಮ ಧ್ಯೇಯ ಎಂದು ಮೋದಿ, ಈ ವೇಳೆ ತಮ್ಮ ಭಾಷಣದುದ್ದಕ್ಕೂ ಪಶ್ಚಿಮ ಬಂಗಾಳದ ವಿಜಯದ ಬಗ್ಗೆ ವರ್ಣಿಸಿದ ಅವರು ಪರೋಕ್ಷವಾಗಿ ಅಲ್ಲಿನ ಆಡಳಿತವನ್ನು ತರಾಟೆಗೆ ತೆಗೆದುಕೊಂಡರು.



ಗಂಗಾ ಪಾತ್ರದುದ್ದಕ್ಕೂ ಕಮಲ

'ಕಳೆದ ವರ್ಷ ನವೆಂಬರ್ 14 ರಂದು ಬಿಹಾರ ಚುನಾವಣಾ ಫಲಿತಾಂಶ ಪ್ರಕಟವಾದಾಗ, ನಾನು ಬಿಜೆಪಿ ಪ್ರಧಾನ ಕಚೇರಿಯಿಂದಲೇ, ಗಂಗಾ ಬಿಹಾರದಿಂದ ಗಂಗಾಸಾಗರಕ್ಕೆ ಹರಿಯುತ್ತದೆ ಎಂದು ಹೇಳಿದ್ದೆ. ಮತ್ತು ಇಂದು, ಬಂಗಾಳದಲ್ಲಿ, ಗಂಗೋತ್ರಿಯಿಂದ ಗಂಗಾಸಾಗರದವರೆಗೆ, ಕಮಲ ಎಲ್ಲೆಡೆ ಅರಳಿದೆ, ಉತ್ತರಾಖಂಡ, ಉತ್ತರ ಪ್ರದೇಶ, ಬಿಹಾರ ಮತ್ತು ಈಗ ಪಶ್ಚಿಮ ಬಂಗಾಳದಲ್ಲಿ. ಇಂದು, ಗಂಗಾ ನದಿಯ ದಡದಲ್ಲಿರುವ ರಾಜ್ಯಗಳಲ್ಲಿ, ಬಿಜೆಪಿ-ಎನ್‌ಡಿಎ ಸರ್ಕಾರಗಳಿವೆ'' ಎಂದು ಹರ್ಷ ವ್ಯಕ್ತಪಡಿಸಿದರು.

'2013 ರಲ್ಲಿ, ಭಾರತೀಯ ಜನತಾ ಪಕ್ಷವು ತನ್ನ ಪ್ರಧಾನಿ ಅಭ್ಯರ್ಥಿಯಾಗುವ ಜವಾಬ್ದಾರಿಯನ್ನು ನನಗೆ ವಹಿಸಿದಾಗ, ಮತ್ತು ನಾನು ಕಾಶಿಯಲ್ಲಿ ನನ್ನ ನಾಮಪತ್ರ ಸಲ್ಲಿಸಲು ಹೋದಾಗ, ಪತ್ರಕರ್ತರು ನನ್ನನ್ನು ಸುತ್ತುವರೆದರು. ಆ ಕ್ಷಣದಲ್ಲಿ, ನನ್ನ ಹೃದಯದಲ್ಲಿ ಒಂದು ಸ್ವಾಭಾವಿಕ ಭಾವನೆ ಹುಟ್ಟಿಕೊಂಡಿತು, ಮತ್ತು ನಾನು ನನ್ನದೇ ಆದ ಮೇಲೆ ಬಂದಿಲ್ಲ, ಯಾರೂ ನನ್ನನ್ನು ಕಳುಹಿಸಿಲ್ಲ ಎಂದು ನಾನು ಹೇಳಿದ್ದೆ, ಗಂಗಾಮಾತೆ ನನಗೆ ಕರೆ ಮಾಡಿದ್ದಾರೆ. ಮತ್ತು ಇಂದು, ಪ್ರತಿ ಕ್ಷಣವೂ, ಗಂಗಾಮಾತೆಯ ಆಶೀರ್ವಾದವು ನಮ್ಮೆಲ್ಲರ ಮೇಲೆ ನಿರಂತರವಾಗಿ ಸುರಿಸುತ್ತಿದೆ ಎಂದು ನಾನು ಭಾವಿಸುತ್ತೇನೆ,' ಎಂದರಲ್ಲದೆ, 'ಇದು ಐತಿಹಾಸಿಕ ದಿನ. ಅಭೂತಪೂರ್ವ. ಜನರ ಮುಖದಲ್ಲಿ ಕಾಣುವ ಸಂತೋಷವು ಇಂದು ದೇಶಾದ್ಯಂತದ ಬಿಜೆಪಿ ಕಾರ್ಯಕರ್ತರ ಮುಖದಲ್ಲಿ ಕಾಣುವ ಸಂತೋಷವಾಗಿದೆ ಎಂದರು.


## ಅತ್ಯಂತ ಹೆಚ್ಚಿನ ಯೋಜನೆಗಳನ್ನು ರೂಪಿಸಿದಂತಹ ಕೀರ್ತಿ ಬಿ.ಎಸ್.ವೈ.ಗೆ ಸಲ್ಲುತ್ತದೆ: ಶಾಸಕ ಹೆಚ್.ಕೆ.ಸುರೇಶ್

# ಬೇಲೂರಿಗೆ ಯಡಿಯೂರಪ್ಪನವರ ಕೊಡುಗೆ ಅಪಾರ

• ಪ್ರಜೋದಯ ವರದಿ

**ಬೇಲೂರು:** ಶಿಲ್ಪಕಲೆಗಳ ತವರು ಬೇಲೂರು ತಾಲ್ಲೂಕಿನ ಬಯಲುಸೀಮೆಗೆ ರಣಘಟ್ಟ ಮತ್ತು ಯಗಚಿ ಏತ ನೀರಾವರಿ ಮೂಲಕ ನೀರು ಹರಿಸಲು ಮಾಜಿ ಮುಖ್ಯಮಂತ್ರಿ, ಬಿ. ಎಸ್.ಯಡಿಯೂರಪ್ಪ ಅವರು ಅನುದಾನ ನೀಡಿದ್ದಲ್ಲದೆ ಬೇಲೂರಿನ ಸಮಗ್ರ ಅಭಿವೃದ್ಧಿ ಶ್ರೀಕಾರ ಹಾಕಿದ್ದಾರೆ ಎಂದು ಬೇಲೂರು ಶಾಸಕ ಹೆಚ್.ಕೆ.ಸುರೇಶ್ ಹೇಳಿದರು.

ಪಟ್ಟಣದ ಕೋಟೆ ಶಾಸಕರ ಕಚೇರಿಯಲ್ಲಿ ಸುದ್ದಿಗಾರೊಂದಿಗೆ ಮಾತನಾಡಿದ ಅವರು, ರಾಜ್ಯದ ರೂ.224 ಕ್ಷೇತ್ರಗಳಲ್ಲಿ ಬೇಲೂರು ವಿಧಾನಸಭಾ ಕ್ಷೇತ್ರಕ್ಕೆ ತನ್ನದೆಯಾದ ಮಹತ್ವ ಇದೆ. 900 ವರ್ಷಗಳ ಇತಿಹಾಸವನ್ನು ಹೊಂದಿರುವ ಮತ್ತು ಕನ್ನಡಕ್ಕೆ ಪ್ರಥಮ ಶಿಲಾ ಶಾಸನ ನೀಡಿರುವ ಹಲ್ಮಿಡಿ ಗ್ರಾಮ ಇರುವಂತಹ ಈ ತಾಲ್ಲೂಕಿಗೆ ಅತ್ಯಂತ ಹೆಚ್ಚಿನ ಯೋಜನೆಗಳನ್ನು ರೂಪಿಸಿದಂತಹ ಕೀರ್ತಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರಿಗೆ ಸೇರುತ್ತದೆ. ಅವರು ನಾಲ್ಕು ಬಾರಿ ಮುಖ್ಯಮಂತ್ರಿಗಳಾಗಿ ನೀಡಿದ ಯೋಜನೆಗಳು ಎಂದಿಗೂ ಕೂಡ ಮಹತ್ವಪೂರ್ಣವಾಗಿದೆ ರೈತರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದ ಬಿ. ಎಸ್ ಯಡಿಯೂರಪ್ಪನವರು ಹೆಣ್ಣು ಮಕ್ಕಳ ಸಬಲೀಕರಣಕ್ಕಾಗಿ ಭಾಗ್ಯಲಕ್ಷ್ಮಿ ಯೋಜನೆ ಮತ್ತು ವಿದ್ಯಾರ್ಥಿಗಳ ಉತ್ತೇಜನವನ್ನು ನೀಡಲು ಸೈಕಲ್ ಯೋಜನೆ ಸೇರಿದಂತೆ ಹತ್ತಾರು ಯೋಜನೆಗಳನ್ನು ರೂಪಿಸಿ ದೇಶದಲ್ಲಿ ಪ್ರಪ್ರಥಮ ಬಾರಿಗೆ ರೈತಪರ ಬಜೆಟ್ ಅನ್ನು ನೀಡಿದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ ಎಂದರು.



ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು ಅದೃಷ್ಟದಲ್ಲಿ ಮುಖ್ಯಮಂತ್ರಿಗಳಾಗಲಿಲ್ಲ, ಅವರು ಸತತ 50 ವರ್ಷ ರಾಜ್ಯದ ಹಳ್ಳಿ -ಹಳ್ಳಿಗಳಿಗೆ ಸೈಕಲ್ ಪ್ರಯಾಣದೊಂದಿಗೆ ಬಿಜೆಪಿಯನ್ನು ಸಂಘಟಿಸಿ ದಕ್ಷಿಣ ಭಾರತದಲ್ಲಿ ಪ್ರಪ್ರಥಮ ಬಾರಿಗೆ ಬಿಜೆಪಿಯ ಅಧಿಕಾರದ ಚುಕ್ಕಾಣಿ ಹಿಡಿಯಲು ಸಹಕಾರ ನೀಡಿದಂತಹ ಧೀಮಂತ ವ್ಯಕ್ತಿ ಯಡಿಯೂರಪ್ಪನವರಾಗಿದ್ದಾರೆ ಎಂದು ಸುರೇಶ್ ಅವರು ಶ್ಲಾಘಿಸಿದರು.

ಬೇಲೂರು ತಾಲೂಕಿನ ಹಳೇಬೀಡು ಬಯಲು ಸೀಮೆಗೆ ನೀರು ಹರಿಸಲು ಸುಮಾರು 127 ಕೋಟಿಯನ್ನು ರಣಘಟ್ಟಕ್ಕೆ ನೀಡಿದಂತಹ ಹೆಗ್ಗಳಿಕೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರಿಗೆ ಸೇರುತ್ತದೆ. ಅಲ್ಲದೆ 15 ಕೋಟಿ ವೆಚ್ಚದಲ್ಲಿ ಯಗಚಿ ಏತ ನೀರಾವರಿ ಮೂಲಕ 51 ಕೆರೆಗಳಿಗೆ ನೀರು ತುಂಬಿಸುವಂತಹ ಮಹತ್ವಪೂರ್ಣ ಕೆಲಸವನ್ನು ಮಾಡಿದ್ದಾರೆ.

– ಎಚ್.ಕೆ.ಸುರೇಶ್, ಶಾಸಕರು.

ಇಂತಹ ಯಡಿಯೂರಪ್ಪನವರ ಸಾಧನೆ ಅವರ ಯೋಜನೆಗಳು ಇಡೀ ದೇಶದಲ್ಲಿ ಮಹತ್ವ ಹೊಂದಿರುವ ಹಿನ್ನೆಲೆಯಲ್ಲಿ ಚಿತ್ರದುರ್ಗದಲ್ಲಿ ಮೇ 9ರಂದು ಮಾಜಿ ಉಪ ಮುಖ್ಯ ಮಂತ್ರಿಗಳು ಹಾಗೂ ಲೋಕಸಭಾ ಸದಸ್ಯ ಗೋವಿಂದ ಕಾರಜೋಳ ಅವರ ಅಧ್ಯಕ್ಷತೆಯಲ್ಲಿ ಬೃಹತ್ ಅಭಿಮಾನೋತ್ಸವವನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕೆ ಕೇಂದ್ರದ ಗೃಹ ಸಚಿವ ಅಮಿತ್ ಶಾ ಸೇರಿದಂತೆ ಅನೇಕ ಕೇಂದ್ರ ಮಂತ್ರಿಗಳು ಹಾಗೂ ರಾಜ್ಯದ ಎಲ್ಲಾ ಮಾಜಿ ಮಂತ್ರಗಳು ಪಕ್ಷಾತೀತವಾಗಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ವಿಶೇಷವಾಗಿ ಸಾವಿರಕ್ಕೂ ಹೆಚ್ಚು ಗುರುವರ್ಯರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಅವರು ತಿಳಿಸಿದರು.

ಮೇ 9ರಂದು ಚಿತ್ರದುರ್ಗದಲ್ಲಿ ನಡೆಯುವ ಬೃಹತ್ ಅಭಿಮಾನೋತ್ಸವಕ್ಕೆ ಬೇಲೂರಿನಿಂದ 5000ಕ್ಕೂ ಹೆಚ್ಚು ಯಡಿಯೂರಪ್ಪನವರ ಅಭಿಮಾನಿ ಬಳಗ ಭಾಗವಹಿಸಲಿದ್ದ, ಈಗಾಗಲೇ ನೂರು ಬಸ್ಸುಗಳನ್ನು ನಿಗದಿ ಮಾಡಲಾಗಿದೆ. ಪ್ರತಿ ಹಳ್ಳಿ ಹಳ್ಳಿಯಲ್ಲೂ ಕೆಲವರು ವೈಯಕ್ತಿಕವಾಗಿ ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ಬಗ್ಗೆ ನಮಗೆ ತಿಳಿಸಿದ್ದು, ಪ್ರತಿಯೊಬ್ಬರೂ ಕೂಡ ಪಕ್ಷಾತೀತವಾಗಿ ಇಂತಹ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರಿಗೆ ಇನ್ನೂ ಹೆಚ್ಚಿನ ಶಕ್ತಿ ದೇವರು ಕರುಣಿಸಲಿ ಎಂದು ಪ್ರಾರ್ಥಿಸಲು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಎಂದು ಅವರು ಕರೆ ನೀಡಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಬಿಜೆಪಿ ಅಧ್ಯಕ್ಷ ಸಂಜುಕೌರಿ, ಬಿಜೆಪಿ ಮುಖಂಡರಾದ ಜೆ.ಕೆ.ಕುಮಾರ್, ನವೀನ್ ಸೇರಿದಂತೆ ಇನ್ನಿತರರು ಹಾಜರಿದ್ದರು.


**ಹಾಸನದ ಜಿಲ್ಲಾಧಿಕಾರಿಯವರ ಭೂ ಮಾಪನ ತಾಂತ್ರಿಕ ಸಹಾಯಕರು ಮತ್ತು ಪದನಿಮಿತ್ತ ಭೂ ದಾಖಲೆಗಳ ಉಪ ನಿರ್ದೇಶಕರ ನ್ಯಾಯಾಲಯದಲ್ಲಿ**

ಮೇಲ್ಮನವಿ ಸಂಖ್ಯೆ 128/2026

ಅಪೀಲುದಾರರು : ಎಂ.ಬಿ.ಪಾರ್ವತಮ್ಮ

: : ವಿರುದ್ಧ : :

ರೆಸ್ಪಾಂಡೆಂಟರು : ಜಯಲಕ್ಷ್ಮೀ ಆರ್.ಪಿ. ಮತ್ತು ಇತರರು
1) ಜಯಲಕ್ಷ್ಮೀ ಆರ್.ಪಿ. ಕೋಂ ಚಂದ್ರಶೇಖರ ಬಿ.ಎಸ್.
ವಯಸ್ಕರರು, ಬೂವನಹಳ್ಳಿ ಗ್ರಾಮ,
ಕಸಬಾ ಹೋಬಳಿ, ಹಾಸನ ತಾಲ್ಲೂಕು.

**ಪತ್ರಿಕಾ ಪ್ರಕಟಣೆ**

ಅರ್ಜಿದಾರರು ರೆಸ್ಪಾಂಡೆಂಟರ ವಿರುದ್ಧ ಹಾಸನ ತಾಲ್ಲೂಕು ಕಸಬಾ ಹೋಬಳಿ, ಬಿ.ಕಾಟೀಹಳ್ಳಿ ಗ್ರಾಮದ ಸರ್ವೆ ನಂ.19/2ಎ3 ರಲ್ಲಿ 0-02. 04.00 ಗುಂಟೆ ಹಾಗೂ ಸರ್ವೆ ನಂ.19/2 ಎ4 ರಲ್ಲಿ 0-02 ಗುಂಟೆ ಜಮೀನನ್ನು ದುರಸ್ತು ಮಾಡಿರುವುದನ್ನು ಪ್ರಶ್ನಿಸಿ ಮೇಲ್ಮನವಿ ದಾಖಲು ಮಾಡಿರುತ್ತಾರೆ. ಮೇಲ್ಕಂಡ ಮೇಲ್ಮನವಿಯಲ್ಲಿ ಮೇಲ್ಕಂಡ 1ನೇ ರೆಸ್ಪಾಂಡೆಂಟರಿಗೆ ನೋಟೀಸ್ ಜಾರಿ ಮಾಡಿ ಘನ ನ್ಯಾಯಾಲಯವು ಆದೇಶ ಮಾಡಿದ್ದು, ಸದರಿ ನೋಟೀಸನ್ನು ಮೇಲ್ಕಂಡ 1ನೇ ರೆಸ್ಪಾಂಡೆಂಟರು ಉದ್ದೇಶಪೂರ್ವಕವಾಗಿ ತಡೆ ಹಿಡಿದಿದ್ದು, ಆದ್ದರಿಂದ ಈ ಪತ್ರಿಕಾ ಪ್ರಕಟಣೆಯ ಮೂಲಕ ಮೇಲ್ಕಂಡ 1ನೇ ರೆಸ್ಪಾಂಡೆಂಟಿಗೆ ಘನ ನ್ಯಾಯಾಲಯವು ನೋಟೀಸ್ ಜಾರಿ ಮಾಡಲು ಆದೇಶ ಮಾಡಿರುತ್ತೆ. ಆದ್ದರಿಂದ 1ನೇ ರೆಸ್ಪಾಂಡೆಂಟಾದ ನೀವು ನಿಮ್ಮ ಪರ ಯಾವುದೇ ತಕರಾರು ಇದ್ದಲ್ಲಿ ಈ ಪತ್ರಿಕಾ ಪ್ರಕಟಣೆಯನ್ನು ದಾವಾ ಸಮನ್ಸ್ ಎಂದು ಪರಿಗಣಿಸಿ ದಿನಾಂಕ: 01-06-26 ರಂದು ಮೇಲ್ಕಂಡ ನೀವು ಮಧ್ಯಾಹ್ನ 3-00 ಗಂಟೆಗೆ ಮೇಲ್ಕಂಡ ಘನ ನ್ಯಾಯಾಲಯದಲ್ಲಿ ನೀವುಗಳಾಗಲೀ ಅಥವಾ ನಿಮ್ಮ ಪರ ವಕೀಲರಾಗಲೀ ಖುದ್ದಾಗಿ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಪರ ಈ ಮೇಲ್ಕಂಡ ಮೇಲ್ಮನವಿಯಲ್ಲಿ ತಕರಾರು ಇರುವುದಿಲ್ಲವೆಂದು ಪರಿಗಣಿಸಿ ಅರ್ಜಿದಾರರ ಪರ ಏಕಪಕ್ಷೀಯ ಆದೇಶ ಮಾಡಲಾಗುವುದೆಂದು ಈ ಮೂಲಕ ತಿಳಿಯಪಡಿಸಿರುತ್ತದೆ.

30/04/2026ನೇ ಈ ದಿನದಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ಇದನ್ನು ಕೊಡಲಾಗಿದೆ.

ಮೇಲ್ಮನವಿದಾರರ ಪರ ವಕೀಲರು
ಲೋಕೇಶ್. ಟಿ., ವಕೀಲರು
ಸ್ಥಳ: ಹಾಸನ
ದಿನಾಂಕ: 30/04/2026

ನ್ಯಾಯಾಲಯದ ಆದೇಶದ ಮೇರೆಗೆ
ಪದನಿಮಿತ್ತ ಭೂ ದಾಖಲೆಗಳ ಉಪನಿರ್ದೇಶಕರು
ಹಾಸನ ಜಿಲ್ಲೆ, ಹಾಸನ.

## ಅಸ್ಸಾಂ : ಬಿಜೆಪಿಗೆ ಹ್ಯಾಟ್ರಿಕ್ ಗೆಲುವು

• ಪ್ರಜೋದಯ ವರದಿ

**ಒಟ್ಟು ಸ್ಥಾನ-126**
**ಮ್ಯಾಜಿಕ್ ನಂಬರ್-64**
**ಎನ್‌ಡಿಎ** 102
**ಕಾಂಗ್ರೆಸ್** 21
**ಇತರೆ-3**
2021**ರ ಫಲಿತಾಂಶ**
**ಎನ್‌ಡಿಎ** 75
**ಕಾಂಗ್ರೆಸ್** 34
**ಇತರೆ** 17

**ನವದೆಹಲಿ:** ಅಸ್ಸಾಂ ವಿಧಾನಸಭೆ ಚುನಾವಣೆಯಲ್ಲಿ ನಿರೀಕ್ಷೆಯಂತೆ ಬಿಜೆಪಿ ಹ್ಯಾಟ್ರಿಕ್ ಗೆಲುವಿನೊಂದಿಗೆ ಮರಳಿ ಗದ್ದುಗೆಗೆ ಬಂದಿದೆ. ಮುಖ್ಯಮಂತ್ರಿ ಹಿಮಂತ ಬಿಸ್ವಾಸ್ ಅವರ ಜನಪ್ರಿಯತೆ ಎದುರು ಕಾಂಗ್ರೆಸ್ ನಲುಗಿ ಹೋಗಿದೆ.

ಈ ರಾಜ್ಯದ ಒಟ್ಟು 126 ಸ್ಥಾನಗಳ ಪೈಕಿ ಬಿಜೆಪಿ ನೇತೃತ್ವದ ಎನ್‌ಡಿಎ 102 ಸ್ಥಾನಗಳನ್ನು ಗೆಲ್ಲುವ ಮೂಲಕ ಅಧಿಕಾರವನ್ನು ಉಳಿಸಿಕೊಂಡರೆ, ಕಾಂಗ್ರೆಸ್ 21, ಇತರರು 3 ಸ್ಥಾನಗಳನ್ನು ಗೆದ್ದುಕೊಂಡಿದ್ದಾರೆ.

ಪ್ರತಿ ಪಕ್ಷ ಕಾಂಗ್ರೆಸ್ ಹೀನಾಯ ಸೋಲು ಅನುಭವಿಸಿದೆ. ಅಸ್ಸಾಂ ಕಾಂಗ್ರೆಸ್ ಅಧ್ಯಕ್ಷ ಗೌರವ್ ಗೊಗೊಯ್ ಅವರು ಜೋರ್ಹತ್ ವಿಧಾನಸಭಾ ಕ್ಷೇತ್ರದಲ್ಲಿ ಪ್ರತಿಸ್ಪರ್ಧಿ ಬಿಜೆಪಿಯ ಹಿತೇಂದ್ರನಾಥ್ ಗೋಸ್ವಾಮಿ ವಿರುದ್ಧ 23,182 ಮತಗಳಿಂದ ಸೋತಿದ್ದಾರೆ.

ಶಿಕ್ಷಣ ಸಚಿವ ರನೋಜ್ ಪೆಗು ಧೇಮಾಜಿ ಕ್ಷೇತ್ರದಲ್ಲಿ ಕಾಂಗ್ರೆಸ್ ಪ್ರತಿಸ್ಪರ್ಧಿ ಸೈಲೆನ್ ಸೋನೋವಾಲ್ ವಿರುದ್ಧ 32,229 ಮತಗಳ ಭಾರೀ ಅಂತರದಿಂದ ಗೆದ್ದಿದ್ದಾರೆ. ಅಸ್ಸಾಂ ಕ್ಯಾಬಿನೆಟ್ ಸಚಿವ ಮತ್ತು ಬಿಪಿಎಫ್ ನಾಯಕ ಚರಣ್ ಬೊರೊ ತಮ್ಮ ಮಜ್ಬತ್ ಕ್ಷೇತ್ರ ವನ್ನು ಉಳಿಸಿಕೊಂಡಿದ್ದು, ಪ್ರತಿಸ್ಪರ್ಧಿ ಜೆಎಂಎಂ ಅಭ್ಯರ್ಥಿಯನ್ನು 55,000ಕ್ಕೂ ಹೆಚ್ಚು ಮತಗಳಿಂದ ಸೋಲಿಸಿದ್ದಾರೆ.

# ಶೋಅಪ್ ಬಿಟ್ಟು ಜಿಲ್ಲಾಧಿಕಾರಿ ಕೆಲಸ ಮಾಡಲಿ

### ಜಿಲ್ಲೆಯ ಆಡಳಿತ ವ್ಯವಸ್ಥೆ ಹದಗೆಟ್ಟಿದೆ : ಹೆಚ್.ಡಿ.ರೇವಣ್ಣ ಆಕ್ರೋಶ

• ಪ್ರಜೋದಯ ವರದಿ



**ಹಾಸನ:** ಜಿಲ್ಲಾ ಪ್ರವಾಸ ಮಾಡುತ್ತಾ, ಶೋ ಅಪ್ ಕೊಡುವುದನ್ನು ಬಿಟ್ಟು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಕಚೇರಿಯಲ್ಲಿ ಕುಳಿತು ಬಾಕಿ ಉಳಿದಿರುವ ಕಡತಗಳನ್ನು ವಿಲೇವಾರಿ ಮಾಡಲಿ ಎಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಆಕ್ರೋಶ ವ್ಯಕ್ತಪಡಿಸಿದರು.

ಸೋಮವಾರ ನಗರದ ಪ್ರವಾಸಿ ಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಿಲ್ಲಾಧಿಕಾರಿಗೆ ಕಂದಾಯ ಇಲಾಖೆ ಕೆಲಸಗಳನ್ನು ಮಾಡುವ ಯೋಗ್ಯತೆ ಇಲ್ಲದಿದ್ದಾಗ ಬೇರೆ ಇಲಾಖೆಗಳ ಕೆಲಸಕ್ಕೆ ಏಕೆ ಕೈ ಹಾಕಬೇಕು. ಇಂತಹವರು ಜಿಲ್ಲಾಧಿಕಾರಿಯಾಗಲು ನಾಲಾಯಕ್. ಜಿಲ್ಲೆಯಲ್ಲಿ ಯಾವುದೇ ಕೆಲಸ, ಕಾರ್ಯಗಳು ಸರಿಯಾಗಿ ನಡೆಯುತ್ತಿಲ್ಲವೆಂದು ಆರೋಪಿಸಿದರು.

ಜಿಲ್ಲೆಯಲ್ಲಿನ ರೈಲ್ವೆ, ರಸ್ತೆ ಯೋಜನೆಗೆ ಸಂಬಂಧಿಸಿದಂತೆ ಭೂಸ್ವಾಧೀನ ಪ್ರಕ್ರಿಯೆ ನಡೆಯುತ್ತಿಲ್ಲ. ಜನರ ಸಂಕಷ್ಟಗಳನ್ನು ಕೇಳೋರೆ ಇಲ್ಲ ಎನ್ನುವಂತಾಗಿದೆ. ಕಾಮಸಮುದ್ರ ಏತ ನೀರಾವರಿಗೆ ಹಣ ಮಂಜೂರಾಗಿದೆ. ಅದನ್ನು ಸರಿಯಾಗಿ ಬಳಕೆ ಮಾಡಿಕೊಳ್ಳಲು ಜಿಲ್ಲಾಧಿಕಾರಿಗೆ ಆಗಿಲ್ಲ. ಜಿಲ್ಲೆಯಲ್ಲಿ ಭ್ರಷ್ಟಾಚಾರ ಮಿತಿಮೀರಿ ಹೋಗಿದೆ. ಒಬ್ಬ ಅಧಿಕಾರಿಗೆ ಮೂರು-ನಾಲ್ಕು ಹುದ್ದೆ ಹೆಚ್ಚುವರಿ ಜವಾಬ್ದಾರಿ ಕೊಟ್ಟಿದ್ದಾರೆಂದು ದೂರಿದರು.

ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರೇ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾರೆ, ಅವರಿಗೇ ಇಲ್ಲಿ ಆಡಳಿತ ವ್ಯವಸ್ಥೆ ಸರಿಪಡಿಸಲು ಆಗುತ್ತಿಲ್ಲ. ಪೋಡಿ ಮಾಡಿಸಲು ಆಗದೇ ಜನರು ಒದ್ದಾಡುತ್ತಿದ್ದಾರೆ. ನಮ್ಮ ಜಿಲ್ಲೆ ಮೊದಲೇ ಈ ಸರ್ಕಾರದ ಅವಧಿಯಲ್ಲಿ ಸೊರಗಿ ಹೋಗಿದೆ. ಈ ನಡುವೆ ಇಂತಹ ಅಧಿಕಾರಿಗಳಿಂದ ಮತ್ತಷ್ಟು ಜನರು ಸೊರಗುವಂತಾಗಿದೆ. ಜಿಲ್ಲಾಧಿಕಾರಿ ಸುತ್ತೋದು ಬಿಟ್ಟು, ತಹಶೀಲ್ದಾರ್‌ಗಳು ಲೂಟಿ ಹೊಡೆಯುತ್ತಿರುವುದನ್ನು ಮೊದಲು ತಡೆಯಲಿ ಎಂದು ಒತ್ತಾಯಿಸಿದರು.

ನಮಗೆ ಇಂತಹ ಅಧಿಕಾರಿಗಳನ್ನು ನೋಡಿ ನಾಚಿಕೆ ಆಗುತ್ತಿದೆ. ಒಬ್ಬ ಅಪರ ಜಿಲ್ಲಾಧಿಕಾರಿ ನಿಯೋಜನೆ ಮಾಡಲು ಈ ಸರ್ಕಾರಕ್ಕೆ ಆಗಿಲ್ಲ. ಕೃಷ್ಣ ಬೈರೇಗೌಡ ಅವರನ್ನು ಪ್ರಾಮಾಣಿಕರು ಎಂದುಕೊಂಡಿದ್ದೇವೆ. ಆದರೆ, ಅವರ ಉಸ್ತುವಾರಿ ಜಿಲ್ಲೆಯೇ ಲೂಟಿಕೋರರ ಕೈಗೆ ಸೇರಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಜಿಲ್ಲೆಯ ಆಡಳಿತ ವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದೆ. ಜನಸಾಮಾನ್ಯರ ಸಮಸ್ಯೆಗಳಿಗೆ ಯಾವ ಅಧಿಕಾರಿಗಳು ಸ್ಪಂದಿಸುತ್ತಿಲ್ಲ. 1980ರ ದಶಕದಲ್ಲಿ ಮಂಜೂರಾದ ಭೂಮಿಗಳಿಗೂ ಇಂದಿಗೂ ಪೋಡಿ, ದುರಸ್ತಿ ಕಾರ್ಯಗಳು ಪೂರ್ಣಗೊಂಡಿಲ್ಲ. ಜನರು ಕಚೇರಿಯಿಂದ ಕಚೇರಿಗೆ ಅಲೆದಾಡುವಂತಾಗಿದೆ. ಈ ಬಗ್ಗೆ ಸಚಿವರು ಕ್ರಮವಹಿಸಬೇಕೆಂದು ಹೇಳಿದರು.

**ಭೂಸ್ವಾಧೀನ ಪ್ರಕ್ರಿಯೆ ವಿಳಂಬ**

ಹಾಸನ-ಆಲೂರು-ಬೇಲೂರು ರೈಲ್ವೆ ಮಾರ್ಗ ಯೋಜನೆಗೆ ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ 770 ಕೋ.ರೂ. ಮಂಜೂರಾಗಿದ್ದರೂ, ಯೋಜನೆಗೆ ಅಗತ್ಯವಿರುವ ಸುಮಾರು 580 ಎಕರೆ ಭೂಸ್ವಾಧೀನ ಪ್ರಕ್ರಿಯೆ ಇನ್ನೂ ಆರಂಭವಾಗದಿರುವುದು ಆಡಳಿತದ ವೈಫಲ್ಯವನ್ನು ತೋರಿಸುತ್ತದೆ. ಎಂಟು ವರ್ಷಗಳಿಂದ ಯೋಜನೆ ಕುಂಠಿತಗೊಂಡಿದೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರವೂ ಯಾವುದೇ ಸ್ಪಷ್ಟ ಪ್ರಗತಿ ಕಂಡು ಬಂದಿಲ್ಲ. ಕಾಮಸಮುದ್ರ ಏತ ನೀರಾವರಿ ಯೋಜನೆಗೆ ಹಣ ಮಂಜೂರಾಗಿದ್ದರೂ, ಸಮರ್ಪಕವಾಗಿ ಬಳಸಲು ಜಿಲ್ಲಾಡಳಿತ ವಿಫಲವಾಗಿದೆ ಎಂದು ಹೇಳಿದರು.

**ಭೂಸ್ವಾಧೀನಾಧಿಕಾರಿ ಕಚೇರಿ ಲೂಟಿ ಕೇಂದ್ರ**

ಜಿಲ್ಲೆಯಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿ ಕಚೇರಿ ಲೂಟಿ ಕೇಂದ್ರವಾಗಿ ಮಾರ್ಪಟ್ಟಿದೆ. ಹಲವು ವರ್ಷಗಳಿಂದ ಯಾವುದೇ ಭೂಸ್ವಾಧೀನ ಪ್ರಕ್ರಿಯೆ ಸರಿಯಾಗಿ ನಡೆದಿಲ್ಲ. ಆ ಕಚೇರಿಯಲ್ಲಿ ಅಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿರುವವರಿಗೆ ಆರು ವರ್ಷಗಳಾದರೂ ಕಾರ್ಯಕ್ಷಮತೆ ಕಾಣಿಸಿಲ್ಲವೆಂದು ಎಸ್‌ಎಲ್‌ಓ ವಿರುದ್ಧ ರೇವಣ್ಣ ಆಕ್ರೋಶ ವ್ಯಕ್ತಪಡಿಸಿದರು.

## ಪೇಪರ್‌ಲೆಸ್ ನೋಂದಣಿ: ಲೋಪ ಸರಿಪಡಿಸಲು ಒತ್ತಾಯ

• ಪ್ರಜೋದಯ ವರದಿ

**ಹಾಸನ:** ಪಾರದರ್ಶಕ ಹಾಗು ತ್ವರಿತ ನೋಂದಣಿ ಉದ್ದೇಶದಿಂದ ಸರ್ಕಾರ ಪೇಪರ್‌ಲೆಸ್ ನೋಂದಣಿ ವ್ಯವಸ್ಥೆ ಜಾರಿಗೊಳಿಸಿದೆಯಾದರೂ ಲೋಪದೋಷಗಳನ್ನು ಸರಿಪಡಿಸದಿದ್ದರೆ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ ಎಂದು ನೋಂದಣಿ ಮತ್ತು ಮುದ್ರಾಂಕ ಇಲಾಖೆಯಿಂದ ಪರವಾನಗಿ ಪಡೆದ ಪತ್ರ ಬರಹಗಾರರ ಒಕ್ಕೂಟದ ಜಿಲ್ಲಾ ಜಂಟಿ ಕಾರ್ಯದರ್ಶಿ ಕೃಷ್ಣ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಪೇಪರ್ ಲೆಸ್ ಆನ್‌ಲೈನ್ ನೋಂದಣಿ ವಿಧಾನದಲ್ಲಿ ಸಾಕಷ್ಟು ಲೋಪದೋಷಗಳಿವೆ. ಅದರಿಂದ ರೈತರು, ತಂತ್ರಾಂಶದಲ್ಲಿ ಎದುರಾಗುವ ತಾಂತ್ರಿಕ ತೊಂದರೆಗಳು ಹಾಗು ಅನಕ್ಷರಸ್ಥರಿಗೆ ಅನಾನುಕೂಲ ಆಗಲಿದೆ. ಕಳೆದ ತಿಂಗಳು ಚಾಮರಾಜನಗರದಲ್ಲಿ ಯೋಜನೆಗೆ ಪ್ರಾಯೋಗಿಕ ಚಾಲನೆ ನೀಡಲಾಗಿದೆ. ಈ ವಿಧಾನದಿಂದ ಆಸ್ತಿ ದಾಖಲೆಗಳಿಗೆ ಭೌತಿಕ ಪ್ರತಿಗಳು ದೊರೆಯದಿರುವುದು ಭವಿಷ್ಯದಲ್ಲಿ ಗಂಭೀರ ಸಮಸ್ಯೆಗಳಿಗೆ ಕಾರಣವಾಗಬಹುದು. ಡಿಜಿಟಲ್ ಲಾಕರ್‌ನಲ್ಲಿ ಮಾತ್ರ ದಾಖಲೆಗಳು ಉಳಿಯುವುದರಿಂದ ವಾರಸುದಾರರಿಗೆ ಮಾಹಿತಿ ದೊರೆಯದ ಕಾರಣ ಅಪಾಯ ಆಗಲಿದೆ ಎಂದು ತಿಳಿಸಿದರು.

ಆನ್‌ಲೈನ್‌ಮೂಲಕವೇ ಮುದ್ರಾಂಕ ಹಾಗು ನೋಂದಣಿ ಶುಲ್ಕ ಪಾವತಿಸಬೇಕಾಗಿದ್ದು, ಯಾವುದಾದರೂ ಕಾರಣದಿಂದ ನೋಂದಣಿ ಪ್ರಕ್ರಿಯೆ ಪೂರ್ಣಗೊಳ್ಳದಿದ್ದರೆ ಹಣವನ್ನು ಮರಳಿ ಪಡೆಯಲು ಅವಕಾಶ ಇಲ್ಲದಿರುವುದು ಸಾರ್ವಜನಿಕರಿಗೆ ಆರ್ಥಿಕ ಹೊರೆ ಉಂಟು ಮಾಡುತ್ತಿದೆ. ಜೊತೆಗೆ ಹೆಚ್ಚುವರಿಯಾಗಿ ಸೇವಾ ಶುಲ್ಕ ಸೇರಿಸಲಾಗಿದೆ ಎಂದು ಆರೋಪಿಸಿದರು.

ಪೇಪರ್‌ಲೆಸ್ ವ್ಯವಸ್ಥೆಯಲ್ಲಿ ಭೌತಿಕ ಸಹಿ ಇಲ್ಲದೆ ಇ-ಸಹಿ ಮೂಲಕ ವ್ಯವಹಾರ ನಡೆಯುವುದರಿಂದ ಅನಕ್ಷರಸ್ಥರು ಮೋಸಕ್ಕೆ ಒಳಗಾಗುವ ಸಾಧ್ಯತೆ ಹೆಚ್ಚಿದೆ. ಇದೇ ವೇಳೆ ಸಾಕ್ಷಿ ದಾರರ ಓಟಿಪಿ ಪ್ರಕ್ರಿಯೆ, ಹಾಜರಾತಿ ಸಮಸ್ಯೆಗಳು ನೋಂದಣಿ ವಿಳಂಬಕ್ಕೆ ಕಾರಣವಾಗುತ್ತಿವೆ ಎಂದರು.

ಈ ವ್ಯವಸ್ಥೆ ಭೂ ಮಾಫಿಯಾ ಚಟುವಟಿಕೆಗಳಿಗೆ ಉತ್ತೇಜನ ನೀಡುವ ಸಾಧ್ಯತೆ ಇದೆ. ಮೊಬೈಲ್ ಹ್ಯಾಕಿಂಗ್ ಮತ್ತು ಓಟಿಪಿ ಮೋಸ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಡಿಜಿಟಲ್ ನೋಂದಣಿ ವ್ಯವಸ್ಥೆ ಭದ್ರತೆಯ ಕುರಿತು ಪ್ರಶ್ನೆಗಳು ಉದ್ಭವಿಸುತ್ತಿವೆಂದು ವಿವರಿಸಿದರು. ಬ್ಯಾಂಕ್ ಸಾಲ ಪಡೆಯಲು ಭೌತಿಕ ದಾಖಲೆಗಳ ಅಗತ್ಯವಿರುವುದರಿಂದ ಪೇಪರ್‌ಲೆಸ್ ವ್ಯವಸ್ಥೆ ಅನಾನುಕೂಲ ಉಂಟು ಮಾಡುತ್ತಿದೆ. ವಿಲ್ ಪತ್ರ ಗಳನ್ನು ಗುಪ್ತವಾಗಿ ಇಡುವ ವ್ಯವಸ್ಥೆಯೂ ಇಲ್ಲದಿರುವುದು ಮತ್ತೊಂದು ಸಮಸ್ಯೆಯಾಗಿದೆ. ಸರ್ಕಾರ ಈ ಎಲ್ಲಾ ಸಮಸ್ಯೆ ಅವಲೋಕಿಸಿ ಸರಿಪಡಿಸಬೇಕು. ಇಲ್ಲದಿದ್ದರೆ ಹೋರಾಟ ನಡೆಸಬೇಕಾಗುತ್ತದೆಂದು ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಜಯ ರಾಮ್, ಸತೀಶ್, ತುಳಸಿದಾಸ್, ಸತ್ಯ ನಾರಾಯಣ್,ಎಂ.ಆರ್.ರಂಗಶೆಟ್ಟಿ ಇದ್ದರು.

## ಪ್ರೇಯಸಿ ಕೊಲೆ: ಪ್ರಿಯತಮನಿಗೆ ಜೀವಾವಧಿ ಶಿಕ್ಷೆ

• ಪ್ರಜೋದಯ ವರದಿ

**ಹಾಸನ:** ಬೇರೆ ಯಾರದೋ ಜೊತೆಗೆ ಮಾತನಾಡುತ್ತಿದ್ದಾಳೆಂಬ ಸಂಶಯದಿಂದ ಪ್ರಿಯತಮೆಯ ಕುತ್ತಿಗೆಗೆ ವೇಲ್‌ನಿಂದ ಬಿಗಿದು ಕೊಲೆ ಮಾಡಿದ್ದ ಪ್ರಿಯತಮನಿಗೆ ಜೀವಾವಧಿ ಶಿಕ್ಷೆ ವಿಧಿಸಿ ಜಿಲ್ಲಾ ನ್ಯಾಯಾಲಯ ತೀರ್ಪು ಪ್ರಕಟಿಸಿದೆ.

ಸಕಲೇಶಪುರ ತಾಲ್ಲೂಕು ಯಸಳೂರು ಹೋಬಳಿ ಹಳ್ಳಿಯೂರು ಗ್ರಾಮದ ಪ್ರಿಯಾ ಮೃತರು. ಪ್ರದೀಪ್ ಶಿಕ್ಷೆಗೆ ಗುರಿಯಾದ ವ್ಯಕ್ತಿ. ಪ್ರಿಯಾ ಹಾಗು ಪ್ರದೀಪ್ ಪರಸ್ಪರ ಪ್ರೀತಿಸಿ ಕುಟುಂಬಸ್ಥರ ಸಮ್ಮುಖದಲ್ಲಿ ನಿಶ್ಚಿತಾರ್ಥ ಮಾಡಿಕೊಂಡಿದ್ದರು. 2015ರ ಜ. 7ರಂದು ಪ್ರಿಯಾ ಮೊಬೈಲ್‌ನಲ್ಲಿ ಯಾರದೋ ಜೊತೆಗೆ ಮಾತನಾಡುತ್ತಿದ್ದಾಳೆಂದು ಸಂಶಯದಿಂದ ಪ್ರದೀಪ್ ಆಕೆಯನ್ನು ಗ್ರಾಮ ಸಮೀಪದ ಕಾಡಿಗೆ ಕರೆದೊಯ್ದು ಧರಿಸಿದ್ದ ಚೂಡಿದಾರ್ ವೇಲ್‌ನಿಂದ ಕುತ್ತಿಗೆ ಬಿಗಿದು ಕೊಲೆ ಮಾಡಿದ್ದ. ಬಳಿಕ ಸಾಕ್ಷ್ಯ ನಾಶಕ್ಕಾಗಿ ಅದೇ ವೇಲ್‌ನಿಂದ ಪಕ್ಕದಲ್ಲೇ ಇದ್ದ ನೇರಳೆ ಮರದ ಕೊಂಬೆಗೆ ನೇಣು ಬಿಗಿದುಕೊಂಡಂತೆ ಮಾಡಿ ಆತ್ಮಹತ್ಯೆಯ ಕಥೆ ಕಟ್ಟಿದ್ದ.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಜಿಲ್ಲಾ 3ನೇ ಅಪರ ಮತ್ತು ಸತ್ರ ನ್ಯಾಯಾಧೀಶ ಆನಂದ್ ಅವರು, ಪ್ರದೀಪ್ ವಿರುದ್ಧದ ಆರೋಪಗಳು ಸಾಬೀತಾದ ಹಿನ್ನಲೆಯಲ್ಲಿ ಜೀವಾವಧಿ ಶಿಕ್ಷೆ ಮತ್ತು 20 ಸಾವಿರ ರೂ. ದಂಡ ವಿಧಿಸಿ ಆದೇಶಿಸಿದ್ದಾರೆ. ಸರ್ಕಾರದ ಪರವಾಗಿ ಯು. ವಿನಯರಾಣಿ ಮತ್ತು ಇ.ಡಿ. ಶ್ರೀನಿವಾಸ ವಾದ ಮಂಡಿಸಿದ್ದರು.

# ಬರದ ನಾಡು ಅರಸೀಕೆರೆಗೆ ಎತ್ತಿನಹೊಳೆ ನೀರು: ಹೆಚ್ಚಿದ ನಿರೀಕ್ಷೆ

• ಪ್ರಜೋದಯ ವರದಿ



**ಅರಸೀಕೆರೆ:** ತಾಲ್ಲೂಕಿನ ಬಯಲು ಸೀಮೆ ಭಾಗಕ್ಕೆ ನೀರು ಕಲ್ಪಿಸುವ ಮಹತ್ವಾಕಾಂಕ್ಷಿ ಎತ್ತಿನಹೊಳೆ ಯೋಜನೆಗಿದ್ದ ಅಡ್ಡಿ ನಿವಾರಣೆಯಾಗಿದ್ದು, ನೇತ್ರಾವತಿ ಕೊಳ್ಳದ ನೀರು ತಾಲ್ಲೂಕಿನ ಕೆರೆ ಕಟ್ಟೆಗಳನ್ನು ತಲುಪುವ ದಾರಿ ಕೊನೆಗೂ ಸುಗಮವಾಗಿದೆ.

ಅರಣ್ಯ ಇಲಾಖೆಗೆ ಸೇರಿದ ಐದಳ್ಳ ಕಾವಲು ಮೂಲಕ ಹಾದು ಬರಬೇಕಿದ್ದ ಕಾಮಗಾರಿಗೆ ಕಾನೂನಾತ್ಮಕ ಅಡ್ಡಿ ಎದುರಾಗಿತ್ತು. ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರ ಹೋರಾಟದ ಫಲ, ರಾಜ್ಯ ಹಾಗು ಕೇಂದ್ರ ಅರಣ್ಯ ಇಲಾಖೆಯೊಂದಿಗೆ ಪತ್ರ ವ್ಯವಹಾರ ನಡೆಸಿ ಅನುಮತಿ ಪಡೆಯುವಲ್ಲಿ ಯಶಸ್ವಿಯಾಗಿರುವುದರಿಂದ ಮಧ್ಯ ಕರ್ನಾಟಕದ ಹತ್ತಾರು ಜಿಲ್ಲೆಗಳ ಜನರ ನೀರಿನ ದಾಹ ನೀಗಿಸುವ ಮಹತ್ವಕಾಂಕ್ಷಿ ಯೋಜನೆಗೆ ಹಸಿರು ನಿಶಾನೆ ಸಿಕ್ಕಿದೆ.

ಕೇಂದ್ರ ಅರಣ್ಯ ಇಲಾಖೆಯ ಅನುಮತಿ ದೊರೆಯುತ್ತಿದ್ದಂತೆ ಚುರುಕಾದ ಶಿವಲಿಂಗೇಗೌಡ ಅವರು, ತಾಲ್ಲೂಕಿನ ನಾಗೇನಹಳ್ಳಿ ಸಮೀಪದ ರಂಗನಾಥ ಸ್ವಾಮಿ ದೇವಾಲಯದ ಸಮೀಪ ಸ್ಥಗಿತಗೊಂಡಿದ್ದ ಎತ್ತಿನಹೊಳೆ ಯೋಜನೆ ಪೈಪ್‌ಲೈನ್ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸುವ ಮೂಲಕ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಶಾಸಕರು, ಕರ್ನಾಟಕದ ಹತ್ತಾರು ಜಿಲ್ಲೆಯ ಜನರ ದಾಹ ನಿಗೀಸಲು ಎತ್ತಿನಹೊಳೆ ಯೋಜನೆ ಸಂಜೀವಿನಿಯಾಗಿದೆ. ರಾಜಕೀಯವಾಗಿ ಪರ-ವಿರೋಧ ಹೇಳಿಕೆಗಳು ಕಾಮಗಾರಿಗೆ ಎದುರಾದ ಅಡ್ಡಿ ಆತಂಕಗಳೆಲ್ಲಾ ನಿವಾರಣೆಯಾಗಿದೆ. ಕೆಲವೇ ದಿನಗಳಲ್ಲಿ ತಾಲ್ಲೂಕಿನ ಕೆರೆ ಕಟ್ಟೆಗಳಲ್ಲಿ ನೇತ್ರಾವತಿ ಕೊಳ್ಳದ ನೀರು ತುಂಬಲಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಹಾರನಹಳ್ಳಿ ಕೋಡಿ ಮಠದ ಶ್ರೀ ಡಾ. ಶಿವಾನಂದ ಶಿವಯೋಗಿ ರಾಜೇಂದ್ರ ಮಹಾಸ್ವಾಮೀಜಿ ಅವರು ಮಾತನಾಡಿ, ಹೆಳವನ ಮನೆ ಬಾಗಿಲಿಗೆ ಹೊಳೆ ಬಂತು ಎಂಬಂತೆ ಬಯಲು ಸೀಮೆ ಅರಸೀಕೆರೆ ತಾಲ್ಲೂಕಿಗೆ ಎತ್ತಿನಹೊಳೆ ಯೋಜನೆ ವರದಾನವಾಗಿದೆ. ಇದು ಶಿವಲಿಂಗೇಗೌಡರ ಅವಿರತ ಹೋರಾಟದ ಫಲ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಕನ್ನಂಬಾಡಿ ಕಟ್ಟೆ ಕಟ್ಟಿದಾಗ ಅವರಿಗೆ ಭೂಪ, ಮನೆ ಮನೆಗೆ ದೀಪ ಎಂದು ಕರೆಯುತ್ತಿದ್ದರು. ಹಾಗೆಯೇ ಶಿವಲಿಂಗೇಗೌಡರ ಹೆಸರು ತಾಲ್ಲೂಕಿನಲ್ಲಿ ಶಾಶ್ವತವಾಗಿ ಇರಲಿದೆ ಎಂದರು.

ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಧರ್ಮಶೇಖರ್ ಅವರು ಮಾತನಾಡಿ, ಜಿಲ್ಲೆಯಲ್ಲಿ ಎರಡು ನದಿ ಹರಿದರೂ ನೀರಾವರಿ ಸೌಲಭ್ಯ ಇರಲಿಲ್ಲ. ಕುಡಿಯುವ ನೀರಿಗೂ ಪರದಾಡ ಪರಿಸ್ಥಿತಿ ಇತ್ತು. ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರ ಪ್ರಯತ್ನ ಹಾಗು ದೂರದೃಷ್ಟಿಯ ಪರಿಣಾಮ ಮುಂದಿನ 50 ವರ್ಷ ತಾಲ್ಲೂಕಿನ ಜನರನ್ನು ನೀರಿನ ಸಮಸ್ಯೆ ಕಾಡದಂತೆ ವ್ಯವಸ್ಥೆ ಮಾಡಿದ್ದಾರೆ. ಶಿವಲಿಂಗೇಗೌಡರು ಬರದ ನಾಡಿನ ಭಗೀರಥರಾಗಿದ್ದಾರೆಂದರು.

ಕೆಪಿಸಿಸಿ ಜಿಲ್ಲಾ ಕಾರ್ಯಧ್ಯಕ್ಷ ಜಿ.ಬಿ. ಶಶಿಧರ್, ಕಾಂಗ್ರೆಸ್ ಮುಖಂಡರಾದ ಅಡವಿಸ್ವಾಮಿ, ಶಿವಶಂಕರ್, ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಬಿಳಿಚೌಡಯ್ಯ, ಮಾಜಿ ಸದಸ್ಯ ಸ್ವಾಮಿ, ಎತ್ತಿನಹೊಳೆ ಎಇಇ ಆನಂದ್, ದೇವರಾಜ್ ಮೊದಲಾದವರಿದ್ದರು.

## ಕೋರ್ಟ್ ಅಂತಿಮ ಆದೇಶ ಆಗದಿದ್ದರೂ ಅಧಿಕಾರ ಸ್ವೀಕಾರ

» **ಮೊದಲನೇ ಪುಟದಿಂದ**

ಯನ್ನು ವಜಾ ಮಾಡಿದ್ದೇವೆಂದು ನ್ಯಾಯಾಧೀಶರು ಹೇಳಿದಾಗ ನಮ್ಮ ವಕೀಲರು ಸುಪ್ರೀಂ ಕೋರ್ಟ್ ಮೆಟ್ಟಿಲೇರಲು ನಾಲ್ಕು ವಾರಗಳ ಸಮಯಾವಕಾಶ ಬೇಕೆಂದು ಕೇಳಿದ್ದರು. ಅದಕ್ಕೆ ನ್ಯಾಯಾಧೀಶರು ಅವಕಾಶ ನೀಡದೆ ತಮ್ಮ ಆದೇಶ ಪ್ರತಿ ತಿದ್ದುಪಡಿ ಆಗಬೇಕು. ಅದಾದ ಬಳಿಕ ಮುಂದಿನ ಕ್ರಮ ಕೈಗೊಳ್ಳಬಹುದು. ಅಲ್ಲಿಯವರೆಗೆ ಯಾರೂ ಅಧಿಕಾರದಲ್ಲಿ ಮುಂದುವರಿಯುವಂತಿಲ್ಲವೆಂದು ಹೇಳಿದ್ದಾರೆ. ನ್ಯಾಯಾಧೀಶರು ಇಲ್ಲಿಯವರೆಗೆ ಅಂತಿಮ ಆದೇಶ ಪ್ರಕಟಿಸಿಲ್ಲ. ಆದರೆ, ಬಿ.ಆರ್.ಗುರುದೇವ್ ಹಾಗು ಇತರರು ತಮಗೆ ಗೆಲುವು ಸಿಕ್ಕಿದೆ ಎಂದು ಸಂಭ್ರಮಿಸುವ ಮೂಲಕ ಕಾನೂನು ಉಲ್ಲಂಘಿಸಿದ್ದಾರೆಂದು ದೂಷಿಸಿದರು.

ಸಂಸ್ಥೆಯ ವ್ಯಾಪ್ತಿಗೆ ಬರುವ ಕಾಲೇಜುಗಳಿಗೆ ಭೇಟಿ ನೀಡಿ ತಾವೇ ಅಧಿಕಾರ ವಹಿಸಿಕೊಂಡಿರುವುದಾಗಿ ಪತ್ರ ನೀಡಿರುವುದಲ್ಲದೆ, ಸಂಸ್ಥೆಯ ಬ್ಯಾಂಕ್ ಖಾತೆಗಳಿಗೂ ಮುಂದಿನ ಹಣಕಾಸು ವ್ಯವಹಾರಗಳಿಗೆ ತಮ್ಮ ಸಹಿ ಬಳಸಬೇಕೆಂದು ನೋಟೀಸ್ ನೀಡಿದ್ದಾರೆ. ನ್ಯಾಯಾಲಯದ ಮುಂದೆ ಎಲ್ಲರೂ ಸಮಾನರು. ನಮ್ಮ ವಿರುದ್ಧ ತೀರ್ಪು ಬಂದಿದ್ದರೆ ಅದನ್ನು ಗೌರವಿಸಿ ಅಧಿಕಾರ ಹಸ್ತಾಂತರಿಸಲು ಸಿದ್ಧರಿದ್ದೇವೆ. ಆದರೆ, ಅಧಿಕೃತ ಆದೇಶ ಹೊರಬರುವ ಮುನ್ನವೇ ಆತುರದಲ್ಲಿ ಅಧಿಕಾರ ವಹಿಸಿಕೊಳ್ಳುವುದು ಸರಿಯಲ್ಲವೆಂದರು.

ಕಳೆದ ಗುರುವಾರ ಬೆಳಿಗ್ಗೆ ಆಡಳಿತ ಮಂಡಳಿ ಕಚೇರಿಗೆ ಬಂದು ಗುರುದೇವ್ ಹಾಗು ಬೂವನಹಳ್ಳಿ ಶ್ರೀನಿವಾಸ್ ಇತರರು ಕಚೇರಿಯ ಬೀಗ ಒಡೆದು ಹೋಗಿದ್ದಾರೆ. ಈ ಸಂಬಂಧ ದೂರು ನೀಡಲಾಗಿದೆ. ಕಳೆದ 68 ವರ್ಷಗಳ ಅವಧಿಯಲ್ಲಿ ಅನೇಕ ಅಕ್ರಮಗಳು ನಡೆದಿವೆ. ಅಕ್ರಮ ಪ್ರಶ್ನಿಸಿದರೆ ಅವರನ್ನು ಹೊರಹಾಕುವ ವ್ಯವಸ್ಥಿತ ಪಿತೂರಿ ನಡೆಸಲಾಗುತ್ತಿದೆ. ನಾನು ಸಮಿತಿಯೊಳಗೆ ಪ್ರವೇಶಿಸಿದ ಬಳಿಕ ಅವರ ಬಂಡವಾಳ ಬಯಲಾಗುತ್ತಿದೆ. ಸಂಸ್ಥೆಯ ಹೆಸರು ಉಳಿಸಬೇಕೆಂಬ ಉದ್ದೇಶದಿಂದ ಪಾರದರ್ಶಕತೆಗೆ ಆದ್ಯತೆ ನೀಡಲಾಯಿತು. ಹಣ ಮಾಡಿಕೊಳ್ಳಲು ಅವಕಾಶ ಮಾಡಿಕೊಡುತ್ತಿಲ್ಲವೆಂದು ಬಿ.ಆರ್.ಗುರುದೇವ್ ನಮ್ಮ ವಿರುದ್ಧ ತಿರುಗಿ ಬಿದ್ದಿದ್ದಾರೆಂದು ಆರೋಪಿಸಿದರು. ಎಂಟಿಇಎಸ್ ಅಧ್ಯಕ್ಷ ಆರ್.ಟಿ. ದ್ಯಾವೇಗೌಡ ಮಾತನಾಡಿದರು. ಖಜಾಂಚಿ ಹೆಚ್.ಡಿ.ಪಾರ್ಶ್ವನಾಥ್, ನಿರ್ದೇಶಕರಾದ ಜಿ.ಎಲ್. ಮುದ್ದೇಗೌಡ, ನಾಗರಾಜ್ ಜೈನ್, ಸುರೇಶ್ ಇದ್ದರು.

## ಹಿಂದುಳಿದವರ ಹೆಸರಿನಲ್ಲಿ ರಾಜಕೀಯ ಲಾಭ: ಆರೋಪ

• ಪ್ರಜೋದಯ ವರದಿ



**ಅರಸೀಕೆರೆ:** ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಬಿಳಿಚೌಡಯ್ಯ ಅವರು ಹಿಂದುಳಿದ ಸಮುದಾಯಗಳನ್ನು ಬಳಸಿಕೊಂಡು ರಾಜಕೀಯ ಹಾಗು ಆರ್ಥಿಕವಾಗಿ ಬೆಳೆದರೆ ಹೊರತು ಸಮಾಜದ ಏಳಿಗೆಗೆ ಯಾವ ಕೊಡುಗೆ ನೀಡಲಿಲ್ಲವೆಂದು ದುಮ್ಮೇನಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಅಮ್ಮನಟ್ಟೆ ಅಜ್ಜಪ್ಪ ಅವರು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ಬಿಳಿಚೌಡಯ್ಯ ಅವರು ಹಿಂದುಳಿದ ಸಮುದಾಯಗಳ ಬೆಂಬಲದಿಂದಲೇ ರಾಜಕೀಯವಾಗಿ ಬೆಳೆದರು. ಆದರೆ ಬೆಂಬಲ ನೀಡಿದ ಕುರುಬ, ಯಾದವ, ಲಂಬಾಣಿ ಸೇರಿ ಯಾವ ಸಮುದಾಯಕ್ಕೂ ನೆರವಾಗಲಿಲ್ಲ. ವೈಯಕ್ತಿಕ ಬೆಳವಣಿಗೆಗೆ ನಮ್ಮನ್ನು ಬಳಸಿಕೊಂಡಿದ್ದಾರೆ. ಸಮಾಜದ ನಂಬಿಕೆಯನ್ನು ರಾಜಕೀಯ ಲಾಭಕ್ಕೆ ಬಳಸಿಕೊಂಡಿದ್ದಾರೆಂದರು.

ಈ ಹಿಂದೆ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಸಂದರ್ಭದಲ್ಲಿ ಹಿಂದುಳಿದ ಸಮುದಾಯ ಅವರಿಗೆ ಬೆಂಬಲ ನೀಡಿತ್ತು. ಆದರೆ ಇಂದು ಅವರು ಶಾಸಕರನ್ನು ಹೊಗಳುತ್ತಾ ಸ್ವಾರ್ಥ ರಾಜಕೀಯ ಮುಂದುವರಿಸುತ್ತಿದ್ದಾರೆ. ಸಮಾಜದ ಅಭಿವೃದ್ಧಿಗೆ ಯಾವುದೇ ಯೋಜನೆ ಅಥವಾ ಅವಕಾಶಗಳನ್ನು ಒದಗಿಸುವಲ್ಲಿ ವಿಫಲರಾಗಿದ್ದಾರೆಂದು ಕಿಡಿಕಾರಿದರು.

ನಗರಸಭೆಯ ಪ್ರಾಧಿಕಾರ ಹುದ್ದೆಗಳ ಆಯ್ಕೆಯಲ್ಲಿ ಸಹ ಹಿಂದುಳಿದ ಸಮುದಾಯದವರಿಗೆ ಅವಕಾಶ ಕಲ್ಪಿಸಬೇಕಾಗಿದ್ದರೂ ಅದು ನಡೆಯದೇ ಇರುವುದನ್ನು ಪ್ರಶ್ನಿಸಿದ ಅವರು, ಚುನಾವಣೆ ಇಲ್ಲದೆ ನೇಮಕವಾಗುವ ಹುದ್ದೆಗಳಲ್ಲಿ ಹಿಂದುಳಿದ ಸಮುದಾಯಕ್ಕೆ ಆದ್ಯತೆ ನೀಡಬೇಕಾಗಿತ್ತು. ಶಾಸಕರ ಸೂಚನೆಯಂತೆ ಅರುಣ್ ಕುಮಾರ್ ಅವರಿಗೆ ಹುದ್ದೆ ನೀಡಲಾಗಿದೆ. ಈ ನೇಮಕಾತಿಯಲ್ಲಿ ಹಣದ ವ್ಯವಹಾರ ನಡೆದಿದೆ ಎಂಬ ಗಂಭೀರ ಆರೋಪಗಳು ಕೇಳಿ ಬರುತ್ತಿವೆ ಎಂದರು.


ಪ್ರಾಧಿಕಾರದ ಅಧ್ಯಕ್ಷ ಸ್ಥಾನವನ್ನು ಹಿಂದುಳಿದ ಸಮುದಾಯದವರಿಗೆ ನೀಡದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟ ಕೈಗೊಳ್ಳಬೇಕಾಗುತ್ತದೆ. ಸಮಾಜದ ಹಕ್ಕುಗಳನ್ನು ಕಾಪಾಡಲು ನಾವು ಹಿಂದೆ ಸರಿಯುವುದಿಲ್ಲವೆಂದು ಎಚ್ಚರಿಕೆ ನೀಡಿದರು.

ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಜಯರಾಮ್, ಕುರುಬ ಸಮುದಾಯದ ಮಹಾಲಿಂಗಪ್ಪ, ಭರತ್, ಭಾಸ್ಕರ್, ರಂಗಸ್ವಾಮಿ ಇತರರಿದ್ದರು.

# ಹಿಂದೂ ಧರ್ಮ ಉಳಿವಿಗೆ ಎಲ್ಲರ ಸಹಕಾರ ಅಗತ್ಯ

### ಮೆಣಸಮಕ್ಕಿ ಗ್ರಾಮದಲ್ಲಿ ದೇವಾಲಯ ಪುನರ್ ಪ್ರತಿಷ್ಠಾಪನೆ

• ಪ್ರಜೋದಯ ವರದಿ



**ಸಕಲೇಶಪುರ:** ಜಗತ್ತಿನ ಸಂಸ್ಕೃತಿ, ನಾಗರಿಕತೆ ಹಾಗು ಬದುಕುವ ಕಲೆಯನ್ನು ವಿಶ್ವಕ್ಕೆ ಪರಿ ಚಯಿಸಿದವರು ಭಾರತೀಯರು. ದೇಶ ಉಳಿಯಬೇಕೆಂದರೆ ಹಿಂದೂ ಧರ್ಮ ಉಳಿಯಬೇಕು. ಈ ನಿಟ್ಟಿನಲ್ಲಿ ದೇಶದಾದ್ಯಂತ ಧಾರ್ಮಿಕ ಕಾರ್ಯಕ್ರಮಗಳು ನಡೆಯಬೇಕೆಂದು ಜವೇನಹಳ್ಳಿ ವಿರಕ್ತ ಮಠದ ಶ್ರೀ ಸಂಗಮೇಶ್ವರ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಬಾಳ್ಳುಪೇಟೆ ಸಮೀಪದ ಮೆಣಸಮಕ್ಕಿ ಗ್ರಾಮದಲ್ಲಿ ಶ್ರೀ ನಾಗಲಿಂಗೇಶ್ವರಸ್ವಾಮಿ ಹಾಗು ಮಾರಿದುರ್ಗಮ್ಮನವರ ದೇವಾಲಯದ ಪುನರ್ ಪ್ರತಿಷ್ಠಾಪನ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು.

ಶಾಸಕ ಸಿಮೆಂಟ್ ಮಂಜು ಅವರು ಮಾತನಾಡಿ, ಹಿಂದೂ ಧರ್ಮವು ಸಂಸ್ಕೃತಿ ಮತ್ತು ಸಂಪ್ರದಾಯಗಳ ಪ್ರತೀಕವಾಗಿದೆ. ಪ್ರತಿಯೊಬ್ಬರೂ ಸಂಸ್ಕೃತಿಯೊಂದಿಗೆ ಜೀವನ ನಡೆಸಿದಾಗ ಮಾತ್ರ ಜೀವನ ಸಾರ್ಥಕವಾಗುತ್ತದೆ. ಭಾರತೀಯ ಸಂಸ್ಕೃತಿಯನ್ನು ಇತರೆ ರಾಷ್ಟ್ರಗಳೂ ಅಳವಡಿಸಿಕೊಳ್ಳುತ್ತಿರುವುದು ಹೆಮ್ಮೆಯ ಸಂಗತಿ. ಪಾಲಕರು ಮಕ್ಕಳಿಗೆ ಬಾಲ್ಯದಿಂದಲೇ ಸಂಸ್ಕೃತಿ ಮತ್ತು ಧಾರ್ಮಿಕ ಮೌಲ್ಯಗಳನ್ನು ಬೋಧಿಸಬೇಕೆಂದು ಸಲಹೆ ನೀಡಿದರು.

ಹಿಂದೂ ಧರ್ಮದ ಆಚರಣೆಗಳಲ್ಲಿ ವೈಜ್ಞಾನಿಕತೆ ಅಡಗಿದೆ. ದ್ವೇಷ, ಅಸೂಯೆ ತೊರೆದು ಎಲ್ಲರನ್ನು ಸಾಮರಸ್ಯದಿಂದ ಕಾಣುವ ಮನೋಭಾವ ಬೆಳೆಸಿಕೊಳ್ಳಬೇಕು. ಹಿಂದೂ ಧರ್ಮದೊಂದಿಗೆ ಭಾರತದಲ್ಲಿ ಜನಿಸಿರುವುದು ನಮ್ಮ ಭಾಗ್ಯ ಎಂದು ಹೇಳಿದರು.

ವಕೀಲ ಛಲವಾದಿ ಡಿ.ಕರಿಯಣ್ಣ ಅವರು ಮಾತನಾಡಿ, ಭಾರತ ಮಾತೆ ತ್ಯಾಗ ಮತ್ತು ಬಲಿ ದಾನದ ಸಂಕೇತ. ದೇಶದ ಗೌರವವನ್ನು ಕಾಪಾಡುವ ಮನೋಭಾವ ಪ್ರತಿಯೊಬ್ಬರಲ್ಲೂ ಇರ ಬೇಕು. ಹಿಂದೂ ಧರ್ಮ ಮತ್ತು ಸಂಸ್ಕೃತಿಯನ್ನು ಹಾಳು ಮಾಡುವ ಪ್ರಯತ್ನಗಳಿಗೆ ಅವಕಾಶ ನೀಡದೆ ಒಗ್ಗಟ್ಟಿನಿಂದ ಎದುರಿಸಬೇಕಾಗಿದೆ ಎಂದು ತಿಳಿಸಿದರು.

ಚಿಂತಕ ಯಡೇಹಳ್ಳಿ ಆರ್. ಮಂಜುನಾಥ್ ಅವರು ಮಾತನಾಡಿ, ಹಿಂದೂಗಳು ಸಂಸ್ಕಾರ ಮತ್ತು ಸಂಸ್ಕೃತಿಯಲ್ಲಿ ಬದುಕಿದವರು. ಪಾಶ್ಚಾತ್ಯ ಸಂಸ್ಕೃತಿಯ ಅತಿಯಾದ ಅನುಕರಣೆಯಿಂದ ಭವ್ಯ ಪರಂಪರೆ ಹದಗೆಡುತ್ತಿದೆ. ತಾಯಂದಿರು ಮಕ್ಕಳಿಗೆ ಚಿಕ್ಕಂದಿನಿಂದಲೇ ಧಾರ್ಮಿಕ ಮೌಲ್ಯಗಳು ಮತ್ತು ಸದ್ವಿಚಾರಗಳನ್ನು ಕಲಿಸಬೇಕೆಂದರು.

ಹಿಂದೂ ಹಿತ ರಕ್ಷಣಾ ಸಂಘಟನೆಯ ಮುಖಂಡ ರಘು ಸಕಲೇಶಪುರ ಅವರು ಮಾತನಾಡಿ, ಸನಾತನ ಧರ್ಮ ಮತ್ತು ಸಂಸ್ಕೃತಿಯ ಸಂರಕ್ಷಣೆ ಪ್ರತಿಯೊಬ್ಬರ ಕರ್ತವ್ಯ ಎಂದರು.

ವೇದಿಕೆಯಲ್ಲಿ ಜಯರಾಜ್, ನಾಗೇಶ್, ಬಿ.ಎಂ.ಶಿವಕುಮಾರ್, ರಾಜಶೇಖರ್, ಚಂದ್ರಣ್ಣ, ಪುಟ್ಟಯ್ಯ ಹಾಗು ಇತರರಿದ್ದರು.

## 15 ಗ್ರಾಂ ಚಿನ್ನಾಭರಣ ಕಳವು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಮನೆ ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು 15 ಗ್ರಾಂ ತೂಕದ ಚಿನ್ನಾಭರಣ ಕಳವು ಮಾಡಿರುವ ಘಟನೆ ತಾಲ್ಲೂಕಿನ ಜಿನ್ನಾಥಪುರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ರಮೇಶ ಅವರು ಏ.27ರಂದು ಮನೆಗೆ ಬೀಗ ಹಾಕಿಕೊಂಡು ಪಟ್ಟಣದ ಆಸ್ಪತ್ರೆಗೆ ತೆರಳಿದ್ದರು. ವಾಪಾಸ್ ಮನೆಗೆ ಬಂದಾಗ ಬಾಗಿಲು ತೆರೆದಿರುವುದು ಗೊತ್ತಾಯಿತಾದರೂ ಆಸ್ಪತ್ರೆಗೆ ಹೋಗುವ ಧಾವಂತದಲ್ಲಿ ಹಾಗೆಯೇ ಬಿಟ್ಟಿರಬಹುದೆಂದು ಸುಮ್ಮನಿದ್ದರು. ಮೇ 3 ರಂದು ರಮೇಶ ಅವರ ಪತ್ನಿ ಸುಶೀಲ ಬೀರು ಪರಿಶೀಲಿಸಿದಾಗ ಚಿನ್ನಾಭರಣ ನಾಪತ್ತೆಯಾಗಿ ರುವುದು ತಿಳಿದಿದೆ. 5 ಗ್ರಾಂ ತೂಕದ ಒಂದು ಜೊತೆ ಚಿನ್ನದ ಓಲೆ, 5 ಗ್ರಾಂ ತೂಕದ ಒಂದು ಜೊತೆ ಚಿನ್ನದ ಮಾಟಿ, 3 ಗ್ರಾಂ ತೂಕದ ಚಿನ್ನದ ಸೈಡ್ ಮಾಟಿ ಮತ್ತು 2 ಗ್ರಾಂ ತೂಕದ ಸಣ್ಣಮಕ್ಕಳ 2 ಚಿನ್ನದ ಉಂಗುರ ಕಳುವಾಗಿದೆ. ಶ್ರವಣಬೆಳಗೊಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಟ್ರ್ಯಾಕ್ಟರ್ ಡಿಕ್ಕಿ : ವ್ಯಕ್ತಿ ಸಾವು

• ಪ್ರಜೋದಯ ವರದಿ

**ಹಾಸನ:** ಟ್ರಾಕ್ಟರ್ ಡಿಕ್ಕಿಯಾಗಿ ರಸ್ತೆಬದಿ ಕಾಲ್ನಡಿಗೆಯಲ್ಲಿ ಹೋಗುತ್ತಿದ್ದ ವ್ಯಕ್ತಿ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಕೋರವಂಗಲ ಸಮೀಪ ನಡೆದಿದೆ.

ದುದ್ದ ಹೋಬಳಿ ಸೋಮಹಳ್ಳಿ ಗ್ರಾಮದ ನಿಂಗರಾಜು (36) ಮೃತರು. ಮೇ 2ರಂದು ಕೂಲಿ ಕೆಲಸಕ್ಕೆಂದು ನಡೆದುಕೊಂಡು ಹೋಗುತ್ತಿದ್ದಾಗ ಟ್ರ್ಯಾಕ್ಟರ್ ಚಾಲಕ ಹರ್ಷ ಜೋರಾಗಿ ವಾಹನ ಓಡಿಸಿಕೊಂಡು ಬಂದು ಡಿಕ್ಕಿ ಮಾಡಿದ್ದಾನೆ. ಅಪಘಾತದ ರಭಸಕ್ಕೆ ನಿಂಗರಾಜು ಅವರು ಟ್ರ್ಯಾಕ್ಟರ್‌ನ ಹಿಂಭಾಗದ ಚಕ್ರಕ್ಕೆ ಸಿಲುಕಿ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ದುದ್ದ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಮನೆ ಬೀಗ ಮುರಿದು ಚಿನ್ನಾಭರಣ ಕಳವು

• ಪ್ರಜೋದಯ ವರದಿ

**ಹಾಸನ:** ಮನೆ ಬೀಗ ಮುರಿದು ಒಳಪ್ರವೇಶಿರುವ ಕಳ್ಳರು 48 ಗ್ರಾಂ ತೂಕದ ಚಿನ್ನಾಭರಣ ಹಾಗು 325 ಗ್ರಾಂ ಬೆಳ್ಳಿ ಆಭರಣ ಕದ್ದಿರುವ ಘಟನೆ ಅಶೋಕ ನಗರದಲ್ಲಿ ನಡೆದಿದೆ.

ಸುನೀತ ಹಾಗು ಅಶೋಕ ಎಂಬುವವರ ಮನೆಯಲ್ಲಿ ಮೇ 2ರ ಹಾಡಹಗಲೇ ಕಳ್ಳತನವಾಗಿದೆ. ದಂಪತಿಗಳಿಬ್ಬರು ಮನೆಗೆ ಬೀಗ ಹಾಕಿ ಸಂಬಂಧಿಕರ ಮನೆಗೆ ತೆರಳಿದ್ದರು. ಮಾರನೇ ದಿನ ಬಂದು ನೋಡಿದಾಗ ಬೀಗ ಮುರಿದು ಬೀರುವಿನಲ್ಲಿಟ್ಟಿದ್ದ ಚಿನ್ನಾಭರಣ ದೋಚಿರುವುದು ದೃಢಪಟ್ಟಿದೆ.

10ಗ್ರಾಂ ತೂಕದ ಚಿನ್ನದ ಓಲೆ, 4 ಗ್ರಾಂ ತೂಕದ ಕೆಂಪು ಹರಳಿನ ಓಲೆ, 4 ಗ್ರಾಂ ತೂಕದ ಬಿಳಿ ಹರಳಿನ ಓಲೆ, 8 ಗ್ರಾಂ ತೂಕದ ಕೆಂಪು ಹವಳದ 2 ಜೊತೆ ಓಲೆ, 5 ಗ್ರಾಂ ತೂಕದ ಕೆಂಪು ಹರಳಿನ ಓಲೆ, 3 ಗ್ರಾಂ ತೂಕದ ಹಾರ್ಟ ಶೇಪ್ ಓಲೆ, 3 ಗ್ರಾಂ ತೂಕದ ಉಂಗುರ, 2 ಗ್ರಾಂನ 1 ಉಂಗುರ, 6 ಗ್ರಾಂ ತೂಕದ ಮಕ್ಕಳ ಓಲೆ ಜುಮುಕಿ, 3ಗ್ರಾಂ ತೂಕದ ಒಂದು ಲಕ್ಷ್ಮೀ ಡಾಲರ್ ಹಾಗು 30 ಗ್ರಾಂ ತೂಕದ ಒಂದು ಬೆಳ್ಳಿ ಸರ, 50 ಗ್ರಾಂ ತೂಕದ ಲಾಂಗ್ ಸರ, 20 ಗ್ರಾಂ ತೂಕದ 2 ಬೆಳ್ಳಿ ಲೋಟ, 30 ಗ್ರಾಂ ತೂಕದ ಪಂಚಪತ್ರೆ, 50 ಗ್ರಾಂ ತೂಕದ 4 ಜೊತೆ ಬೆಳ್ಳಿ ದೀಪ, 50 ಗ್ರಾಂ ತೂಕದ 3 ಜೊತೆ ಕುಂಕುಮದ ಬಟ್ಟಲು, 35 ಗ್ರಾಂ ತೂಕದ 3 ಬೆಳ್ಳಿ ತಟ್ಟೆ, 20 ಗ್ರಾಂನ ಬೆಳ್ಳಿ ತಟ್ಟೆ, 40 ಗ್ರಾಂ ತೂಕದ ಮಕ್ಕಳ ಕಾಲು ಚೈನು ಕಳವು ಮಾಡಲಾಗಿದೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಅಧಿಕಾರದಲ್ಲಿದ್ದ ಏಕೈಕ ರಾಜ್ಯವನ್ನು ಕಳೆದುಕೊಂಡ ಕಮ್ಯುನಿಸ್ಟ್ ಪಕ್ಷ

• ಪ್ರಜೋದಯ ವರದಿ



**ನವದೆಹಲಿ:** ಕೇರಳ ವಿಧಾನಸಭಾ ಚುನಾವಣೆಯಲ್ಲಿ ಸಿಪಿಎಂ ನೇತೃತ್ವದ ಎಡ ಪ್ರಜಾಸತ್ತಾತ್ಮಕ ರಂಗ (ಎಲ್‌ಡಿಎಫ್) ಹೀನಾಯ ಸೋಲು ಅನುಭವಿಸಿದೆ. ಈ ಮೂಲಕ ಕಮ್ಯುನಿಸ್ಟ್ ಪಕ್ಷವು ಅಧಿಕಾರದಲ್ಲಿರುವ ಏಕೈಕ ರಾಜ್ಯವನ್ನೂ ಕಳೆದುಕೊಂಡಿದೆ.

ಮುಖ್ಯಮಂತ್ರಿ ಪಿಣರಾಯಿ ವಿಜಯನ್ ನೇತೃತ್ವದಲ್ಲಿ ಹತ್ತು ವರ್ಷ ಆಡಳಿತ ನಡೆಸಿದ್ದ ಸಿಪಿಎಂ ತನ್ನ ಆಂತರಿಕ ಸಮಸ್ಯೆಗಳು ಹಾಗು ಆಡಳಿತ ವಿರೋಧಿ ಅಲೆಯಿಂದ ಈ ಚುನಾವಣೆಯಲ್ಲಿ ಸೋಲು ಕಂಡಿದೆ. 2021ರಲ್ಲಿ ಪಿಣರಾಯಿ ಅವರ ಜನಪ್ರಿಯತೆಯನ್ನು ಬಳಸಿಕೊಂಡು 99 ಸ್ಥಾನಗಳಲ್ಲಿ ಗೆಲುವು ಸಾಧಿಸುವ ಮೂಲಕ ಕೇರಳದಲ್ಲಿ ಅಧಿಕಾರ ಉಳಿಸಿಕೊಂಡಿದ್ದ ಎಲ್‌ಡಿಎಫ್, ಪಿಣರಾಯಿ ಅವರ ವಿರೋಧಿ ಅಲೆಯಿಂದಾಗಿಯೇ ಈ ಬಾರಿ ದೊಡ್ಡ ಹೊಡೆತ ಅನುಭವಿಸಿದೆ.

2025ರ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಎಲ್‌ಡಿಎಫ್ ಸರ್ಕಾರದ ವಿರುದ್ಧದ ಆಡಳಿತ ವಿರೋಧಿ ಅಲೆ ಹೆಚ್ಚಾಗಿತ್ತು. ಪಿಣರಾಯಿ ಸರ್ಕಾರವು ಮಹಿಳೆಯರು ಮತ್ತು ಯುವಕರನ್ನು ಕೇಂದ್ರೀಕರಿಸಿ ಕಲ್ಯಾಣ ಕಾರ್ಯಕ್ರಮಗಳ ಮೂಲಕ ಆ ವಿರೋಧಿ ಅಲೆಯನ್ನು ಕಡಿಮೆ ಮಾಡಲು ಪ್ರಯತ್ನಿಸಿದರೂ ನಿರೀಕ್ಷಿತ ಫಲ ನೀಡಿರಲಿಲ್ಲ.

ಪಿಣರಾಯಿ ಅವರು ಹಲವು ಹಾಲಿ ಶಾಸಕರಿಗೆ ಟಿಕೆಟ್ ನೀಡದೆ ಮೂಲೆ ಗುಂಪು ಮಾಡಿದ್ದಾರೆಂಬ ಆರೋ ಪವೂ ಕೇಳಿಬಂದಿತ್ತು. ಇದು ಪಕ್ಷ ದೊಳಗೆ ಅಸಮಾಧಾನಕ್ಕೆ ಕಾರಣವಾಗಿತ್ತು.

**ಪಾಠ ಕಲಿಯದ ಸಿಪಿಎಂ**

ದೇಶದಲ್ಲಿ ಕೇರಳ ಹೊರತು ಪಡಿಸಿದರೆ ಸದ್ಯ ಯಾವ ರಾಜ್ಯದಲ್ಲೂ ಕಮ್ಯುನಿಸ್ಟ್ ಪಕ್ಷ ಅಧಿಕಾರದಲ್ಲಿ ಇರಲಿಲ್ಲ. 1969ರ ನವೆಂಬರ್‌ನಿಂದ ಈವರೆಗೆ ಕೇರಳ ಸೇರಿ ಕೆಲ ರಾಜ್ಯಗಳಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿತ್ತು. ಆದರೆ, ಕೇರಳದಲ್ಲಿ ಅಧಿಕಾರದಲ್ಲಿದ್ದ ಸಿಪಿಎಂ 2026ರ ವಿಧಾನಸಭಾ ಚುನಾವಣೆಯಲ್ಲಿ ಸೋಲುವ ಮೂಲಕ ಅಧಿಕಾರ ಕಳೆದುಕೊಂಡಿದೆ.

ಕೇರಳದಲ್ಲಿ ಪಕ್ಷದ ಮೇಲೆ ಪ್ರಭುತ್ವ ಸಾಧಿಸಿದ್ದ ಪಿಣರಾಯಿ ವಿಜಯನ್ ಅವರನ್ನು ನಿಯಂತ್ರಿಸಲು ವಿಫಲವಾದ ಸಿಪಿಎಂ ನಾಯಕತ್ವವೇ ಈ ಬೆಳವಣಿಗೆಗೆ ಮೂಲ ಕಾರಣವೆಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಈ ಬಾರಿ ಸಿಪಿಎಂ ಒಂದು ಸ್ಥಾನ ಗೆದ್ದಿದೆ. 2021ರಲ್ಲಿ ಒಂದು ಸ್ಥಾನವನ್ನೂ ಗೆಲ್ಲದ ಆ ಪಕ್ಷಕ್ಕೆ ಈ ಬಾರಿ ಒಂದು ಸ್ಥಾನ ಸಿಕ್ಕಿರುವುದು ತುಸು ಸಮಾಧಾನ ತಂದಿದೆ. ತಮಿಳುನಾಡಿನಲ್ಲಿಯೂ ಡಿಎಂಕೆ ಮೈತ್ರಿಕೂಟದ ಬೆಂಬಲದೊಂದಿಗೆ ಸಿಪಿಎಂ ಮತ್ತು ಸಿಪಿಐ ಪಕ್ಷಗಳು ಜಯಗಳಿಸಿವೆ. 2011ರಲ್ಲಿ ಪಶ್ಚಿಮ ಬಂಗಾಳದಲ್ಲಿ ಅಧಿಕಾರ ಕಳೆದುಕೊಂಡ ನಂತರವೂ ಆ ಪಕ್ಷವು ಪಾಠ ಕಲಿತಂತೆ ಕಾಣುತ್ತಿಲ್ಲ. ಅದೇ ತಪ್ಪುಗಳನ್ನು ಪುನರಾವರ್ತಿಸುತ್ತಿದೆ ಎಂದು ವಿಶ್ಲೇಷಕರು ಹೇಳುತ್ತಿದ್ದಾರೆ.

ಕೇರಳದಲ್ಲಿ ಪಿಣರಾಯಿ ವಿಜಯನ್ ಅವರೇ ಅಧಿಕಾರದ ಕೇಂದ್ರ ಬಿಂದುವಾಗಿದ್ದಾರೆ. ಇದು ಎಡಪಕ್ಷಗಳ ಸಿದ್ಧಾಂತಕ್ಕೆ ವಿರುದ್ಧವಾಗಿ, ಪಕ್ಷದ ಒಳಗಿನ ನಿಯಂತ್ರಣ ವ್ಯವಸ್ಥೆಯನ್ನು ದುರ್ಬಲ ಗೊಳಿಸಿ ಅಧಿಕಾರವು ಒಬ್ಬರಲ್ಲೇ ಕೇಂದ್ರೀಕೃತವಾಗಲು ಕಾರಣವಾಗಿದೆ.

## ಹೊಸ ಬಸ್ ನಿಲ್ದಾಣ ಎದುರು 69 ಲ.ರೂ. ವೆಚ್ಚದಲ್ಲಿ ಫುಡ್ ಕೋರ್ಟ್



• ಪ್ರಜೋದಯ ವರದಿ

**ಹಾಸನ:** ನಗರದ ಹೊಸ ಬಸ್ ನಿಲ್ದಾಣದ ಎದುರು ಫುಡ್ ಕೋರ್ಟ್ ನಿರ್ಮಾಣಕ್ಕೆ ಶಾಸಕ ಹೆಚ್.ಪಿ.ಸ್ವರೂಪ್ ಅವರು ಮುಂದಾಗಿದ್ದು ಸೋಮವಾರ ಭೂಮಿಪೂಜೆ ನೆರವೇರಿಸಿದರು.

ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ 35 ಲ.ರೂ., ಸಿಎಂಐಡಿಪಿ ಅನುದಾನದಡಿ 29 ಲ.ರೂ. ಹಾಗು ಶಾಸಕರ ಸ್ಥಳೀಯ ಕ್ಷೇತ್ರಾಭಿವೃದ್ಧಿ ಯೋಜನೆಯಡಿ 5 ಲ.ರೂ. ಸೇರಿ 69 ಲ. ರೂ. ವೆಚ್ಚದ ಕಾಮಗಾರಿ ಇದಾಗಿದೆ. ಹೊರ ಜಿಲ್ಲೆ ಹಾಗು ತಾಲ್ಲೂಕುಗಳಿಂದ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಬರುವುದರಿಂದ ಗುಣಮಟ್ಟದ ಆಹಾರ ಕಲ್ಪಿಸಬೇಕು. ಸ್ಥಳೀಯ ವ್ಯಾಪಾರಿಗಳಿಗೆ ಅನುಕೂಲ ಮಾಡಿಕೊಡಬೇಕೆಂಬ ಗುರಿ ಹಾಕಿಕೊಳ್ಳಲಾಗಿತ್ತು. ಅದರಂತೆ ಫುಡ್ ಕೋರ್ಟ್ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ನಿಗದಿತ ಅವಧಿಯೊಳಗೆ ಕಾಮಗಾರಿ ಪೂರ್ಣಗೊಳ್ಳಲಿದೆ. ಗುಣಮಟ್ಟದ ಆಹಾರ ಒದಗಿಸುವುದು ವ್ಯಾಪಾರಿಗಳ ಆದ್ಯತೆಯಾಗಬೇಕು. ಸಾರ್ವಜನಿಕರು ಹೋಟೆಲ್‌ಗಳನ್ನು ಅರಸಿ ದೂರದ ಹೋಟೆಲ್‌ಗಳಿಗೆ ಅಲೆಯುವುದನ್ನು ತಪ್ಪಿಸಲು ಇಲ್ಲಿ ಫುಡ್ ಕೋರ್ಟ್ ನಿರ್ಮಿಸಲಾಗುತ್ತಿದೆ ಎಂದರು. ಸ್ಥಳೀಯ ಮುಖಂಡರು, ಕಾರ್ಯಕರ್ತರು, ವ್ಯಾಪಾರಿಗಳು ಇದ್ದರು.

## ಐಸಿಎಸ್‌ಇ ಪರೀಕ್ಷೆಯಲ್ಲಿ ಶೇ.100 ಫಲಿತಾಂಶ



• ಪ್ರಜೋದಯ ವರದಿ

**ಹಾಸನ:** ನಗರದ ಸ್ಕಾಲರ್ಸ್ ಇಂಟರ್ ನ್ಯಾಷನಲ್ ಶಾಲೆಯು ಪ್ರಸಕ್ತ ಸಾಲಿನ ಐಸಿಎಸ್‌ಇ ಪರೀಕ್ಷೆಯಲ್ಲಿ ಶೇ.100 ರಷ್ಟು ಫಲಿತಾಂಶ ಸಾಧಿಸಿದೆ.

ಶಾಲೆಯಲ್ಲಿ ಸೋಮವಾರ ಪರೀಕ್ಷೆ ಬರೆದ 31 ವಿದ್ಯಾರ್ಥಿ ಹಾಗು ಪೋಷಕರನ್ನು ಅಭಿನಂದಿಸಲಾಯಿತು. ಶೇ.97 ಫಲಿತಾಂಶದೊಂದಿಗೆ ವಿದ್ಯಾರ್ಥಿನಿ ವೈ.ಬಿ.ಜನ್ಯ ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ. 31 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿ ಸಂಸ್ಥೆಯ ಹಿರಿಮೆ ಹೆಚ್ಚಿಸಿದ್ದಾರೆ.

ಶಾಲೆಯ ಆಡಳಿತಾಧಿಕಾರಿ ಡಾ. ಹೆಚ್. ಎನ್. ಚಂದ್ರಶೇಖರ್ ಅವರು ಮಾತನಾಡಿ, ಮಕ್ಕಳ ಸರ್ವಾಂಗೀಣ ಏಳಿಗೆಯ ಉದ್ದೇಶದಿಂದ ಸ್ಕಾಲರ್ಸ್ ಇಂಟರ್ ನ್ಯಾಷನಲ್ ಸ್ಕೂಲ್ ಕೆಲಸ ಮಾಡುತ್ತಿದೆ. ಅಂಕ ಗಳಿಕಗೆ ಮಾತ್ರ ಆದ್ಯತೆ ನೀಡದೆ ವ್ಯಕ್ತಿತ್ವ ವಿಕಸನ, ಪ್ರತಿಭಾನ್ವೇಷಣೆಗೆ ವೇದಿಕೆ ಕಲ್ಪಿಸಲಾಗುತ್ತಿದೆ ಎಂದರು. ಶಿಕ್ಷಣ ಸಂಸ್ಥೆ ಸಂಸ್ಥಾಪಕಿ ಲಕ್ಷ್ಮೀನಾಗರಾಜು, ಕಾರ್ಯದರ್ಶಿ ಮಮತಾ ಚಂದ್ರಶೇಖರ್ ಇತರರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019